ಜನಶಕ್ತಿ



ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 40
ಸೆಪ್ಟೆಂಬರ್ 30, 2012
ಪುಟ 16 ರೂ. 5/-
Blog :janashakthi.wordpress.com e-mail : js_weekly@yahoo.com

ದೇಶವ್ಯಾಪಿ ಹರತಾಳಕ್ಕೆ ವ್ಯಾಪಕ ಜನ ಬೆಂಬಲ





ಜಾನುವಾರು ಕಾಯ್ದೆ : ಅಡ್ಡ ಹಾದಿಯಲ್ಲಿ ಷಡ್ಯಂತ್ರದ ಸಾಧನೆ !

ಕಾವೇರಿ : ಭಾವೋದ್ರೇಕ ಬೇಡ





ಟೆಹರಾನ್‌ನಲ್ಲಿ ಅಲಿಪ್ತ ಶೃಂಗಸಭೆ : ರಾಜತಾಂತ್ರಿಕ ಮುನ್ನಡೆ

ಗುಲ್ಬರ್ಗಾ : ವರದಕ್ಷಿಣೆ ವಿರೋಧಿ ಅಭಿಯಾನ

ಅಪೌಷ್ಠಿಕತೆ ನಿವಾರಣೆ : ಬದುಕುವ ಹಕ್ಕಿಗಾಗಿ ಸಮಾವೇಶ

ಜನಶಕ್ತಿ
ಕನ್ನಡ ವಾರಪತ್ರಿಕೆ

ಗುಲ್ಬರ್ಗಾ ಜಿಲ್ಲೆಯಾದ್ಯಂತ ವರದಕ್ಷಿಣೆ ವಿರೋಧಿ ಅಭಿಯಾನ

ನೀಲಾ.ಕೆ

ಮಾತೃ ಪ್ರಧಾನ ವ್ಯವಸ್ಥೆ ಅಳಿಸಿ ಹೋಗಿ ಪಿತೃ ಪ್ರಧಾನ ಸಮಾಜ ಹುಟ್ಟಿಕೊಂಡ ಬೆನ್ನಲ್ಲಿಯೇ ವರದಕ್ಷಿಣೆ ಎಂಬ ಅನಿಷ್ಟ ದಾಗುಂಡಿಯಿಟ್ಟು ಇಂದು ದೊಡ್ಡ ಪಿಡುಗಾಗಿ ಬೆಳೆದಿದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಬಿ. ಸುರೇಶ ಕಳವಳ ವ್ಯಕ್ತಪಡಿಸಿದರು. ಗುಲ್ಬರ್ಗಾ ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ, ಪ್ರಜ್ಞಾ



ವೇದಿಕೆಯಲ್ಲಿ ಗಣ್ಯರು


ಕಾನೂನು ಸಲಹಾ ಸಮಿತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಶಿಕ್ಷಕಿಯರ ವೇದಿಕೆ ಸಂಯುಕ್ತವಾಗಿ 'ಅಪಮಾನದ ವರದಕ್ಷಿಣೆ ಬೇಡ, ಸ್ವಾಭಿಮಾನದ ಆಸ್ತಿ ಹಕ್ಕು ಬೇಕು' ಎಂಬ ಘೋಷವಾಕ್ಯದೊಂದಿಗೆ ವಿಶ್ವವಿದ್ಯಾಲಯದ ಮಹತ್ಮಾಗಾಂಧಿ ಸಭಾಂಗಣದಲ್ಲಿ ಹಮ್ಮಿಕೊಂಡ ವರದಕ್ಷಿಣೆ ವಿರೋಧಿ ಅಭಿಯಾನ 2012 ಉದ್ಘಾಟನಾ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಮಾತೃ ಪ್ರಧಾನ ಸಮಾಜ ವ್ಯವಸ್ಥೆಯಿದ್ದಾಗ ವರದಕ್ಷಿಣೆ ಸಮಸ್ಯೆ ಇರಲಿಲ್ಲ. ಕನ್ಯಾ ಶುಲ್ಕ (ತೆರವು) ಕೊಟ್ಟು ಮನೆ ತುಂಬಿಸಿಕೊಳ್ಳುವ ಪದ್ಧತಿಯಿತ್ತು. ಈಗ ಅದು ಪೂರಾ ಉಲ್ಟಾ ಆಗಿದೆ. ಶೈಕ್ಷಣಿಕವಾಗಿ ನಾವು ಇಷ್ಟೊಂದು ಮುಂದುವರೆದರೂ ಈ ಸಾಮಾಜಿಕ ಅನಿಷ್ಟವನ್ನು ತೊಡೆದು ಹಾಕಲು ನಮಗೆ ಆಗುತ್ತಿಲ್ಲವೆಂದ ಮೇಲೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ದೊಡ್ಡ ಬದಲಾವಣೆ ತರುವುದು ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಜಿಲ್ಲಾ ಮಟ್ಟದ ವರದಕ್ಷಿಣೆ ವಿರೋಧಿ ಅಭಿಯಾನಕ್ಕೆ ಚಾಲನೆ ನೀಡಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ಎಚ್. ನಾಗವೇಣಿ ಮಾತನಾಡಿ, ಪ್ರತಿಷ್ಠಿತ ಕುಟುಂಬದೊಂದಿಗೆ ಬೀಗಸ್ತನ ಮಾಡಬೇಕೆಂಬ ದುರಾಸೆಯಿಂದ ಅನೇಕರು ವರದಕ್ಷಿಣೆ ನೀಡುತ್ತಾರೆ. ಇದು ಒಳ್ಳೆಯದಲ್ಲ. ಇಂದಿನ ಯುವಕರು ತಾವೇ ಸ್ವಯಂ ಬದಲಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ. ನೀಲಾ ಅವರು ಮಾತನಾಡಿ ಜಿಲ್ಲೆಯಲ್ಲಿ ಪ್ರತಿನಿತ್ಯ ವರದಕ್ಷಿಣೆಗಾಗಿ ಗಂಡನ ಮನೆಯವರು ಹೆಣ್ಣು ಮಕ್ಕಳನ್ನು ಹಿಂಸಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಮದುವೆಗೆ ವರದಕ್ಷಿಣೆ ಕೊಡಲಾಗದೆ ಹಲವೆಡೆ ವಯಸ್ಸಿಗೆ ಬಂದ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ನೆಪದಲ್ಲಿ ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಿಗೆ ಮಾರಾಟ ಮಾಡಲಾಗುತ್ತಿದೆ. ಹೆಣ್ಣು ಮಗುವಿನ ಜನನವಾದರೆ ಕೀಳರಿಮೆಯಿಂದ ಕಾಣುವ ಪರಿಸ್ಥಿತಿ ಹೆಚ್ಚಾಗಿದೆ. ವರದಕ್ಷಿಣೆ ಎಂಬ ಮಹಾಮಾರಿಯನ್ನು ಮೂಲೋಚ್ಚಾಟನೆ ಮಾಡಲು ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಡಾ. ರಮೇಶ್ ಲಂಡನ್‌ಕರ್ ಜಿಲ್ಲೆಯಾದ್ಯಂತ ವರದಕ್ಷಿಣೆ ವಿರೋಧಿ ಅಭಿಯಾನವನ್ನು ಸೆಪ್ಟೆಂಬರ್ 8 ರಿಂದ 20 ರ ವರೆಗೆ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ 55 ಕ್ಕೂ ಹೆಚ್ಚು ಕಾಲೇಜುಗಳಲ್ಲಿ ನಡೆಸಲು



ಅಭಿಯಾನಕ್ಕೆ ಅಭೂತಪೂರ್ವ ಪ್ರತಿಕ್ರಿಯೆ

ನಿರ್ಧರಿಸಲಾಗಿದ್ದು ವಿದ್ಯಾರ್ಥಿಗಳಲ್ಲಿ ವರದಕ್ಷಿಣೆ ಪದ್ಧತಿ ವಿರೋಧಿ ಜಾಗೃತಿ ಮೂಡಿಸುವ ಉದ್ದೇಶ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದರು. ಆರಂಭದಲ್ಲಿ ಸುಶೀಲ ಕಟ್ಟಿ ಸ್ವಾಗತಿಸಿದರು ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಅಧ್ಯಕ್ಷೆ ಡಾ. ಮೀನಾಕ್ಷಿ ಬಾಳಿ ಆಶಯ ಭಾಷಣ ಮಾಡಿದರು. ಶಾಂತಾ ಮಠ ವಂದಿಸಿದರು.

ಸೆ. 9 ರಂದು ನಗರದ ಶರಣ ಬಸವೇಶ್ವರ ಮಹಾವಿದ್ಯಾಲಯ ಮತ್ತು ಮಾತೋಶ್ರೀ ಗೋದುತಾಯಿ ಪದವಿ ಮಹಾವಿದ್ಯಾಲಯಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಡಾ. ವಿಕ್ರಮ್ ವಿಸಾಜಿ, ಡಾ. ರಮೇಶ ಲಂಡನಕರ್, ಡಾ. ಶರಣಪ್ಪ ಸೈದಾಪುರ ಮಾರುತಿ ಮಾರವಳ್ಳಿ ಹಾಗೂ ನೀಲಾ.ಕೆ ಭಾಗವಹಿಸಿ ಉಪನ್ಯಾಸ ನೀಡಿದರು. ಎರಡನೇ ದಿನ ನಗರದ ನಾಲ್ಕು ಕಾಲೇಜುಗಳಲ್ಲಿ ಅಭಿಯಾನದ ಕಾರ್ಯಕ್ರಮ ನಡೆದವು. ಡಾ. ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ ಡಾ. ಕೃಷ್ಣಪ್ಪ, ನೀಲಾ.ಕೆ, ಡಾ.ಖೇಮಣ್ಣ ಅಲ್ದಿ ಮತ್ತು ಕಾಲೇಜಿನ ಪ್ರಾಚಾರ್ಯರಾದ ಡಾ. ಬಸವರಾಜ ಕುಮನೂರ್ ಭಾಗವಹಿಸಿ ಮಾತನಾಡಿದರು. ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಡಾ. ಅನಿಲ್‌ಕುಮಾರ್, ಡಾ.ರಮೇಶ್ ಲಂಡನಕರ್, ಡಾ. ವಿದ್ಯಾಸಾಗರ, ಶ್ರೀ ಮಹಿಪಾಲ ರೆಡ್ಡಿ ಮುನ್ನೂರ ಮತ್ತು ಪ್ರಾಚಾರ್ಯರಾದ ಪ್ರೊ. ಎಲೆನೂರ ಗೀತಮಾಲ ಉಪನ್ಯಾಸ ನೀಡಿದರು. ಎಂ.ಎಸ್.ಐ ಕಾಲೇಜಿನಲ್ಲಿ ಡಾ.ಮೀನಾಕ್ಷಿ ಬಾಳಿ, ಡಾ. ಚಂದ್ರಕಲಾ ಬಿದರಿ, ಡಾ.ಶರಣಪ್ಪ ಸೈದಾಪುರ ಮತ್ತು ಪ್ರಾಚಾರ್ಯರಾದ ಪ್ರೊ. ಎಂ.ಜಿ.ಕೊಳೆಸೂರ ಪಾಲ್ಗೊಂಡು ಮಾತನಾಡಿದರು. ಎನ್.ವಿ. ಪದವಿ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ್. ಪ್ರೊ. ಶಿವಶರಣಪ್ಪ ಮುಳೆಗಾಂವ್, ಡಾ. ರಮೇಶ್ ಲಂಡನಕರ್ ಮತ್ತು ಡಾ. ಆನಂದ ಕಿತ್ತೂರ್ ಭಾಗವಹಿಸಿ ಮಾತನಾಡಿದರು.

ಮಹಾತ್ಮ ಜ್ಯೋತಿಬಾ ಫುಲೆ ಮಹಾವಿದ್ಯಾಲಯದಲ್ಲಿ ಡಾ. ಮೀನಾಕ್ಷಿ ಬಾಳಿ ಮತ್ತು ಸೋನುಬಾಯಿ ಕೋಣೆನ್ ಅವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಬಿ. ಪಾಟೀಲ್ ಅಧ್ಯಕ್ಷತೆವಹಿಸಿದ್ದರು. ನ್ಯಾಷನಲ್ ಪದವಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ವಿದ್ಯಾರ್ಥಿಗಳ ಸಭೆಯಲ್ಲಿ ಡಾ. ಕಾಶಿನಾಥ ಅಂಬಲಗೆ, ಮೆಹರಾಜ ಪಾಟೀಲ್ ಹಾಗೂ ಬಬ್ಬರ್ ಎನ್. ಕಮಕನೂರ ಮಾತನಾಡಿದರು. ವರದಕ್ಷಿಣೆಯು ಇಂದು ಮುಸ್ಲಿಂ ಸಮುದಾಯದ ನಡುವೆಯೂ ತಲೆಎತ್ತುತ್ತಿದೆ. ಇಸ್ಲಾಂನಲ್ಲಿ ವಧುವಿಗೆ ಮೆಹರ್ ಕೊಡುವ ಪದ್ಧತಿ ಇದ್ದದ್ದು. ವರದಕ್ಷಿಣೆ ಯಾವ ಕಾಲಕ್ಕೂ ಇರಲಿಲ್ಲ. ಆದರೆ ಇಂದು ವರದಕ್ಷಿಣೆ ಪಿಡುಗು ಇಲ್ಲಿಯೂ ಪ್ರವೇಶ ಪಡೆದಿದೆ ಎಂದು ಭಾಷಣಕಾರರು ಖೇದ ವ್ಯಕ್ತಪಡಿಸಿದರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಫಸಿಹಾ ಬಾನು ಅಧ್ಯಕ್ಷತೆ ವಹಿಸಿದ್ದರು. ಎಚ್.ಕೆ.ಇ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಾ. ಮೀನಾಕ್ಷಿ ಬಾಳಿ ಮತ್ತು ಸೋನಾ ಕೋಣೆನ್ ಮಾತನಾಡಿದರು ಪ್ರಾಚಾರ್ಯರಾದ ಪ್ರೊ. ಜಯರಾಜ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ವಿವೇಕಾನಂದ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಕಾಲೇಜಿನಲ್ಲಿ ಡಾ. ಅರುಣಕುಮಾರ ಪಾಟೀಲ್. ಮತ್ತು ಡಾ.ಸೋಭಾ ಚಕ್ಕಿಯವರು ಮುಖ್ಯ ಅತಿಥಿಗಳಾಗಿದ್ದರು. ಪ್ರಾಚಾರ್ಯರಾದ ಪ್ರೊ. ಪ್ರವೀಣ್ ನಾಯಕ್ ಅಧ್ಯಕ್ಷತೆವಹಿಸಿದ್ದರು. ವಿಜಯ ವಿದ್ಯಾಲಯ ಕಾಲೇಜಿನಲ್ಲಿ ಡಾ. ವಿಕ್ರಮ ನಿಸಾಜಿ ಮತ್ತು ಸುಶೀಲಾ ಕಟ್ಟಿಯವರು ಉಪನ್ಯಾಸ ನೀಡಿದರು. ಪ್ರಾಚಾರ್ಯರಾದ ಪ್ರೊ. ಬಿ.ಕೆ.ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಎಂ.ಎಂ.ಕೆ ವಿಜ್ಯೂವಲ್ ಆರ್ಟ್ಸ್ ಕಾಲೇಜಿನಲ್ಲಿ ಡಾ. ಶಾಂತಾ ಮಠ ಹಾಗೂ ಡಾ. ಸೂರ್ಯಕಾಂತ ಸುಜ್ಯಾತ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಇದರಂತೆಯೇ ಬಿ.ಬಿ. ರಜಿಯಾ ಮಹಿಳಾ ಮಹಾವಿದ್ಯಾಲಯ, ವಿ.ಜಿ.ಮಹಿಳಾ ಮಹಾವಿದ್ಯಾಲಯ , ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯ, ಆಳಂದ ತಾಲ್ಲೂಕ ಮದನ್ ಹಿಪ್ಪರಗಾದ ಶ್ರೀ ಶಿವಲಿಗೇಶ್ವರ ಸರ್ಕಾರಿ ಪದವಿ ಕಾಲೇಜ್ ಮತ್ತು ಪದವಿ ಪೂರ್ವ ಕಾಲೇಜ್‌ಗಳಲ್ಲಿ ಅಭಿಯಾನದ ಅಂಗವಾಗಿ ಸರಣಿ ಉಪನ್ಯಾಸಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಅಭಿಯಾನ ಸೆ. 20 ರ ವರೆಗೂ ಜಿಲ್ಲೆಯಾದ್ಯಂತ ನಡೆಯಿತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ನರೇಂದ್ರ ಮೋದಿ ಪರ ವಕಾಲತ್ತು

ಗುಜರಾತ್‌ನ ನರೋಡಾ ಪಟಿಯಾದಲ್ಲಿ 2002 ರಲ್ಲಿ ನಡೆದ 97 ಜನ ಅಲ್ಪಸಂಖ್ಯಾತರ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಮಾಜಿ ಸಚಿವೆ, ಹಾಲಿ ಶಾಸಕಿ ಮತ್ತು ಮುಖ್ಯಮಂತ್ರಿ ನರೇಂದ್ರ ಮೋದಿಗೆ ಆಪ್ತರಾಗಿರುವ ಮಾಯಾಬೆನ್ ಕೊಡ್ನಾನಿಗೆ 28 ವರ್ಷ ಮತ್ತು ಭಜರಂಗ ದಳದ ಮುಖಂಡ ಬಾಬು ಬಜರಂಗಿಗೆ ಜೀವಿತಾವಧಿ ಜೈಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯ ತೀರ್ಪು ನೀಡಿದ ನಂತರವೂ ಕರ್ನಾಟಕವೂ ಸೇರಿದಂತೆ ದೇಶದ ಹಲವಡೆ ಮೋದಿ ಪರ ವಕಾಲತ್ತು ಮುಂದುವರೆದಿದೆ. ಮೋದಿಯನ್ನು ಮುಂದಿನ ಪ್ರಧಾನಿ ಎಂದು ಬಿಂಬಿಸಲು ಹೊರಟವರಿಗೆ ಈ ತೀರ್ಪಿನಿಂದ ಭಾರೀ ಮುಖಭಂಗವಾಗಿದ್ದರೂ ಅದನ್ನು ತೋರಿಸಿಕೊಳ್ಳದೆ ಮೋದಿ ಸಮರ್ಥನೆಗೆ ನಿಂತು ಬಿಟ್ಟಿದ್ದಾರೆ.

ಕರ್ನಾಟಕದಲ್ಲಿ ಒಂದೆರಡು ರಾಜ್ಯ ಮಟ್ಟದ ದಿನಪತ್ರಿಕೆಗಳು ತಮ್ಮ ಪ್ರತಿಯೊಂದು ಸಂಚಿಕೆಯ ಕನಿಷ್ಟ ನಾಲ್ಕಾರು ಪುಟಗಳನ್ನೇ ಮೋದಿ ಮುಂತಾದವರ ಸಮರ್ಥನೆಗಾಗಿ ಮೀಸಲಾಗಿರಿಸಿದಂತೆ ಕಾಣುತ್ತದೆ. ಇತ್ತೀಚಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಯು.ಆರ್. ಅನಂತಮೂರ್ತಿಯವರು ಮೋದಿಯನ್ನು ಕ್ರೂರಿ ಎಂದು ಬಣ್ಣಿಸಿದ್ದನ್ನು ಮತ್ತು ಮೋದಿ ಪ್ರಧಾನಿ ಆದರೆ ನಾಚಿಕೆಗೇಡು ಎಂದು ಹೇಳಿದ್ದನ್ನು ಆ ವಲಯದಲ್ಲಿ ತೀವ್ರ ಟೀಕೆಗೆ ಗುರಿಪಡಿಸಲಾಗುತ್ತಿದೆ. ವಾಕ್ ಸ್ವಾತಂತ್ರ್ಯದ ಭಾಗವಾಗಿ ಮೋದಿಯನ್ನು ಟೀಕಿಸುವ ಹಕ್ಕು ಅನಂತಮೂರ್ತಿಯವರಿಗಿದೆ. ಹಾಗೆಯೇ ಅನಂತಮೂರ್ತಿಯವರನ್ನು ಟೀಕಿಸುವ ಹಕ್ಕು ಉಳಿದವರಿಗೆ ಇದೆ. ಆದರೆ ಟೀಕೆ ಆರೋಗ್ಯಕರವಾಗಿರಬೇಕು.

ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕ್ರೂರಿ ಎಂದು ಬಣ್ಣಿಸಿರುವ ಯು.ಆರ್.ಅನಂತಮೂರ್ತಿ ಒಬ್ಬ ಮಹಾ ಮೂರ್ಖ, ಅವಿವೇಕಿ, ವಿಚಾರದಾರಿದ್ರ್ಯ ಸಾಹಿತಿ ಎಂದು ಟೀಕಿಸುವುದು ಎಷ್ಟರ ಮಟ್ಟಿಗೆ ಸರಿ ? 'ಇವರಿಗೇಕೆ ಬೇಕು ಈ ರಾಜಕೀಯ' ಎಂದು ಕೇಳುತ್ತಾರೆ. ಬರೆಯುವುದನ್ನು ಬಿಟ್ಟು ರಾಜಕೀಯ ಮಾಡುವ ಅವಶ್ಯಕತೆ ಇಲ್ಲ ಎಂದು ಆದೇಶ ನೀಡುತ್ತಾರೆ. ಅನಂತಮೂರ್ತಿ ಪೂರ್ವಗ್ರಹಪೀಡಿತರು. ಗುಜರಾತ್ ಬಗ್ಗೆ ಅವರಿಗೇನೂ ಗೊತ್ತಿಲ್ಲ ಎಂದು ಆರೋಪಿಸಲಾಗುತ್ತದೆ.

ಯು.ಆರ್. ಅನಂತಮೂರ್ತಿಯವರು ಮೋದಿಯನ್ನು ಕ್ರೂರಿ ಎಂದು ಬಣ್ಣಿಸಿರಬಹುದು. ಅದರಲ್ಲಿ ಏನಿದೆ ತಪ್ಪು ? ಕಾಡುಗಳ ವೀರಪ್ಪನ್ ಕ್ರೂರ ನರಹಂತಕ ಎಂದು ಕುಖ್ಯಾತನಾಗಿದ್ದ. 166 ಜನರ ಹತ್ಯೆಗೆ ಕಾರಣನಾದ ಕಸಾಬ್‌ನನ್ನು ಮಹಾಕ್ರೂರಿ ಉಗ್ರ ಎಂದು ತೀರ್ಮಾನಿಸಿ ಗಲ್ಲು ಶಿಕ್ಷೆಗೆ ಗುರಿಪಡಿಸಲಾಗಿದೆ. 2000 ಕ್ಕೂ ಹೆಚ್ಚು ಜನ ಅಮಾಯಕರ ಸಾಮೂಹಿಕ ಹತ್ಯಾಕಾಂಡ ನಡೆಯುತ್ತಿದ್ದಾಗ, ಮುಖ್ಯಮಂತ್ರಿ ಮೋದಿ, ಅವರ ಸಚಿವ ಸಂಪುಟದ ಸದಸ್ಯರು ಮತ್ತು ಹಿರಿಯ ಅಧಿಕಾರಿಗಳು ಕಂಟ್ರೋಲ್ ರೂಮಿನಲ್ಲಿ ಕುಳಿತು ಗಲಭೆಕೋರರನ್ನು ತಡೆಯದಂತೆ ಪೊಲೀಸರಿಗೆ ಸೂಚನೆ ನೀಡಿದ್ದ ಮೋದಿಯನ್ನು 'ಕ್ರೂರಿ' ಎಂದಲ್ಲದೆ ಇನ್ನೇನೆಂದು ಬಣ್ಣಿಸಲು ಸಾಧ್ಯ ? ಸುಪ್ರೀಂ ಕೋರ್ಟ್ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸಿದ 9 ಪ್ರಕರಣಗಳಲ್ಲಿ ನರೋದಾ ಪಟಿಯಾ ಪ್ರಕರಣ ಒಂದು. ಇನ್ನೂ 8 ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ. ಮುಖ್ಯಮಂತ್ರಿ ನರೇಂದ್ರ ಮೋದಿ ಎಷ್ಟೇ ಕೊಡವಿಕೊಂಡರೂ ಗುಜರಾತ್ ಕೋಮು ಗಲಭೆಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಯಾವ ಪ್ರಮಾಣದ ಕ್ರೌರ್ಯವೆಸಗಿದವನಿಗೆ ಕ್ರೂರಿ ಎನ್ನಬಹುದು ? ಹಿಟ್ಲರ್ ಮಹಾ ಕ್ರೂರಿ. ಆ ವರಗೆ ಹಿಟ್ಲರ್‌ನಷ್ಟು ಕ್ರೂರಿ ಇನ್ನೊಬ್ಬ ಇರಲಿಲ್ಲ. ಭವಿಷ್ಯದಲ್ಲಿಯೂ ಅಂತಹ ಒಬ್ಬ ಮಹಾಕ್ರೂರಿ ಬೆಳೆದು ಬರುವುದನ್ನು ತಡೆಗಟ್ಟಬೇಕಾದರೆ ಗುಜರಾತಿನ ನರೇಂದ್ರ ಮೋದಿಯನ್ನು ಹದ್ದುಬಸ್ತಿಗೆ ತರಲೇಬೇಕು. ಆತನನ್ನು ದೇಶದ ಪ್ರಧಾನಿ ಮಾಡುವುದೆಂದರೆ ಭಾರತದ ನೆಲದಲ್ಲಿ ಇನ್ನೊಬ್ಬ ಹಿಟ್ಲರ್ ಹುಟ್ಟಿದಂತೆ ! ಹಿಟ್ಲರ್‌ನನ್ನೇ ಆದರ್ಶವಾಗಿಸಿಕೊಂಡಿರುವ ಆರೆಸ್ಸೆಸ್‌ನ ಕಟ್ಟಾಳು ನರೇಂದ್ರ ಮೋದಿಗೆ ಹಿಟ್ಲರ್‌ನ ಹೆಜ್ಜೆಯಲ್ಲಿ ಹೆಜ್ಜೆ ಇಡಲು ಹೆಚ್ಚು ಸಮಯ ಬೇಕಾಗದು. ಈಗಾಗಲೇ ನರೇಂದ್ರ ಮೋದಿ ಗುಜರಾತ್ ರಾಜ್ಯವನ್ನು ಹಿಂದು ಹಿಟ್ಲರ್‌ಶಾಹಿಯ ಪ್ರಯೋಗ ಶಾಲೆಯನ್ನಾಗಿಸಿದ್ದಾನೆ. ಅದನ್ನೇ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ವಿಸ್ತರಿಸುವ ಅವಕಾಶಕ್ಕಾಗಿ ಕಾಯುತ್ತಿದೆ ಹಿಂದು ಹಿಟ್ಲರ್ ಪಡೆ.


'ದಯೆಯೇ ಧರ್ಮದ ಮೂಲ' ಎಂದು ವಿಶ್ವಕ್ಕೆ ಸಾರಿದ ಬಸವಣ್ಣನವರ ಹೆಸರನ್ನು (ಮಾತ್ರ) ಇಟ್ಟುಕೊಂಡಿರುವ ಧಾರವಾಡದ ಸ್ವಾಮಿಗಳೊಬ್ಬರು ನರೇಂದ್ರ ಮೋದಿ

ಪುಟ 15 ಕ್ಕೆ

ಜಾನುವಾರು ಸಂರಕ್ಷಣಾ ಕಾಯ್ದೆ:

ಅಡ್ಡ ಹಾದಿಯಲ್ಲಿ ಷಡ್ಯಂತ್ರದ ಸಾಧನೆ !

ಈ ಮಸೂದೆ ಇನ್ನೂ ಕಾದು ಕುಳಿತಿರುವಾಗಲೇ ಅದೇ ಕೆಲವು ಪ್ರಸ್ತಾವಗಳನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು, ಸರಕಾರ ಹೊರಟಿದೆಯೆಂದರೆ ಅದರ ಉದ್ದೇಶ ಸರಳವಿಲ್ಲ ಮತ್ತು ಸುಸೂತ್ರವೂ ಅಲ್ಲ ಎಂಬುದು ಸ್ಪಷ್ಟ. ಶಾಸಕಾಂಗದಲ್ಲಿ ಮತ್ತು ಸಾರ್ವಜನಿಕವಾಗಿ ಭಾರೀ ವಿರೋಧವಿದ್ದರೂ ಲೆಕ್ಕಿಸದೇ 2010 ಜೂನ್ 16 ರಂದು ಕರ್ನಾಟಕ ಜಾನುವಾರು ಹತ್ಯೆ ನಿರ್ಭಂಧ ಮತ್ತು ಜಾನುವಾರು ಸಂರಕ್ಷಣಾ ಮಸೂದೆಯನ್ನು ಧ್ವನಿ ಮತದಿಂದ ಅಂಗೀಕರಿಸಲಾಯಿತು. ಮತ್ತು ರಾಜ್ಯಪಾಲರ ಅಂಗೀಕಾರಕ್ಕಾಗಿ ಕಳುಹಿಸಲಾಯಿತು. ಅವರು ಅದರಲ್ಲಿನ ಹಲವಾರು ವಿವಾದಾತ್ಮಕ, ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗುವಂತಹ ಅಂಶಗಳನ್ನು ಗುರುತಿಸಿ ರಾಷ್ಟ್ರಪತಿಗಳ ಪರಿಶೀಲನೆ ಮತ್ತು ಅಂಗೀಕಾರಕ್ಕೆ ಕಳುಹಿಸಿದ್ದರು. ಅಲ್ಲದೇ ಕೇಳಲಾದ ಕೆಲವು ಸ್ಪಷ್ಟನೆಗಳಿಗೆ ರಾಜ್ಯ ಸರಕಾರ ಉತ್ತರವನ್ನೂ ನೀಡಿದೆ. ಇಂತಹ ಪ್ರಕ್ರಿಯೆ ನಡೆದಿರುವಾಗಲೇ ಈಗ ಇದ್ದಕ್ಕಿದ್ದಂತೆ ಹಿಂದಿನ 1964 ರ ಕಾಯ್ದೆಗೆ ಹಲವು ತಿದ್ದುಪಡಿಗಳನ್ನು ಸೂಚಿಸಿ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿ ಸಾರ್ವಜನಿಕ ಆಕ್ಷೇಪಗಳಿಗೆ ಆಹ್ವಾನಿಸಿರುವುದರ ಅರ್ಥವೇನು?



ವಿವಾದ, ದ್ವೇಷದ ಕಿಚ್ಚು

ಗೋವುಗಳು, ಅದರ ಸಂತತಿಯ ರಕ್ಷಣೆಯ ಹಿತಕ್ಕಿಂತ ಗೋಸಂರಕ್ಷಣೆಯ ವಿಷಯದಿಂದ ಉಂಟು ಮಾಡುವ ವಿಭಜನೆಯಿಂದ ದೊರೆಯುವ ರಾಜಕೀಯ ಲಾಭ ಮತ್ತು ಸಾಮಾಜಿಕ ಪರಿಣಾಮಗಳತ್ತಲೇ ಆರೆಸ್ಸೆಸ್ ಮತ್ತದರ ಪರಿವಾರ ಬಿಜೆಪಿಗೆ ಗಮನವಿರುವುದು ತಿಳಿದದ್ದೇ. ದೇಶದ ಉದ್ದಗಲಕ್ಕೂ, ನಮ್ಮ ಕರ್ನಾಟಕದಲ್ಲಿಯೂ ಅಮಾಯಕ ಹಸುವಿನ ಹೆಸರಿನಲ್ಲಿ ಹಿಂಸೆ ,ಮಾರಣ ಹೋಮದ ಘಟನೆಗಳು ನಡೆಯುತ್ತಲೇ ಬಂದಿವೆ. ಈಗಲೂ ಕರಾವಳಿ ಒಳಗೊಂಡು ಹಲವೆಡೆ ಇಂತಹ ಕಿಚ್ಚು ಆ ವಾತಾವರಣವನ್ನು ಕಲುಷಿತಗೊಳಿಸಿ ಸದಾ ಕುದಿಯುವಂತೆಯೇ ಇರಿಸಿದೆ. 'ಇವೆಲ್ಲಾ ವಿವಿಧ ಜನಸಮುದಾಯಗಳ ನಡುವೆ ವಿದ್ವೇಷ, ವಿಭಜನೆಯನ್ನು ತಂದಿದ್ದು ಇನ್ನಷ್ಟು ವಿಸ್ತರಿಸಬೇಕು, ವಿದ್ವೇಷದ ಕಿಚ್ಚು ಅದರ ಕಾವು ನಾಳಿನ ಚುನಾವಣೆಯಲ್ಲಿ ಮತಗಳಾಗಿ ಮತ್ತೇ ಅಧಿಕಾರಕ್ಕೆ ಏರಿಸುವಂತಾಗಬೇಕು' ಎಂಬುದು ಅವರ ಲೆಕ್ಕಾಚಾರ. ಹೀಗಾಗಿಯೇ ವಿಧಾನಸಭಾ ಚುನಾವಣೆಯ ನಿರೀಕ್ಷೆಯಲ್ಲಿರುವ ಬಿಜೆಪಿಯು ಕೇಂದ್ರದ ಅಂಗೀಕಾರ ಸಿಗುವವರೆಗೂ ಕಾಯಲು ಸಿದ್ಧವಿಲ್ಲ, ಆದ್ದರಿಂದ ಮತ್ತೇ ಈ ವಿಷಯವನ್ನು ವಿವಾದದ ಕೇಂದ್ರ ಸ್ಥಾನಕ್ಕೆ ತರಲು ನಿರ್ಧರಿಸಿದೆ.

ಗೂಂಡಾಗಳ ಕೈಗೆ ಸಂವಿಧಾನದ ದಂಡ !

ಹೀಗಾಗಿಯೇ 1964 ರ ಕಾಯ್ದೆಯ ಬದಲಿಗೆ ತರ ಹೊರಟಿದ್ದ 2010 ರ ಮಸೂದೆಯ ಮೂಲಕ ಸಾಧಿಸಬೇಕೆಂಬುದನ್ನೇ ಈಗ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರಲು ಹವಣಿಸುತ್ತಿದೆ. ಆ ಮಸೂದೆ ಮೂಲತಃ ಹಸು ಸಂರಕ್ಷಣೆ ಅಥವಾ ಸಂತತಿ ಬೆಳವಣಿಗೆಯ ಉದ್ದೇಶವನ್ನು ಹೊಂದಿದ್ದೇನಲ್ಲ. ಅಂತಹ ಉದ್ದೇಶವಿದ್ದರೆ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಮಗ್ಗಲುಗಳಲ್ಲಿ ಪರಿಶೀಲಿಸಿ ಸಮಂಜಸ ಕ್ರಮ ವಹಿಸಬಹುದಿತ್ತು, ಪ್ರಸ್ತಾವಗಳನ್ನು ಕೈ ಬಿಡಬಹುದಿತ್ತು . ಬದಲಾಗಿ ಅದು ಕೃಷಿಯ – ಕೃಷಿಕರ ವಿರೋಧಿ. ಸಂಕಷ್ಟದಲ್ಲಿರುವ ರೈತರನ್ನು ಇನ್ನಷ್ಟು ಕಷ್ಟಗಳಿಗೆ ದೂಡುವಂತಹುದು. ಅದು ಶತ ಶತಮಾನಗಳಿಂದ ದನದ ಮಾಂಸವನ್ನು ಆಹಾರವಾಗಿ ಬಳಸುತ್ತಾ ಬಂದ ಎಲ್ಲರ ಮುಖ್ಯವಾಗಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಒಳಗೊಂಡ ಎಲ್ಲಾ ಧರ್ಮೀಯ ಜನತೆಯ ಆಹಾರದ ಪ್ರಜಾಸತ್ತಾತ್ಮಕ ಹಕ್ಕಿನ ಮೇಲೆ ನಡೆಸಲಾದ ಫ್ಯಾಸಿಸ್ಟ್ ಧಾಳಿ. ಮಾತ್ರವಲ್ಲ ಕೋಮು ಸಾಮರಸ್ಯ ಕದಡಲು, ಅಲ್ಪಸಂಖ್ಯಾತರನ್ನೇ ಗುರಿಯಾಗಿಸಿ ಧಾಳಿ ಎಸಗುವ, ಕೋಮುವಾದೀ ಅಜೆಂಡಾ ಜಾರಿಯ ಗುರಿಯನ್ನು ಹೊಂದಿರುವಂತಹದು. ಈಗಾಗಲೇ ಸ್ವಯಂ ನೈತಿಕ ಪೋಲೀಸ್ ಗಿರಿಯನ್ನು ನಡೆಸುತ್ತಿರುವ ಸಂಘಪರಿವಾರದ ಗೂಂಡಾಗಿರಿಗೆ ರಕ್ಷಣೆ ನೀಡುವ, ಎಂತಹ ಅಮಾಯಕರನ್ನು -ಕ್ರಿಮಿನಲ್‌ಗಳೆಂದು ಸಾರಿ ವಿಪರೀತ ಶಿಕ್ಷೆಯ ವ್ಯಾಪ್ತಿಗೆ ತರಬಲ್ಲ ಅವಕಾಶವುಳ್ಳದ್ದಾಗಿದೆ.

ಗೋ ಆಯೋಗ ಮತ್ತು ಹಿಡನ್ ಅಜೆಂಡಾಗಳು

ಈ ಮಸೂದೆಯಲ್ಲಿ ಹಸು, ಕರು, ಎತ್ತುಗಳ ಜೊತೆಗೆ ಎಮ್ಮೆಯನ್ನೂ ಸೇರಿಲಾಗಿದ್ದನ್ನು ತಿದ್ದುಪಡಿ ಮಾಡಲು ರಾಷ್ಟ್ರಪತಿಗಳು ಕೇಳಿದ್ದರು. ಇದನ್ನು ಸರಿ ಮಾಡಿ ಕಳುಹಿಸಿ ಅಂಗೀಕಾರ ಪಡೆಯುವುದಾಗಿ ಹೇಳಿದ್ದ ಸರಕಾರ ದಿಢೀರನೇ ಹೊಸ ಪ್ರಸ್ತಾಪಗಳನ್ನು ಇರಿಸಿದೆ. ಈಗ ತರ ಹೊರಟಿರುವ 1964 ರ ಕಾಯ್ದೆಯಲ್ಲೂ ಅಧಿನಿಯಮ 2 ರ 2 ಬಿಯಲ್ಲಿ ಗೋವು ವಧೆ ನಿಷೇದ ಇದೆ. ಇದರೊಟ್ಟಿಗೆ ಎತ್ತು –ಹೋರಿಯನ್ನೂ ಸೇರಿಸಿ ಸುಗ್ರೀವಾಜ್ಞೆ ತರಲು ಸಚಿವ ಸಂಪುಟ ನಿರ್ಧರಿಸಿದೆ. ಅಲ್ಲದೇ ಒಂದು 'ಗೋ ಸೇವಾ ಆಯೋಗ'ವನ್ನು ರಚಿಸಲು ಸಹ ನಿರ್ಧರಿಸಿರುವುದು ಗಂಭೀರ ಕ್ರಮವಾಗಿದೆ.

ಮೊದಲನೆಯದಾಗಿ ದನಗಳನ್ನು ಆಹಾರಕ್ಕಾಗಿ ಬಳಸುವುದನ್ನು ನಿರ್ಭಂದಿಸುವುದೇ ಅರ್ಥಹೀನ. ಇದರೊಟ್ಟಿಗೆ ಎತ್ತು, ಎಮ್ಮೆ ಸೇರಿಸುವುದು ದುರುದ್ದೇಶವುಳ್ಳದ್ದಾಗಿದೆ. ಹಿಂದಿನ ಕಾಯ್ದೆಯಲ್ಲಿ 12 ವರ್ಷ ದಾಟಿದ, ದುಡಿಯಲು ಅಸಮರ್ಥವಾಗಿರುವ ದನಗಳನ್ನು ಮಾರಲು, ವಧಿಸಲು ಅವಕಾಶವಿರುವುದಕ್ಕೆ ಈ ಸರಕಾರದ ವಿರೋಧವಿದೆ. ಅಂದರೆ ಅದು ಸಾಯುವವರೆಗೂ

ಪುಟ 15 ಕ್ಕೆ

ಕಣ್ಣು ಬಿಡುವುದೇ ಕಷ್ಟವಾಗಿರುವ ಹೆಣ್ಣು ಮಗುವಿನ ಕತೆ......

ಸೆಪ್ಟೆಂಬರ್ 24, 2012 ವಿಶ್ವ ಹೆಣ್ಣು ಮಗುವಿನ ದಿನಾಚರಣೆ ನಡೆಯುತ್ತಿದೆ. ನಮ್ಮ ಸಮಾಜದಲ್ಲಿ ಕಣ್ಣು ಬಿಡುವುದೇ ಕಷ್ಟವಾಗಿರುವ ಹೆಣ್ಣು ಮಕ್ಕಳ ಪರಿಸ್ಥಿತಿ... ಹೆಣ್ಣು ಮಕ್ಕಳ ಮೇಲೆ, ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತ ಒಂದು ಅವಲೋಕನ ಈ ಸಂದರ್ಭದಲ್ಲಿ.

ಆರ್.ರಾಮಕೃಷ್ಣ
ಮುರುಗೇಶ್.ವಿ.ಕರ್ಕಿಕಟ್ಟಿ

'ಹೊಸ ಹಾದಿ ಹಳ್ಳಿ' ಅಂತ ಆ. ಗ್ರಾಮದ ಹೆಸರು. ಈ ಹಳ್ಳಿಯಲ್ಲಿ ನಡೆದ ಈ ಘಟನೆ ನೋಡಿ ನಮ್ಮ ಸಮಾಜ ಯಾವ 'ಹೊಸ ಹಾದಿ'ಯತ್ತ ಚಲಿಸುತ್ತಿದೆ ಎಂದು ನಾವು 'ಚಿಂತೆ' ಮಾಡಬೇಕಾಗಿದೆ.

ಅದೊಂದು ಇಪ್ಪತ್ತು ದಿನದ ಮಗು. ಬಹುಶ: ಇನ್ನೂ ನಾಮಕರಣ ಕೂಡ ಆಗಿರಲಿಲ್ಲ. ಹಾಗಾಗಿ ಅದಕ್ಕೆ ಹೆಸರು ಕೂಡ ಇಲ್ಲ.

ಹೌದು ಅದು ಹೆಣ್ಣು ಮಗು. ಅದು ಗಂಡು ಮಗುವಾಗಿದ್ದಿದ್ದರೆ ಈ ಪರಿ ಸುದ್ದಿಯಾಗುವ 'ಭಾಗ್ಯ' ಆ ಮಗುವಿಗೆ ಎಲ್ಲಿ ತಾನೆ ಸಿಗುತ್ತಿತ್ತು. !!

ಅಮ್ಮ ಸವಿತಾ. ಅಪ್ಪ ನಂದೀಶ. ಮಗು ಹುಟ್ಟಿದ ಮೇಲೆ ಮಗುವಿನ ಜಾತಕ ದೋಷದಿಂದ ತಂದೆಗೆ ಅಪಾಯವಿದೆ ಅಂತ ಯಾರೋ ಜ್ಯೋತಿಷಿಯೊಬ್ಬ ಹೇಳಿದನಂತೆ.

ಅದು ಆಗಸ್ಟ 20, 2012. ಅಸ್ವಸ್ಥಗೊಂಡಿದ್ದ ಮಗು ಆಸ್ಪತ್ರೆಗೆ ತೆಗೆದು ಕೊಂಡು ಹೋಗುವ ದಾರಿಯಲ್ಲಿ ಕಣ್ಣು ಮುಚ್ಚಿ ಬಿಟ್ಟಿತು. ಅಯ್ಯೋ !! ಜನ್ಮ ನೀಡಿದ ಅಪ್ಪನೇ ಹಾಲಿನಲ್ಲಿ ವಿಷ ಬೆರೆಸಿ ಕುಡಿಸಿ ಬಿಟ್ಟಿದ್ದ. ಬಾಳಿ ಬದುಕ ಬೇಕಾದ ಹೂವಿನಂತಹ ಮುಗ್ಧ ಕೂಸೊಂದು ಕಮರಿ ಹೆತ್ತವಳ ಕಣ್ಣ ಮುಂದೆಯೇ ಮಣ್ಣು ಪಾಲಾಗಿ ಹೋಯಿತು.

ತಾಯಿಯೇನೋ ಗಟ್ಟಿಗಿತ್ತಿ. ಗಂಡನ ನಡವಳಿಕೆ ಬಗೆಗೆ ಸಂಶಯ ಬಂದು ಪೊಲೀಸರಿಗೆ ದೂರು ಕೊಟ್ಟಿದ್ದರಿಂದ 'ಗುಟ್ಟು' ಬಯಲಾಯಿತು. ಮಾನವೀಯ ಮೌಲ್ಯದ ರಕ್ಷಣೆಗಾಗಿ ತನ್ನ ಬದುಕಿನ ಎಷ್ಟೋ ಅಮೂಲ್ಯ ಸುಖ ಸಂತೋಷಗಳನ್ನು ಕಳೆದು ಕೊಳ್ಳಲು ಸಿದ್ಧಳಾದ ತಾಯಿಯ ತ್ಯಾಗ, ಧೈರ್ಯದಿಂದ ಕೊಲೆಪಾತಕಿ ಈಗ ಕಂಬಿಗಳ ಹಿಂದೆ ಇದ್ದಾನೆ.

ಆದರೆ ಎಷ್ಟೋ ಪ್ರಕರಣಗಳಲ್ಲಿ ಆಗುತ್ತಿರುವಂತೆ 'ಸಂಸಾರದ ಗುಟ್ಟು' ಹೊರಗೆ ಯಾಕೆ 'ರಟ್ಟು' ಮಾಡಬೇಕು ಅಂತ ಕೊರಳಿನ ತಾಳಿಯನ್ನು ಮುಟ್ಟಿ ನೋಡಿಕೊಂಡು ಆ ತಾಯಿ 'ಹೇಗೋ' ನೋವು ನುಂಗಿಕೊಂಡು ಸುಮ್ಮನಾಗಿ ಬಿಟ್ಟಿದ್ದಿದ್ದರೆ ಏನಾಗುತ್ತಿತ್ತು.

ಏನೂ ಆಗುತ್ತಿರಲಿಲ್ಲ.....

ಯಾವ ಪತ್ರಿಕೆ, ಕ್ರೈಂ ಡೈರಿ, ಕ್ರೈಂ ನ್ಯೂಸ್‌ಗಳಲ್ಲಿಯೂ, ಯಾವ ಪೊಲೀಸ್ ಠಾಣೆಯ ಕಡತಗಳಲ್ಲಿಯೂ ದಾಖಲಾಗದೇ 'ಮಣ್ಣಲ್ಲಿ ಮಣ್ಣಾಗಿ' ಹೋಗುತ್ತಿರುವ ಸಾವಿರ ಸಾವಿರ ಸಂಖ್ಯೆಯ ಹೆಣ್ಣು ಮಕ್ಕಳ ಸಾಲಿಗೆ ಹೊಸ ಹಾದಿ ಹಳ್ಳಿಯ ಈ ಹೆಸರಿಲ್ಲದ ಪುಟ್ಟ ಕಂದನೂ ಸೇರುತ್ತಿತ್ತು ಅಷ್ಟೆ. ಪ್ರಕರಣವನ್ನು ತ್ಯಾಮಗೊಂಡ್ಲು ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿಸಿದ್ದಕ್ಕೆ ಈಗ ಒಂದಷ್ಟು ಪತ್ರಿಕೆಗಳಲ್ಲಿ ಈ 'ಹೆಣ್ಣು ಕೂಸು' ಸುದ್ದಿಯಾಗಿ 'ಮಿಂಚು'ತ್ತಿದೆ.

ಪುಟ ಪುಟಗಳಲ್ಲೂ ರಕ್ತ, ಕಣ್ಣೀರು,

ಅದು ಜುಲೈ_ಆಗಸ್ಟ್ 2012ರ ಸಮಯ. ದಿನದಲ್ಲಿ ಹಲವು ಪತ್ರಿಕೆಗಳನ್ನು ನೋಡುವ ಅವಕಾಶವಿರುವವರು, ನೋಡ ಬೇಕಾದವರು, ಪತ್ರಿಕೆಗಳನ್ನು ಒಂದು ಕಡೆ ರಾಶಿ ಹಾಕಿಕೊಂಡು ಏನೇನೋ ಹುಡುಕಬೇಕಾದವರು ದಿನ ದಿನವೂ, ಕೈಗೆ ಸಿಕ್ಕ ಪ್ರತಿ ಪತ್ರಿಕೆಯ ಪುಟಗಳಲ್ಲೂ ಒಂದು ನಿರ್ದಿಷ್ಟ ವಿಷಯದ ಸುದ್ದಿ ಹಾಗೂ ಫೋಟೋಗಳನ್ನು ನೋಡಿ ಬೆಚ್ಚಿ ಬೀಳುವ ಪರಿಸ್ಥಿತಿ. ಯಾವ ದಿನ ಪತ್ರಿಕೆಗಳ ಪುಟ ತಿರುವಿದರೂ ಸಾಕು. ಹೆಣ್ಣು ಮಗುವಿನ ಅತ್ಯಾಚಾರ, ಬಾಲಕಿಯ ಅಪಹರಣ, ವರದಕ್ಷಿಣೆಗಾಗಿ ಕೊಲೆ, ವರದಕ್ಷಿಣೆ ಕಿರುಕುಳ ತಾಳದೆ ಮಹಿಳೆ ಆತ್ಮಹತ್ಯೆ, ಶಿಶು ಕಾಮಿಯ ಬಂಧನ, ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ, ಶಿಕ್ಷಕನಿಂದ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ, ಪ್ರೀತಿಸಲು ನಿರಾಕರಿಸಿದ್ದಕ್ಕೆ ಬಾಲಕಿಗೆ ಆಸಿಡ್ ಎರಚಿದ ವಿಕೃತ ಪ್ರೇಮಿ...., ಇತ್ಯಾದಿ ಇತ್ಯಾದಿ ಸಾಲು ಸಾಲು ಸುದ್ದಿಗಳು.

ಟಿವಿ ಚಾನೆಲ್‌ಗಳನ್ನು ನೋಡಲು ಕೂತರೆ... ಅಸ್ಸಾಂನಲ್ಲಿ ಪುಂಡರ ಹಿಂಡು ನಡು ಬೀದಿಯಲ್ಲಿ ಯುವತಿಯನ್ನು ಹಿಂಸಿಸಿ ಮಾನಭಂಗ ಮಾಡುವ ದೃಶ್ಯಾವಳಿಗಳು, ಅದು ನೋಡಲಾಗದೇ ಪತ್ರಿಕೆಗಳ ಕಡೆಗೆ ಹೊರಳಿದರೆ ಯಶವಂತಪುರ- ಮೈಸೂರು ರೈಲಿನೊಳಗೆ ಗಾರ್ಮೆಂಟ್ ಉದ್ಯೋಗಿ ಮೈಸೂರಿನ ಆಶಾರನ್ನು ಹಿಂಸಿಸಿ, ಆಕೆ ಪ್ರತಿಭಟಿಸಿದಾಗ ಹಲ್ಲೆ ಮಾಡಿ ಚಲಿಸುವ ರೈಲಿನಿಂದ ಆಕೆಯನ್ನು ಆಚೆ ತಳ್ಳಿದ ಅಮಾನುಷ ಪ್ರಕರಣದ ವರದಿ. ಅದರ ಬೆನ್ನ ಹಿಂದೆಯೇ ದಕ್ಷಿಣ ಕನ್ನಡದ ಹಿಂದೂ ಕಲಿಗಳು ಹುಟ್ಟು ಹಬ್ಬದ ಪಾರ್ಟಿಗೆ ನುಗ್ಗಿ ನಡೆಸಿದ ಅನಾಗರಿಕ ಹಿಂಸೆ, ನೀಚ ಲೈಂಗಿಕ ದೌರ್ಜನ್ಯ, ಮಾನಭಂಗದ ವರದಿಗಳು... ಸೆಪ್ಟೆಂಬರ್ 24, ವಿಶ್ವ ಹೆಣ್ಣು ಮಗುವಿನ ದಿನಾಚರಣೆಯಂತೆ.

ಮತ್ತೆ ನೆನಪಾಗಿದ್ದು ಅದೇ. ಏನು ಹುಡುಕಲು ಹೋದರೂ ಅಡ್ಡ ಬಂದು ಮತ್ತೆ ಮತ್ತೆ ಕೈಗೆ ಸಿಕ್ಕಿ ಮನಸ್ಸನ್ನು ಚುಚ್ಚುತ್ತಿರುವ ಅವೇ ಪೇಪರ್‌ಗಳು. ಅವೇ ಟೈಟಲ್‌ಗಳು. ಕೊನೆಗೆ ಜುಲೈ 1 ರಿಂದ ಆಗಸ್ಟ್ 1ರ ವರೆಗೆ



ರಾಜ್ಯದ ಕೆಲವು ಪತ್ರಿಕೆಗಳಲ್ಲಿ ಕಾಣಿಸಿಕೊಂಡ ಸುದ್ದಿಗಳಲ್ಲಿ ಕೆಲವು ತುಣುಕುಗಳನ್ನು ಹೆಕ್ಕಿ ಉದಾಹರಣೆಗಳಂತೆ ಕೊಡೋಣ ಅಂದುಕೊಂಡಾಗ ಸಿಕ್ಕಿದ್ದು ಮುಂದಿನ ಕೆಲವು ವರದಿಗಳು. ಸಿಕ್ಕ ಎಲ್ಲ ವರದಿಗಳನ್ನು ಕೊಟ್ಟಿಲ್ಲ. ನಿರ್ದಿಷ್ಟವಾಗಿ ಈ ಅವಧಿಯ ಹೆಣ್ಣಿನ ಆತ್ಮ ಹತ್ಯೆಗಳ ವರದಿಗಳನ್ನು ಕೊಟ್ಟಿಲ್ಲ. ಏಕೆಂದರೆ ಪಟ್ಟಿ ಅಷ್ಟು ದೊಡ್ಡದಿದೆ. ಕುಡುಕ ಗಂಡನ ಕಾಟ ತಾಳದೆ ಮಕ್ಕಳನ್ನು ಬಾವಿಗೆ ತಳ್ಳಿ ತಾನೂ ಬಾವಿಗೆ ಬಿದ್ದ, 'ಆತ್ಮಹತ್ಯೆ' ಎನ್ನಲಾಗುವ ತಣ್ಣನೆಯ ಕಗ್ಗೊಲೆಗಳ ಸಾಲು ಹನುಮಂತನ ಬಾಲದಂತೆ ಇದೆ. ಅವುಗಳನ್ನು ಬಿಟ್ಟೂ ಎಷ್ಟೊಂದು 'ಸಮೃದ್ಧ' ವರದಿಗಳು ಸಿಕ್ಕಿವೆ ನೋಡಿ.

ಇಲ್ಲಿ ಪ್ರಕರಣಗಳನ್ನು ಹೆಣ್ಣು ಮಗು, ಯುವತಿ, ಮಹಿಳೆ ಅಂತೇನು ಭಾಗ ಮಾಡಲು ಹೋಗಿಲ್ಲ.

ಯಾಕೆಂದರೆ ಭ್ರೂಣ ಹತ್ಯೆಯಿಂದ ಆರಂಭಗೊಂಡು ಅತ್ಯಾಚಾರ, ಆಸಿಡ್ ಎರಚುವುದರಲ್ಲಿ ಮುಂದುವರಿದು, ಮುದುಕಿಯೊಬ್ಬಳನ್ನು ತುತ್ತು ಅನ್ನ ನೀಡುವ ಮನಸ್ಸಿಲ್ಲದೇ ಮನೆಯಿಂದ ದೂರ ಎಲ್ಲೋ ತಂದು ಕಾಲುವೆಗೆ ನೂಕಿ ಸತ್ತಳು ಅಂದುಕೊಂಡು ಹೋಗುವ ಕ್ರೌರ್ಯದವರೆಗೆ ಕೆಲಸ ಮಾಡುವುದು ಒಂದೇ ಮನಸ್ಸು. ಅದು ಒಂದೇ ವ್ಯವಸ್ಥೆ.

ಇನ್ನಿಲ್ಲವಾದ ಉಪ್ಪಿಟ್ಟು 'ಕಳ್ಳಿ' ಶ್ವೇತಾ

ಬೆಂಗಳೂರು ನಗರದ ಶೇಷಾದ್ರಿಪುರದಲ್ಲಿ ಕಟ್ಟಡದ ಮೂರನೇ ಮಹಡಿಯಿಂದ 'ಕೆಳಗೆ ಬಿದ್ದು' ಸಾವಿಗೀಡಾದ ಹದಿನೈದು ವರ್ಷದ ಶ್ವೇತ 'ಕಳ್ಳಿ'ಯಂತೆ.



ತಂದೆ ಇಳ್ಳೈ ಮತ್ತು ತಾಯಿ ಗೀತಾ ಕೂಲಿ ಕೆಲಸ ಮಾಡಿ ಜೀವನ ನಡೆಸುವವರು. ಬಟ್ಟೆ ಅಂಗಡಿಯೊಂದರ ಮಾಲೀಕನ ಮನೆಯಲ್ಲಿ ಶ್ವೇತಾ ಕೆಲಸಕ್ಕೆ ಸೇರಿದಾಗ ಹತ್ತು ಸಾವಿರ ರೂಪಾಯಿ ಕೊಟ್ಟಿದ್ದರಂತೆ. ಮಗಳನ್ನು ನೋಡಲು ಹೋದಾಗ ಕೆಲವೊಮ್ಮೆ ಎರಡು ಮೂರು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರಂತೆ. ಆದರೆ ಸಹಿ ಹಾಕಿಸಿಕೊಂಡಿರುವುದು ಮೂವತ್ತು ಸಾವಿರಕ್ಕಂತೆ. ಈ ನಡುವೆ 'ಉಪ್ಪಿಟ್ಟು' ಕದ್ದಿದ್ದಾಳೆಂಬ 'ಘೋರ' ಆರೋಪಕ್ಕೆ ಗುರಿಯಾದ ಶ್ವೇತ ಜೀವಂತವಾಗಿ ತಂದೆ ತಾಯಿಗಳಿಗೆ ಸಿಗಲೇ ಇಲ್ಲ.

ವಿಜಯ ಕರ್ನಾಟಕದ ಜುಲೈ-28 ಪತ್ರಿಕೆಯ ಪುಟ-9 ರಲ್ಲಿ ಪಾಲಕರ ಎದುರಲ್ಲೇ ಅತ್ಯಾಚಾರ ಎಂಬ ತಲೆ ಬರಹದಡಿ ಒಂದು ಎದೆ ಬಿರಿಯುವಂತಹ ವರದಿ.

ತಂದೆ ತಾಯಿ ಹಣೆ ಮೇಲೆ ಪಿಸ್ತೂಲು ಇಟ್ಟು ಹೆದರಿಸಿ ಅವರ 18 ವರ್ಷದ ಮಗಳ ಮೇಲೆ ಅತ್ಯಾಚಾರ ಎಸಗಿ ಕ್ರೌರ್ಯ ಮೆರೆದರಂತೆ ನೀಚರು. ಅಘಾತಕಾರಿ ಸುದ್ದಿ ಯಾದಗೀರ್‌ನಿಂದ.

ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ತೋಟದ ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿಯ ಮೇಲೆ ಇಬ್ಬರು ಯುವಕರು ಅತ್ಯಾಚಾರ ನಡೆಸಿ ಜೀವ ಬೆದರಿಕೆ ಹಾಕಿ ಹೋದರಂತೆ. ತಾಲ್ಲೂಕಿನ ಸೂಳೆಭಾವಿ ಮೊರಾರ್ಜಿ ಶಾಲೆಯಲ್ಲಿ ಕಲಿಯುತ್ತಿರುವ ಬಾಲಕಿ ಪಂಚಮಿ ಹಬ್ಬಕ್ಕೆ ಊರಿಗೆ ಬಂದಿದ್ದಾಗ ಈ ಗತಿ.

ಕನ್ನಡಪ್ರಭ-ಜುಲೈ 2-2012 ರ ವರದಿ ಹೇಳುತ್ತಿದೆ.

ಮಕ್ಕಳ ಮೇಲೆ ಅತ್ಯಾಚಾರ: ಬೆಂಗಳೂರ ನಂ-1

ರಾಜ್ಯದಲ್ಲಿ ಮಕ್ಕಳ ಮೇಲೆ ನಡೆವ ದೌರ್ಜನ್ಯ, ಅಪರಾಧಗಳಲ್ಲಿ ಬೆಂಗಳೂರು ನಗರದ ಪಾಲು ಶೇ. 15.79 ಇದೆಯಂತೆ. ಮಕ್ಕಳ ಮೇಲಿನ ಶೋಷಣೆಯಲ್ಲಿ ಬೆಂಗಳೂರಿಗೆ ದೇಶದಲ್ಲಿ ಎರಡನೇ ಸ್ಥಾನ. ಮಕ್ಕಳ ಶೋಷಣೇ ಎಂದಾಗ ಅದರಲ್ಲಿ ಗಂಡು ಮಕ್ಕಳಿದ್ದರೂ ಹೆಣ್ಣು ಮಕ್ಕಳಿಗೆ ಈ ವಿಷಯದಲ್ಲಿ ಸಿಂಹ ಪಾಲು ಎಂಬುದರಲ್ಲಿ ಅನುಮಾನವೇನಿಲ್ಲ.

ರಾಜ್ಯದಲ್ಲಿ 'ಸೇವ್ ಗರ್ಲ್ ಚೈಲ್ಡ್ ಅಭಿಯಾನ'-'ಹೆಣ್ಣು ಮಕ್ಕಳನ್ನು ಉಳಿಸಿ' ಅಭಿಯಾನದ ಪ್ರಕಾರ ಹೆಣ್ಣು ಮಕ್ಕಳ ಹತ್ಯೆ ವಿಚಾರದಲ್ಲಿ ಕರ್ನಾಟಕ ದೇಶದಲ್ಲೇ ಐದನೇ ಸ್ಥಾನದಲ್ಲಿದೆ. ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಗಳು ಮುಂಚೂಣಿ ಸ್ಥಾನಕ್ಕಾಗಿ ಪೈಪೋಟಿಯಲ್ಲಿವೆ.

ದೇಶದಲ್ಲಿ ಮಹಿಳಾ ಭ್ರೂಣ ಹತ್ಯೆ

ರಾಜ್ಯ	ಸ್ಥಾನ
1) ರಾಜಸ್ಥಾನ	1
2) ಗುಜರಾತ	2
3) ಮಹಾರಾಷ್ಟ್ರ	3
4) ಹರಿಯಾಣ	4
5) ಕರ್ನಾಟಕ	5

ಪ್ರಾಕೃತಿಕ ಕಾರಣಗಳಿಂದ ಹಾಗೂ 'ನಾಗರೀಕತೆ'ಯ ಬೆಳವಣಿಗೆಯ ಪರಿಣಾಮವಾಗಿ ನಮ್ಮ ಪರಿಸರದ ಎಷ್ಟೋ ಜೀವ ಪ್ರಬೇಧಗಳು ಅಳಿವಿನ ಅಂಚಿನಲ್ಲಿವೆ ಎಂಬುದು ಈಗಾಗಲೆ ವ್ಯಾಪಕವಾಗಿ ಚರ್ಚೆಯಾಗುತ್ತಿರುವ ವಿಷಯ. ಈ ರೀತಿಯಾಗಿ ಅಳಿವಿನ ಅಂಚಿನಲ್ಲಿರುವ ಜೀವಿಗಳ ಪಟ್ಟಿಗೆ 'ಮಹಿಳೆ'ಯನ್ನೂ ನಮ್ಮ ಸಮಾಜ ವ್ಯವಸ್ಥೆ ಸೇರಿಸುತ್ತಿದೆಯೇ ? ಹೆಣ್ಣು ಈ ರೀತಿಯಾಗಿ ಅಳಿವಿನ ಅಂಚಿಗೆ ಸರಿದರೆ ಒಟ್ಟು ಮಾನವ ಸಮಾಜಕ್ಕೆ ಮತ್ತು ಪುರುಷ ಪ್ರಬೇಧಕ್ಕೆ 'ಉಳಿವು' ಎಂಬುದು ಉಂಟೇ ? ಯೋಚಿಸಭೇಕಿದೆ. ಹುಟ್ಟುವ ಅವಕಾಶವನ್ನೇ ನಿರಾಕರಿಸುವ ಸಾಮಾಜಿಕ ವ್ಯವಸ್ಥೆ. ಹುಟ್ಟಿದ ಮೇಲೆ ಹೆಜ್ಜೆ ಹೆಜ್ಜೆಗೂ ತಾರತಮ್ಯ. ಆಟವಾಡುವ ಅವಕಾಶ, ಶಿಕ್ಷಣದ ಅವಕಾಶ ಸೇರಿದಂತೆ ಎಲ್ಲ ಹಕ್ಕುಗಳಲ್ಲಿ ವಂಚನೆ. ಮನೆಗೆಲಸದ ಹೊರೆ. ನೂರೆಂಟು ನಿರ್ಬಂಧಗಳು. ಆಸ್ತಿ ಹಕ್ಕಿನಲ್ಲಿ ಘೋರ ವಂಚನೆ. ವೇತನ ತರುವ ದುಡಿಮೆ ನಿರ್ಬಂಧ. ಎಷ್ಟೇಲ್ಲಾ ಅಡೆತಡೆಗಳಿದ್ದರೂ, ಸಮಸ್ಯೆಗಳಿದ್ದರೂ ಎಸ್ಸೆಎಲ್‌ಸಿ, ಪಿಯುಸಿ, ಅಥವಾ ಯಾವ ಪರೀಕ್ಷೆಗಳಲ್ಲಿ ನೋಡಿದರೂ ಹೆಣ್ಣು ಮಕ್ಕಳೇ ಮುಂದು ಎಂಬುದರಲ್ಲಿ ಈ ಸಮಾಜಕ್ಕೆ ಏನೋ ಒಂದು ಸಂದೇಶವಿದೆ. ಇದೊಂದು ಸಣ್ಣ ಉದಾಹರಣೆಯಷ್ಟೆ.

ಈ ಸಮಾಜ ನಿಜವಾದ ಅರ್ಥದಲ್ಲಿ 'ಹೊಸ ಹಾದಿ'ಗೆ ಹೊರಳಬೇಕಿದೆ. ಆ ಹಾದಿ ಮಾನವೀಯ ಮೌಲ್ಯಗಳ ಮೇಲ್ಸೇತುವೆಯ ಆಧಾರದ ಮೇಲೆ ನಿರ್ಮಿಸಿದ, ಸಮಾನತೆ ಎಂಬ ನೆಲಹಾಸು ಹಾಸಿದ ಹಾದಿಯೇ ಆಗಬೇಕಿದೆ. ವಿಶ್ವ ಹೆಣ್ಣು ಮಗುವಿನ ದಿನಾಚಾರಣೆಯ ಸಂದರ್ಭ ಮಾನವೀಯವಾಗಿ ಯೋಚಿಸುವವರನ್ನು ಈ ಹೊಸ ಹಾದಿಯ ನಿರ್ಮಾಣದ ಕಡೆಗೆ ಕೊಂಚ ಯೋಚಿಸುವಂತೆ ಮಾಡಿದರೆ ಅದೇ ಈ ಆಚರಣೆಯ ಸಾರ್ಥಕತೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

"ಆಹಾರದ ಹಕ್ಕು ಮೂಲಭೂತ ಹಕ್ಕಾಗಲಿ"

ರಾಜ್ಯದಲ್ಲಿನ ಅಪೌಷ್ಠಿಕತೆ ನಿವಾರಣೆಗಾಗಿ ಮತ್ತು ಆರೋಗ್ಯವಂತರಾಗಿ ಬದುಕುವ ಹಕ್ಕಿಗಾಗಿ ಹಮ್ಮಿಕೊಂಡಿದ್ದ ಸಿಪಿಐ(ಎಂ) ಪಕ್ಷದ "ರಾಜ್ಯ ಸಮಾವೇಶ" ಸೆಪ್ಟಂಬರ್ 7 ರಂದು ರಾಯಚೂರ ನಗರದಲ್ಲಿ ದಿ// ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಯಶಸ್ವಿಯಾಗಿ ನಡೆಯಿತು.

ಜಿ.ವಿ.ಶ್ರೀರಾಮರೆಡ್ಡಿ

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಜಿ.ವಿ.ಶ್ರೀರಾಮರೆಡ್ಡಿಯವರು ದೇವದುರ್ಗ ತಾಲ್ಲೂಕಿನಲ್ಲಿ ಮಕ್ಕಳ ಸರಣಿ ಸಾವು ನಡೆದ ಸುದ್ದಿ ಸ್ಫೋಟಗೊಂಡ ನಂತರ ಸರ್ಕಾರಗಳು ಎಚ್ಚೆತ್ತುಕೊಂಡಿವೆ. ಅಪೌಷ್ಠಿಕತೆಗೆ ಬಡತನವೇ ಮುಖ್ಯಕಾರಣ. ಇದು ಕೇವಲ ದೇವದುರ್ಗಕ್ಕೆ ಅಥವಾ ಜಿಲ್ಲೆಗೆ ಅಥವಾ ರಾಜ್ಯಕ್ಕೆ ಸೀಮಿತಗೊಂಡ ಪ್ರಶ್ನೆಯಲ್ಲ. ಇಡೀ ದೇಶಾದ್ಯಂತ ಬೃಹದಾಕಾರವಾಗಿ ಬೆಳೆದು ನಿಂತಿದೆ.

ಕೇಂದ್ರ ಸರ್ಕಾರ ಯೋಜನಾ ಆಯೋಗದ ವರದಿ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿದೆ. ಆದರೆ ಯೋಜನಾ ಆಯೋಗವು ಬಡತನದ ಮಾನದಂಡವನ್ನು ಅವೈಜ್ಞಾನಿಕವಾಗಿ ಗುರುತಿಸಿ ಕೇಂದ್ರ ಸರ್ಕಾರವನ್ನು ತಪ್ಪು ದಾರಿಗೆ ಎಳೆದಿದೆ.

ದೇಶದ ಬಡಜನತೆಯಿಂದ ಮತಗಳನ್ನು ಪಡೆದು ಅಧಿಕಾರ ನಡೆಸುತ್ತಿರುವ ಪ್ರಧಾನಿಗಳು ಶ್ರೀಮಂತರಿಗೆ ಯಾವ ಯಾವ ರೀತಿಯಲ್ಲಿ ಲಾಭ ಮಾಡಿ ಕೊಡಬೇಕೆಂದು ಚಿಂತಿಸುತ್ತಾರೆ. ಆದರೆ ಶ್ರೀಮಂತರು ಪ್ರತಿವರ್ಷ 80,000 ಕೋಟಿಗಳ ತೆರಿಗೆ ಕಟ್ಟದೆ ದೇಶಕ್ಕೆ ಮೋಸ ಮಾಡುತ್ತಿದ್ದಾರೆ.

ಕೃಷಿ ಕೂಲಿಕಾರರ ಕನಿಷ್ಠ ವೇತನ ನಿಗದಿ ಮಾಡಲು ಸರ್ಕಾರದಿಂದ ಆಗುತ್ತಿಲ್ಲ. ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ನೀಡುವಂತೆ ಕ್ರಮ ಕೈಗೊಳ್ಳಲು ಆಗುತ್ತಿಲ್ಲ. 14 ಕನಿಷ್ಟ ಜೀವನಾವಶ್ಯಕ ವಸ್ತುಗಳನ್ನು ಪಡಿತರ ವ್ಯವಸ್ಥೆ ಮೂಲಕ ಪೂರೈಸಲು ಸರ್ಕಾರದಿಂದ ಆಗುತ್ತಿಲ್ಲ. ಆದರೆ ಬೆಲೆಗಳನ್ನು ಮಾತ್ರ ನಿರಂತರವಾಗಿ ಏರಿಸುವ ಮುಖಾಂತರ ಶ್ರೀಮಂತರ ಖಜಾನೆ ತುಂಬಿಸಲು ಪ್ರಧಾನಿಗಳು ಹೊರಟಿದ್ದಾರೆ.

ಬಂಡವಾಳ ಹೂಡಿಕೆಯ ಸಮಾವೇಶಗಳ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿ ಕಸಿದುಕೊಂಡು ಕಾರ್ಪೋರೇಟ್ ಕಂಪನಿಗಳಿಗೆ ನೀಡುತ್ತಿರುವುದು ಖಂಡನೀಯ. ಸರ್ಕಾರವೇ ರಿಯಲ್ ಎಸ್ಟೇಟ್ ದಂಧೆಯ ದಲ್ಲಾಳಿಯಂತೆ ವರ್ತಿಸುತ್ತಿದೆ.

ಕೇಂದ್ರ ಸರ್ಕಾರ ಆಹಾರ ಕಾಯ್ದೆಯ ಹೆಸರಿನಲ್ಲಿ ಜನರ ಆಹಾರದ ಹಕ್ಕನ್ನು ನಾಶಮಾಡಲು ಹೊರಟಿದೆ. ಆರ್ಥಿಕ ಕುಸಿತದ ನೆಪಹೇಳಿ ಅಗತ್ಯ ವಸ್ತುಗಳ ಮೇಲಿನ ಸಬ್ಸಿಡಿಗಳನ್ನು ರದ್ದು ಮಾಡಲು ಹೊರಟಿದೆ.

ಮುಂದುವರೆಯುತ್ತಿರುವ ಜಗತ್ತಿಗೆ ಅಪೌಷ್ಠಿಕತೆ ಒಂದು ಸವಾಲಾಗಿ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿ ಪ್ರತಿದಿನ 2,800 ಕ್ಯಾಲೊರಿ ಆಹಾರ ಸೇವಿಸಬೇಕು. ಆದರೆ ಬಡತನ, ಬೆಲೆಯೇರಿಕೆಯಿಂದಾಗಿ ಇದು ಸಾಧ್ಯವಾಗುತ್ತಿಲ್ಲ. ಬಡತನ ನಿವಾರಣೆಯಾದರೆ ಅಪೌಷ್ಠಿಕತೆ ತಂತಾನೆ ಮಾಯವಾಗುತ್ತದೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ, ಆದರೆ ಬಡತನ ನಿವಾರಣೆಯ ಬಗ್ಗೆ ಕೇಂದ್ರ-ರಾಜ್ಯ ಸರ್ಕಾರಗಳು ಗಂಭೀರ ಪ್ರಯತ್ನ ಮಾಡದಿರುವುದು ಖಂಡನಾರ್ಹ.



ಎಪಿಎಲ್, ಬಿಪಿಎಲ್ ಎಂಬ ಭೇಧ ಎಣಿಸದೆ ಆಹಾರದ ಹಂಚಿಕೆ ಸಾರ್ವತ್ರಿಕವಾಗಬೇಕು. 14 ಜೀವನಾವಶ್ಯಕ ವಸ್ತುಗಳನ್ನು ಪಡಿತರ ವ್ಯವಸ್ಥೆ ಮೂಲಕ ಕೊಡುವಂತಾಗಬೇಕು. ಆಹಾರದ ಹಕ್ಕು ಮೂಲಭೂತ ಹಕ್ಕಾಗಬೇಕು ಎಂದರು.

ಮುಖ್ಯಅತಿಥಿಗಳಾದ ಕಾಂ. ಮಾರುತಿ ಮಾನ್ಪಡೆ ಅವರು ಈಗಿನ ದಿನಮಾನಗಳಲ್ಲಿ ತಾಯಂದಿರು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಆಹಾರ ಧಾನ್ಯಗಳನ್ನಾಗಲಿ, ಹಣ್ಣು-ಹಂಪಲುಗಳನ್ನಾಗಲಿ ಖರೀದಿಸುವ ಸಾಮರ್ಥ್ಯ ಅವರಲ್ಲಿ ಇಲ್ಲ. ಸ್ವಾತಂತ್ರ್ಯ ಬಂದು 65 ವರ್ಷಗಳಾದರೂ ಆಳುವ ಸರ್ಕಾರಗಳು ಬಡತನ ನಿವಾರಿಸುವ ಘೋಷಣೆಗಳನ್ನು ಮಾಡಿದ್ದು ಬಿಟ್ಟರೆ ನಿಜವಾಗಿ ಕ್ರಮ ಕೈಗೊಳ್ಳಲಿಲ್ಲ. ನಿರಂತರವಾಗಿ ಶೋಷಣೆಗೆ ಒಳಗಾದ ಜನರಲ್ಲಿ ಬಡತನ ಹೆಚ್ಚಾಗಿದೆ. ಬಡತನ ನಿವಾರಣೆಯಾಗದೆ ಅಪೌಷ್ಠಿಕತೆ ಹೋಗಲಾಡಿಸಲಾಗದು.

ದೇಶದಲ್ಲಿ ಕೃಷಿ ಬಿಕ್ಕಟ್ಟು ತೀವ್ರವಾಗಿದೆ. ಕೃಷಿ ಕ್ಷೇತ್ರ ಲಾಭದಾಯಕವಾಗಿ ಉಳಿದಿಲ್ಲ. ರಸಗೊಬ್ಬರಗಳ, ಕ್ರಿಮಿನಾಶಕಗಳ, ಬೀಜಗಳ, ಯಂತ್ರೋಪಕರಣಗಳ ಬೆಲೆಗಳು ನಿರಂತರವಾಗಿ ಏರುತ್ತಿವೆ. ಆದರೆ ರೈತರು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆಗಳು ಸಿಗುತ್ತಿಲ್ಲ. ಹೀಗಾಗಿ ರೈತರ ಸಾಲ ನಿರಂತರವಾಗಿ ಏರುತ್ತಿದೆ. ಸಾಲದ ಬಲೆಯಿಂದ ಪಾರಾಗಲಾರದೆ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಹೀಗಾಗಿ ಕೃಷಿಬಿಕ್ಕಟ್ಟು, ಬಡತನ, ಅಪೌಷ್ಠಿಕತೆ ಇವು ಒಂದಕ್ಕೊಂದು ಸಂಬಂಧ ಹೊಂದಿವೆ ಎಂದು ಹೇಳಿದರು.

ಇನ್ನೊಬ್ಬ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಶ್ರೀಮತಿ ಕಾತ್ಯಾಯನಿ ಚಾಮರಾಜ ಪತ್ರಕರ್ತೆ ಬೆಂಗಳೂರು ಇವರು ಅಂಗನವಾಡಿಗಳಿಗೆ ಆಹಾರ ಪೂರೈಸಲು ಸರ್ಕಾರ ಖಾಸಗಿ ಸಂಸ್ಥೆಗೆ 600 ಕೋಟಿಗೆ ಗುತ್ತಿಗೆ ನೀಡಿತ್ತು. ಆ ಸಂಸ್ಥೆ ಗುಣಮಟ್ಟದ ಆಹಾರ ಪೂರೈಸದೆ ಅನೇಕ ಅವ್ಯವಹಾರಗಳನ್ನು ನಡೆಸಿತ್ತು. ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ಎಚ್ಚೆತ್ತುಕೊಳ್ಳಲಿಲ್ಲ. ಹೈಕೋರ್ಟನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊದದ್ದಮೆ ಹೂಡಲಾಯಿತು. ಹೈಕೋರ್ಟ್ ಸರ್ಕಾರದ ನಿರ್ಲಕ್ಷ್ಯ ಖಂಡಿಸಿ ಎಚ್ಚರಿಕೆ ನೀಡಿದೆ.

ಅಪೌಷ್ಠಿಕತೆ ನಿವಾರಣೆಯ ಗುರಿಯನ್ನು ಹೊಂದಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾಳಜಿವಹಿಸಲಿಲ್ಲ. ಹೀಗಾಗಿ ಮಕ್ಕಳ ಸಾವು ನಡೆಯಿತು. ಇಲಾಖೆಯ ಸಚಿವರಿಗೆ ಈ ಬಗ್ಗೆ ಕನಿಷ್ಠ ಕಾಳಜಿ ಇರಲಿಲ್ಲ ಎಂಬುದು ಗೊತ್ತಾಗಿದೆ. ಮಾಧ್ಯಮಗಳು ಈ ಸಮಸ್ಯೆ ಎಷ್ಟು ಗಂಭೀರವಾಗಿದೆಯೆಂಬುದನ್ನು ಸಾಕ್ಷ್ಯಾಧಾರ ಸಹಿತ ಬಯಲು ಮಾಡಿವೆ. ಆದಾಗ್ಯೂ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಈ ಬಗ್ಗೆ ಜನತೆ ಬೀದಿಗಿಳಿದು ಬುದ್ಧಿಕಲಿಸಬೇಕಾಗಿದೆ.

ಅಂಗನವಾಡಿಗಳ ಮುಖಾಂತರ ಮಕ್ಕಳಿಗೆ ತತ್ತಿ(ಮೊಟ್ಟೆ) ಮತ್ತು ಬಾಳೆಹಣ್ಣು ನೀಡಲಾಗುತ್ತಿದೆ. ಇದರ ಜೊತೆಗೆ ಕೆಎಂಎಫ್ ಮುಖಾಂತರ ಹಾಲು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಎಸ್.ವರಲಕ್ಷ್ಮಿ ಅವರು ಗಂಭೀರವಾದ ಕಾಯಿಲೆಗಳಿಗೆ ಮೂಲ ಕಾರಣಗಳಿವೆ ಕೇವಲ 53 ಗ್ರಾಂ ಆಹಾರದಿಂದ ಮಕ್ಕಳ ಅಪೌಷ್ಟಿಕತೆ ನಿವಾರಣೆ ಹೇಗೆ ಸಾಧ್ಯ? ಒಪ್ಪತ್ತು ಬಿಸಿಯೂಟವಾಗಲಿ, ಕೋಳಿ ಮೊಟ್ಟೆಯಾಗಲಿ, ಬಾಳೆ ಹಣ್ಣಾಗಲಿ ಅಪೌಷ್ಠಿಕತೆ ನಿವಾರಿಸಲಾರವು. ದೇಶದಲ್ಲಿ ಕೃಷಿ ಕೂಲಿಕಾರರು, ಬಡರೈತರು, ಅಸಂಘಟಿತ ಕಾರ್ಮಿಕರು ಸೇರಿದರೆ ಶೇ. 70 ರಷ್ಟಾಗುತ್ತಾರೆ. ಈ ವಿಭಾಗಕ್ಕೆ ಕನಿಷ್ಠ ವೇತನವಾಗಲಿ, ನಿಗದಿತ ಆದಾಯವಾಗಲಿ ಇಲ್ಲ. ಇವರ ಸಮಸ್ಯೆ ಬಗೆಹರಿಸದೆ ಅಪೌಷ್ಟಿಕತೆ ನಿವಾರಣೆ ಅಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಂ.ಯು. ಬಸವರಾಜ ಅವರು ಅಭಿವೃದ್ಧಿ ಹೆಸರಿನಲ್ಲಿ ಈ ವರ್ಷ ಕೇಂದ್ರ ಸರ್ಕಾರ 11 ಲಕ್ಷ ಕೋಟಿಗಳನ್ನು ಮತ್ತು ರಾಜ್ಯ ಸರ್ಕಾರ 1.04 ಲಕ್ಷ ಕೋಟಿಗಳನ್ನು ಖರ್ಚು ಮಾಡುತ್ತಿವೆ. ಆದರೆ ಒಂದು ಚೂರು ಅಭಿವೃದ್ಧಿಯಾಗಲಿಲ್ಲ. ಆದರೆ ಕಾರ್ಪೋರೇಟ್ ಸಂಸ್ಥೆಗಳು ಮಾತ್ರ ಅಪಾರ ಅಭಿವೃದ್ಧಿ ಹೊಂದಿವೆ. ಹಸಿವಿನಿಂದಾಗಿ ಸಾವಿಗಿಡಾದ ರೈತರ, ಕಾರ್ಮಿಕರ, ನಿರುದ್ಯೋಗಿಗಳ ಆತ್ಮಹತ್ಯೆಗಳ ಬಗ್ಗೆ ಸರ್ಕಾರಗಳು ನಿರ್ಲಕ್ಷ್ಯತಾಳಿವೆ. ಇಂತಹ ನಿರ್ಲಜ್ಜ ಸರ್ಕಾರಗಳ ನೀತಿಗಳ ವಿರುದ್ಧ ಹೋರಾಟಕ್ಕಿಳಿಯದೆ ಬೇರೆ ದಾರಿಯಿಲ್ಲ ಎಂದರು.

ಆರಂಭದಲ್ಲಿ ಕಾಂ. ಕರುಣಾನಿಧಿ ಮತ್ತು ಸಂಗಡಿಗರು ಕ್ರಾಂತಿಗೀತೆ ಹಾಡಿದರು. ನಂತರ ಕಾಂ. ಮಲ್ಲಯ್ಯ ಜಾಲಹಳ್ಳಿ ಸಿಪಿಐ(ಎಂ) ರಾಯಚೂರ ಜಿಲ್ಲಾ ಕಾರ್ಯದರ್ಶಿ ಸ್ವಾಗತಿಸಿದರು. ಕೊನೆಯಲ್ಲಿ ಕಾ. ಕೆ.ಜಿ.ವಿರೇಶ ವಂದಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳ ಮುಖಂಡರಾದ ಜಿ. ನಾಗರಾಜ ಕೊಪ್ಪಳ, ಆರ್.ಎಸ್.ಬಸವರಾಜ ಬಳ್ಳಾರಿ, ಸಿ.ಕೆ.ಗೌಸಪೀರ ಚಿತ್ರದುರ್ಗ, ಮತ್ತು ಗಂಗಮ್ಮ ಬಿರಾದಾರ ಗುಲಬುರ್ಗ, ವೇದಿಕೆಯಲ್ಲಿ ಉಪಸ್ಥಿತರಿದ್ದರಲ್ಲದೆ ರಾಯಚೂರ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಹನುಮಗೌಡ ಮದರಕಲ್, ಕೆ.ಶಿವಾನಂದ ಹಟ್ಟಿ, ನರಸಿಂಹಪ್ಪ ಸಿಂಧನೂರು, ಡಿ.ಎಸ್. ಶರಣಬಸವ ಮತ್ತು ಎಚ್. ಪದ್ಮ ಸಹ ಇದ್ದರು.

- ಮಲ್ಲಯ್ಯ ಜಾಲಹಳ್ಳಿ

ಪಠ್ಯಕ್ರಮ ಕುರಿತು ಕುಂದಾಪುರ ಸಮುದಾಯ ವಿಚಾರ ಸಂಕಿರಣ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರಲ್ಲಿ ಅನುಷ್ಠಾನಕ್ಕೆ ಬಂದಿದ್ದು, ಅದಕ್ಕೆ ಸಮಾನಾಂತರವಾಗಿ ಪ್ರತಿಯೊಂದು ರಾಜ್ಯಗಳಿಗೂ ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ಪಠ್ಯಕ್ರಮಗಳನ್ನು ರೂಪಿಸಬೇಕಾದ ಅಗತ್ಯವಿದೆ. ಪ್ರೊ/ ಯಶ್‌ಪಾಲ್ ಅವರ ನೇತೃತ್ವದಲ್ಲಿ ರಚನೆಯಾದ ಶಾಲೆಗಳ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಒಟ್ಟು ಜ್ಞಾನವನ್ನು ಸಮಗ್ರವಾಗಿ ಕಟ್ಟಿಕೊಡಲು ನಿರ್ದೇಶಿಸುತ್ತದೆ. ಕಡೆಗಣಿಸಲ್ಪಟ್ಟವರನ್ನು ಮುಖ್ಯವಾಹಿನಿಗೆ ತರಲು ಮತ್ತು ಅವರ ಪರಿಸ್ಥಿತಿಗಳನ್ನು ಅರ್ಥ ಮಾಡಲು ಪ್ರಯತ್ನಿಸಬೇಕು ಎಂದು ಸೂಚಿಸುತ್ತದೆ. ಸಮಕಾಲೀನ ಸಮಾಜದ ಸವಾಲುಗಳನ್ನು ಎತ್ತಿಕೊಳ್ಳಲು ಹೇಳುತ್ತದೆ. ಸೋದರ ಭಾವನೆ, ಸೌಹಾರ್ದ, ಮತಾತೀತತೆಯನ್ನು ಎತ್ತಿಹಿಡಿಯಲು ಸೂಚಿಸುತ್ತದೆ. ವಿಭಿನ್ನ ಭಾವನೆಗಳನ್ನು ಗೌರವದಿಂದ ಕಾಣಬೇಕು, ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕು, ವಿಶ್ವಭ್ರಾತೃತ್ವವನ್ನು ಎತ್ತಿ ಹಿಡಿಯಬೇಕು ಎಂದು ಸೂಚಿಸುತ್ತದೆ. ಪಠ್ಯಕ್ರಮಗಳು ಪೂರ್ವಗ್ರಹಗಳನ್ನು ಮೂಡಿಸಬಾರದೆಂದು ತಿಳಿಸುತ್ತದೆ. ಇಂಥ ಪ್ರಜಾಸತ್ತಾತ್ಮಕವಾದ, ವೈಚಾರಿಕತೆಗೆ ನೆಲೆಗೊಡುವ ಇನ್ನೊಂದು ಶೈಕ್ಷಣಿಕ ದಸ್ತಾವೇಜು ಆ ಮೊದಲು ಸಿದ್ಧವಾಗಿರಲಿಲ್ಲ.

ಕಡಲತಡಿ
ವರದಿ : ವಾ.ಉ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪಠ್ಯಕ್ರಮ, ಹೇಗೆ ರೂಪಿತಗೊಳ್ಳುತ್ತದೆ ಎಂಬ ಜಿಜ್ಞಾಸೆ ಕುಂದಾಪುರ ಸಮುದಾಯವು ಸೆಪ್ಟೆಂಬರ್ 9 ರಂದು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ನಡೆಯಿತು. ರಾ.ಪ.ಚ.(ಎನ್‌ಸಿಪಿ) ಬೋಧನಾ ವಿಷಯ ಬದಲಾವಣೆಯೊಂದಿಗೆ ಮೌಲ್ಯಮಾಪನ ವಿಧಾನ (ಪರೀಕ್ಷಾವಿಧಾನ)ವನ್ನೂ ಬದಲಾಯಿಸಲು ಸೂಚಿಸುತ್ತದೆ. ಆದರೆ ಕರ್ನಾಟಕದಲ್ಲಿ ಮೌಲ್ಯಮಾಪನ ವಿಧಾನವನ್ನೂ ಬದಲಾಯಿಸದೆ ಕೇವಲ ವಿಷಯ ಬದಲಾವಣೆ ಮಾತ್ರ ಮಾಡುತ್ತಿದ್ದು, ರಾ.ಪ.ಚೌಕಟ್ಟಿನ ತತ್ವಕ್ಕೇ ಅದು ವಿರುದ್ಧವಾದುದು ಎಂಬುದಾಗಿ ಶಿಕ್ಷಣ ತಜ್ಞ ಸಿ.ಎಚ್.ಕೃಷ್ಣಶಾಸ್ತ್ರಿ ಬಾಳಿಲ ಅವರು ಹೇಳಿದರು. ಕೇರಳ ರಾಜ್ಯದಲ್ಲಿ 1 ರಿಂದ 10ನೇ ತರಗತಿಯ ವರೆಗಿನ ಎಲ್ಲ ಪಠ್ಯವಿಷಯಗಳೂ ಹೇಗೆ ರಾ.ಪ.ಚೌಕಟ್ಟಿನ ಆಶಯಕ್ಕೆ ಅನುಗುಣವಾಗಿದೆ ಎಂದು, ಕೇರಳದ ಕನ್ನಡ ಭಾಷಾ ಪ್ರದೇಶದ ಪುಸ್ತಕಗಳಿಂದ ಉದಾಹರಿಸಿ ವಿವರಿಸಿದರು.

ಕರ್ನಾಟಕ ರಾಜ್ಯವು ಈ ವರ್ಷದಲ್ಲಿ 5ನೇ ಮತ್ತು 8ನೇ ತರಗತಿಗೆ ರಚಿಸಿರುವ ವಿವಿಧ ಪಠ್ಯಪುಸ್ತಕಗಳು ಶಿಕ್ಷಣವನ್ನು ಕೇಸರೀಕರಣಗೊಳಿಸಲು ಪ್ರಯತ್ನಿಸುವುದರ ಮೂಲಕ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಸೌಹಾರ್ದ, ಮತನಿರಪೇಕ್ಷತೆ ಹಾಗೂ ವೈಜ್ಞಾನಿಕ ಮನೋಭಾವಕ್ಕೇನೇ ತೀರಾ ವಿರುದ್ಧವಾಗಿದೆ ಎಂದು ಸಾಹಿತಿ ಪ್ರೊ.ಭೂಮೇಗೌಡ ತಿಳಿಸಿ, ಈ ಕುರಿತು ರಾಜ್ಯದ ಪಠ್ಯಪುಸ್ತಕಗಳಿಂದ ಹೇರಳ ಉದಾಹರಣೆಗಳನ್ನಿತ್ತು ವಿವರಿಸಿದರು.

1989ರ ಮಕ್ಕಳ ಹಕ್ಕುಗಳ ಅಂತರಾಷ್ಟ್ರೀಯ ಒಡಂಬಡಿಕೆಗೆ 1992 ರಲ್ಲೇ ಸಹಿ ಹಾಕಿದ ಭಾರತ ಸರಕಾರವು, ಶಿಕ್ಷಣದ ಹಕ್ಕು ಕಾಯಿದೆಯನ್ನು ಅನುಷ್ಠಾನಗೊಳಿಸಲು ಭಾರತ ಸರಕಾರವು ಎಷ್ಟೊಂದು ವರ್ಷಗಳನ್ನು ತೆಗೆದುಕೊಂಡಿತು ಎಂಬುದಾಗಿ ಶಿಕ್ಷಣ ಹಕ್ಕುಗಳ ಹೋರಾಟಗಳ ಸಂಘಟಕ ರೆನ್ನಿ ಡಿಸೋಜ ನುಡಿದರು. ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಶಿಕ್ಷಣದ ಮೂಲಕ ತರುವ ಇಚ್ಛಾಶಕ್ತಿ ಆಳುವ ಸರ್ಕಾರಗಳಿಗೆ ಇಲ್ಲದಿರುವುದೇ ಇದಕ್ಕೆ ಕಾರಣ. ಶಿಕ್ಷಣದ ಹಕ್ಕು ಕಾಯಿದೆಯ ಮೂಲಕ ಖಾಸಗಿ ಶಾಲೆಗಳು 25% ಹಿಂದುಳಿದವರಿಗೆ ಕಾದಿರಿಸುವ ವಿದ್ಯಮಾನದಲ್ಲೂ, ಖಾಸಗಿ ಸಂಸ್ಥೆಗಳಿಗೆ ಆ ಮೂಲಕ ಗಳಿಕೆಗೆ ಅವಕಾಶವಾಗಿರುವುದು ವಿಚಿತ್ರ, ಸಮಾನ ಶಾಲಾ ಶಿಕ್ಷಣ ಏರ್ಪಡಿಸಬೇಕು ಎಂಬ 1966ರ ಕೊಠಾರಿ ಆಯೋಗದ ಆಶಯ ಕನಸಾಗಿ ಉಳಿದಿದೆ ಎಂದು ಅವರು ವಿವರಿಸಿದರು.

ಮೆಕಾಲೆಯ ಶಿಕ್ಷಣ ಪದ್ಧತಿ ಅವತ್ತಿನ ಬ್ರಿಟಿಷ್ ಆಳುವ ಸ್ವಾಮಿಗಳ ಆಳ್ವಿಕೆಗೆ ಪೂರಕವಾಗಿದ್ದರೆ, ಸ್ವಾತಂತ್ರ್ಯೋತ್ತರದ ದೇಶದ ಆಳುವ ವರ್ಗಗಳು ತಮ್ಮ ವರ್ಗ ಆಳ್ವಿಕೆಗೆ ಪೂರಕವಾದ ಶಿಕ್ಷಣ ಪದ್ಧತಿಯನ್ನು ಬಯಸುತ್ತದೆ. ಹಾಗಾಗಿ ಕೊಠಾರಿ ಆಯೋಗ, ಎನ್‌ಸಿಎಫ್‌ನಂತಹ ಜನಪರ ಪುರೋಗಾಮಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸೋಲಿಸಲು ಪ್ರಯತ್ನ ಪಡುತ್ತವೆ ಎಂಬುದಾಗಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಮುದಾಯ ವಲಯ ಸಂಚಾಲಕ ವಾಸುದೇವ ಉಚ್ಚಿಲ ನುಡಿದರು. ನವ ಉದಾರವಾದದ ಶೈಕ್ಷಣಿಕ ನೆಲೆಗಳಾದ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಆಡಳಿತಗಳು ಕೇಸರೀಕರಣವನ್ನು ಎಂದೂ ವಿರೋಧಿಸಿಲ್ಲ ಎಂಬುದನ್ನು ಅವರು ತಿಳಿಸಿದರು.

ಕುಂದಾಪುರ ಸಮುದಾಯದ ಅಧ್ಯಕ್ಷ ಪ್ರಭಾಕರನ್, ಉಪಾಧ್ಯಕ್ಷ ಜಿ.ವಿ.ಕಾರಂತ, ಕಾರ್ಯದರ್ಶಿ ಸದಾನಂದ ಬೈಂದೂರು ಮತ್ತಿತರರು ವಿಚಾರ ಸಂಕಿರಣವನ್ನು ಸಂಘಟಿಸುವಲ್ಲಿ ಶ್ರಮಿಸಿದ್ದರು. ಭಾಗವಹಿಸಿದವರಲ್ಲಿ ಸುಮಾರು ಅರುವತ್ತು ಮಂದಿ ಶಿಕ್ಷಕರಿದ್ದರು ಎಂಬುದು ಗಮನಾರ್ಹ. ಸಂವಾದದಲ್ಲಿ ಉತ್ತಮವಾಗಿ ಅವರು ಭಾಗವಹಿಸಿದ್ದರು.

★

ವಿದ್ಯಾರ್ಥಿನಿ ಮೇಲೆ ಕೈಮಾಡಿದ ಎಬಿವಿಪಿ ವಿರುದ್ಧ ಎಸ್‌ಎಫ್‌ಐ ಪ್ರತಿಭಟನೆ

ಪ್ರಧಾನಿ ರಾಜಿನಾಮೆ ಒತ್ತಾಯಿಸಿ ಎಬಿವಿಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಲಿಲ್ಲವೆಂಬ ಕಾರಣಕ್ಕಾಗಿ ಎಬಿವಿಪಿ ಕಾರ್ಯಕರ್ತರು ಬೆಳ್ಳಾರೆಯ ಪದವಿ ಪೂರ್ವ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿನಿಯೊಬ್ಬಳ ಮೇಲೆ ಕೈಮಾಡಿದ್ದರು. ಸುಳ್ಯ ಪೋಲೀಸರು ಹಲ್ಲೆಕೋರರ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಸರಕಾರದ ನಿಷ್ಕ್ರಿಯತೆಯನ್ನು ಖಂಡಿಸಿ ಎಸ್‌ಎಫ್‌ಐ ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಪ್ಟೆಂಬರ್ 8 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿತು.



ಮಂಡ್ಯದಲ್ಲಿ ಉತ್ತರ ಭಾರತದ ಕೂಲಿ ಕಾರ್ಮಿಕರನ್ನು ಬಾಂಗ್ಲಾದೇಶೀಯರೆಂದು ಬಿಂಬಿಸಿ, ರೈಲಿನಿಂದ ಕೆಳಗಿಳಿಸಿ ಹಲ್ಲೆ, ಗೂಂಡಾಗಿರಿ ನಡೆಸಿದ ಎಬಿವಿಪಿ ವರ್ತನೆಯನ್ನು ತೀವ್ರವಾಗಿ ಖಂಡಿಸಲಾಯಿತು. ಇಲ್ಲೂ ಗೂಂಡಾಗಳ ಮೇಲೆ ಇನ್ನೂ ಸರ್ಕಾರ ಕ್ರಮ ಜರಗಿಸಿಲ್ಲ. ಅಲ್ಲದೆ ಕೆಲವು ವರ್ಷಗಳಿಂದ ಬೇರೆ ಬೇರೆ ಮೊಕದ್ದಮೆಗಳಲ್ಲಿ ಭಾಗಿಯಾಗಿದ್ದ ಎಬಿವಿಪಿ ಕಾರ್ಯಕರ್ತರ ಮೇಲಿನ ಪ್ರಕರಣಗಳನ್ನು ಅವರು ಬಿಜೆಪಿ ಸರಕಾರದ ಬೆಂಬಲಿಗರು ಎಂಬ ಕಾರಣಕ್ಕಾಗಿ ಹಿಂತೆಗೆದ ಬಿಜೆಪಿ ರಾಜ್ಯ ಸರಕಾರದ ಕ್ರಮವನ್ನು ಖಂಡಿಸಲಾಯಿತು. ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿದ ಎಸ್‌ಎಫ್‌ಐ ಕಾರ್ಯಕರ್ತರು, ಕಾನೂನು ಸಚಿವ ಸುರೇಶ್ ಕುಮಾರ್ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಜೊತೆ ಕಾರ್ಯದರ್ಶಿ ಜೀವನ್ ರಾಜ್ ಕುತ್ತಾರ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ರಜಾಕ್ ಮೊಂಟೆಪದವು ಪ್ರಸ್ತಾವಿಕವಾಗಿ ಮಾತನಾಡಿದರು. ಚರಣ್ ಶೆಟ್ಟಿ, ಫಯಾಜ್ ಮಂಜನಾಡಿ, ಹಂಝು ಕಿನ್ಯಾ, ಸಂಕೇತ್ ಕುತ್ತಾರ್, ತುಲಸೀದಾಸ್ ವಿಟ್ಲ, ಮಾಧುರಿ ಬೋಳಾರ್, ರೀತೇಶ್ ಬಜಾಲ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

★

ಆರೋಗ್ಯ ಇಲಾಖೆ ಗುತ್ತಿಗೆ ನೌಕರರಿಂದ ಪ್ರತಿಭಟನೆ:

ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಕಾರ್ಮಿಕರ ಸೇವಾ ಖಾಯಂಮಾತಿ, ವೇತನಬಾಕಿ, ಕನಿಷ್ಟ ವೇತನ, ವಾರದ ರಜೆ ಸಹಿತ ಇತರ ಸೌಲಭ್ಯಗಳನ್ನು ಒದಗಿಸಬೇಕೆಂದು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಸಪ್ಟೆಂಬರ್ 10 ರಂದು ದ.ಕ. ಜಿಲ್ಲಾ ಆರೋಗ್ಯಾಧಿಕಾರಿ ಅವರ ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಇಲಾಖೆಯು 'ಬಿ' ದರ್ಜೆಯ ನೌಕರರ ಮತ್ತು ಚಾಲಕರ ಕೆಲಸಗಳನ್ನು ಗುತ್ತಿಗೆ ಕಾರ್ಮಿಕರಿಂದ ಮಾಡಿಸಿ ಶೋಷಿಸುವುದನ್ನು ಖಂಡಿಸಲಾಯಿತು. ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹಾಲಿ ಗುತ್ತಿಗೆ ಕಾರ್ಮಿಕರನ್ನೇ ನೇಮಿಸಬೇಕು ಎಂದು ಒತ್ತಾಯಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಇನ್ನೊಬ್ಬ ಮುಂದಾಳು ಬಿ.ಎಂ.ಭಟ್ ಮಾತನಾಡಿದರು. ಆದಪ್ಪ, ಸುಧಾಕರ, ಸಂತೋಷ್ ಇತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ-2 ಇದೀಗ ಅರ್ಹತೆ ಕಳಕೊಂಡ ಸರಕಾರ

ಯುಪಿಎ-2 ಸರಕಾರದ ಇತ್ತೀಚಿನ ನಿರ್ಧಾರಗಳಿಗೆ ಬಹುಪಾಲು ಲೋಕಸಭಾ ಸದಸ್ಯರ ವಿರೋಧವಿದೆ ಎಂಬುದು ಈಗ ಸುಸ್ಪಷ್ಟ. ಆದ್ದರಿಂದ, ಟಿಎಂಸಿ ಯಾವುದೇ ದಿಕ್ಕಿನಲ್ಲಿ ಸಾಗಿದರೂ, ಈ ಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅರ್ಹತೆಯಂತೂ ಈ ಸರಕಾರಕ್ಕೆ ಉಳಿದಿಲ್ಲ. ಆದರೆ ಮಿತ್ರ ಪಕ್ಷಗಳ ಸಲಹೆಗಳಿಗೂ ಕಿವಿಗೊಡದೆ, ವಿರೋಧ ಪಕ್ಷಗಳ ಆಕ್ಷೇಪಗಳಿಗೂ ಜಗ್ಗದ ಬಹುಬ್ರಾಂಡ್ ಚಿಲ್ಲರೆ ಉದ್ಯಮದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಿದೆ. ಡಾ. ಮನಮೋಹನಸಿಂಗ್ ಒಬ್ಬ ಅಸಮರ್ಥ ಪ್ರಧಾನಿ ಎಂಬ ಹೀಯಾಳಿಕೆ ಒಳಗಾಗಿದ್ದ ಪ್ರಧಾನಮಂತ್ರಿ ತನ್ನ ಕಾರ್ಪೋರೇಟ್ ದೊರೆಗಳನ್ನು ತೃಪ್ತಿಪಡಿಸಲು ಈ 'ಆತ್ಮಹತ್ಯಾ' ಕ್ರಮಕ್ಕೆ ಮುಂದಾಗಿದ್ದಾರೆ.

ಸೀತಾರಾಂ ಯೆಚೂರಿ

ಯುಪಿಎ-2 ಸಮ್ಮಿಶ್ರ ಸರಕಾರದಿಂದ ತೃಣಮೂಲ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಳ್ಳುವುದರೊಂದಿಗೆ ಒಂದು ರಾಜಕೀಯ ನಾಟಕ ಆರಂಭವಾಗಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಅದು ಇನ್ನೂ ಮುಂದುವರೆದಿದೆ. ಯುಪಿಎನಲ್ಲಿ ಕಾಂಗ್ರೆಸ್‌ನ ಇನ್ನೊಂದು ಮಹತ್ವದ ಮಿತ್ರಪಕ್ಷ ಡಿಎಂಕೆ ಸೆಪ್ಟೆಂಬರ್ 20ರಂದು ನಾಲ್ಕು ಎಡಪಕ್ಷಗಳು, ಸಮಾಜವಾದಿ ಪಕ್ಷ, ತೆಲುಗು ದೇಶಂ, ಜನತಾ ದಳ(ಎಸ್) ಮತ್ತು ಬಿಜು ಜನತಾದಳ ನೀಡಿದ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಬೆಂಬಲ ವ್ಯಕ್ತ ಪಡಿಸಿದೆ. ಎನ್‌ಡಿಎ ಕೂಡ ಪ್ರತ್ಯೇಕವಾಗಿ ಅದೇ ದಿನ ಭಾರತ ಬಂದ್‌ಗೆ ಕರೆ ನೀಡಿತ್ತು.

ಅಂದರೆ ಈಗ ಬಹುಪಾಲು ಲೋಕಸಭಾ ಸದಸ್ಯರು, ಡೀಸೆಲ್ ಬೆಲೆಯನ್ನು ಲೀಟರಿಗೆ 5ರೂ. ಹೆಚ್ಚಿಸುವ, ಅಡುಗೆ ಅನಿಲ ಸಿಲಿಂಡರುಗಳ ಸಂಖ್ಯೆಯನ್ನು ಕುಟುಂಬಕ್ಕೆ ವರ್ಷಕ್ಕೆ ಆರಕ್ಕೆ ಸೀಮಿತಗೊಳಿಸುವ, ಚಿಲ್ಲರೆ ವ್ಯಾಪಾರ ವಲಯದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಮತ್ತು ಸಾರ್ವಜನಿಕ ವಲಯದ ನವರತ್ನ ಘಟಕಗಳ ಶೇರು ಮಾರಾಟ ಮಾಡುವ ಯುಪಿಎ-2 ಸರಕಾರದ ನಿರ್ಣಯಗಳನ್ನು ವಿರೋಧಿಸುತ್ತಿದ್ದಾರೆ ಎಂಬುದನ್ನು ಈ ಬೆಳವಣಿಗೆ ಸ್ಪಷ್ಟವಾಗಿ ತೋರಿಸುತ್ತದೆ. ಆದ್ದರಿಂದ ಈ ಯುಪಿಎ-2 ಸರಕಾರಕ್ಕೆ ಈ ಕ್ರಮಗಳನ್ನು ಜಾರಿಗೆ ತರುವ ಯಾವ ನ್ಯಾಯಸಮ್ಮತ ಅರ್ಹತೆಯೂ ಉಳಿದಿಲ್ಲ. ಅವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.

ಕ್ರೂರ ಹೊಡೆತ

ಈ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸರಕಾರ ಕೊಡುತ್ತಿರುವ ಕಾರಣಗಳು ಭಾರತೀಯ ಆರ್ಥಿಕಕ್ಕಾಗಲೀ, ಭಾರತೀಯ ಜನತೆಗಾಗಲೀ ಹಿತಕಾರಿಯಲ್ಲ ಎಂಬುದನ್ನು ನಾವೂ ಈ ಅಂಕಣದಲ್ಲಿ ಹಲವು ಬಾರಿ ತೋರಿಸಿ ಕೊಟ್ಟಿದ್ದೇವೆ. ಇವು ಭಾರತೀಯ ಜನಸಮೂಹಗಳ ಬದುಕಿನ ಮೇಲೆ ಮತ್ತೊಂದು ಕ್ರೂರ ಹೊಡೆತವಷ್ಟೇ, ಈಗಾಗಲೇ ಎಲ್ಲ ಜೀವನಾವಶ್ಯಕ ವಸ್ತುಗಳ ನಿರಂತರ ಬೆಲೆಯೇರಿಕೆಗಳಿಂದ ತತ್ತರಿಸಿರುವ ಜನಗಳ ಮೇಲಿನ ಮತ್ತೊಂದು ದಾಳಿಯಷ್ಟೇ.

ಅಷ್ಟೇ ಅಲ್ಲ, ಯುಪಿಎ-2 ಸರಕಾರ ನಮ್ಮ ದೇಶದ ಹಣಕಾಸು ಕೊರತೆಗಿಂತಲೂ ಹೆಚ್ಚಿನ ಪ್ರಮಾಣದ ರಿಯಾಯ್ತಿಗಳನ್ನು ಭಾರತದ ಶ್ರೀಮಂತರಿಗೆ, ಕಾರ್ಪೊರೇಟ್ ವಲಯಕ್ಕೆ ಕೊಡಮಾಡಿದೆ, ಇತ್ತ ಅದೇ ಹಣಕಾಸು ಕೊರತೆಯನ್ನು ತಡೆಯುವ ಹೆಸರಿನಲ್ಲಿ, ಹಣಕಾಸು ಕ್ರೋಢೀಕರಣ ಮಾಡಬೇಕಾಗಿದೆ ಎನ್ನುತ್ತ ಬಡವರಿಗೆ ಕೊಡುತ್ತಿರುವ ಅಲ್ಪ-ಸ್ವಲ್ಪ ಸಬ್ಸಿಡಿಗಳನ್ನು ಕಡಿತ ಮಾಡುತ್ತಿದೆ ಎಂಬುದನ್ನೂ ಹಿಂದಿನ ವಾರಗಳಲ್ಲಿ ನಾವು ಚರ್ಚಿಸಿದ್ದೇವೆ. ನಮ್ಮ ಬಹುಪಾಲು ಜನಗಳ ಹಿತ ಸಾಧಿಸಬೇಕಾದರೆ, ಕೆಲವೇ ಹಿಡಿಯಷ್ಟು ಶ್ರೀಮಂತರು ಮತ್ತು ಬಹುಪಾಲು ಬಡವರ ನಡುವಿನ ಕಂದರ ತೀಕ್ಷ್ಣವಾಗಿ ಹೆಚ್ಚದಿರುವ ಒಂದು ಉತ್ತಮ ಭಾರತವನ್ನು ನಿರ್ಮಿಸಬೇಕೆಂದಿದ್ದರೆ ಯುಪಿಎ-2 ಸರಕಾರ ಈಗ ಪ್ರಸ್ತಾವಿಸಿರುವ ಕ್ರಮಗಳನ್ನು ಹಿಂತೆಗೆದುಕೊಳ್ಳಲೇ ಬೇಕು.

ಕಾಂಗ್ರೆಸ್ ಕೈಚಳಕ

ಇಬ್ಬರು ಪ್ರಮುಖ ಮಿತ್ರರು ಈ ಧೋರಣೆಗಳಿಗೆ ವಿರೋಧ ವ್ಯಕ್ತಪಡಿಸಿರುವ ಮತ್ತು ಎಡಪಕ್ಷಗಳು ಮತ್ತು ಜಾತ್ಯಾತೀತ ಪಕ್ಷಗಳ



ರಾಷ್ಟ್ರವ್ಯಾಪಿ ಹರತಾಳ ಹಾಗೂ ಎನ್‌ಡಿಎನ ಭಾರತ ಬಂದ್ ಕರೆಯ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಮಾತು-ಕತೆ, ಕುದುರೆ ವ್ಯಾಪಾರ ಆರಂಭವಾಗಿದೆ. ಯುಪಿಎ-2 ಸರಕಾರ ಈ ಕ್ರಮಗಳನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದಿದೆ, ಆದರೆ ಕಾಂಗ್ರೆಸ್ ಪಕ್ಷ ಅಡುಗೆ ಅನಿಲ ಸಿಲಿಂಡರುಗಳ ಸಂಖ್ಯೆಯನ್ನು 6 ರಿಂದ 9ಕ್ಕೆ ಹೆಚ್ಚಿಸಬೇಕೆಂದು ತನ್ನ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಿದೆ. ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಇಳಿಸಿ ಬಳಕೆದಾರರಿಗೆ ಆಗಿರುವ ಹೆಚ್ಚಳವನ್ನು ಇಳಿಸಬೇಕೆಂದೂ ಅದು ಆ ಸರಕಾರಗಳಿಗೆ ಹೇಳಬೇಕೆಂದಿದೆಯಂತೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ನೀಡುವ ಅಂತಿಮ ಅಧಿಕಾರವೂ ರಾಜ್ಯ ಸರಕಾರದ್ದು ಎಂದೂ ಅವರು ಹೇಳಿದ್ದಾರೆ. ಹೀಗೆ ಕಾಂಗ್ರೆಸ್ ಪಕ್ಷ, ಕಾಂಗ್ರಸೇತರ ರಾಜ್ಯ ಸರಕಾರಗಳ ಮೇಲೆ ಒತ್ತಡ ತರುವ, ಈ ಕ್ರಮಗಳನ್ನು ಜಾರಿಗೊಳಿಸುವ ಹೊಣೆಗಾರಿಕೆಯನ್ನು ಅವುಗಳ ಮೇಲೆ ಹೊರಿಸುವ ಪ್ರಯತ್ನ ನಡೆಸಿದೆ. ಇಂತಹ ಕೈಚಳಕದಿಂದ ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರಕಾರ ನಮ್ಮ ಬಹುಪಾಲು ಜನಗಳ ಮೇಲೆ ಇಂತಹ ಕ್ರೂರ ಹೊರೆಗಳನ್ನು ಹೇರಿರುವ ತನ್ನ ಹೊಣೆಗಾರಿಕೆ ಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಒಂದು ಸಮ್ಮಿಶ್ರ ಸರಕಾರದ ಯಾವುದೇ ಸದಸ್ಯ ಪಕ್ಷ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಾಗ, ಮೊದಲು ಮಾಡಬೇಕಾದ ಕೆಲಸವೆಂದರೆ, ತಾನು ಆ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದು ಕೊಂಡಿರುವದಾಗಿ ರಾಷ್ಟ್ರಪತಿಗಳಿಗೆ ಪತ್ರ ಸಲ್ಲಿಸುವುದು. ಯುಪಿಎ-1 ಸರಕಾರ ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ಕುದುರಿಸಲು ಏಕಪಕ್ಷೀಯವಾಗಿ ಮುಂದುವರೆದಾಗ ಎಡಪಕ್ಷಗಳು ಮಾಡಿದ್ದು ಇದನ್ನೇ- ತಮ್ಮ ಬೆಂಬಲವನ್ನು ಹಿಂತೆದುಕೊಳ್ಳುವುದಾಗಿ ಪತ್ರ ಸಲ್ಲಿಸಿದವು. ಆದರೆ ಈಗ ತೃಣಮೂಲ ಕಾಂಗ್ರೆಸ್ ಹಾಗೇನೂ ಮಾಡಿಲ್ಲ. ಬದಲಿಗೆ, ಮೊದಲಿಗೆ ಈ ಕ್ರಮಗಳನ್ನು ಹಿಂತೆಗೆದು ಕೊಳ್ಳಲು 72 ಗಂಟೆಗಳ ಗಡುವು ಕೊಟ್ಟಿತು. ನಂತರ ಟಿಎಂಸಿ ಮುಖ್ಯಸ್ಥರು ಸರಕಾರಕ್ಕೆ ತಮ್ಮ ಪಕ್ಷದ ಬೆಂಬಲವನ್ನು ಹಿಂತೆದುಕೊಳ್ಳುವದಾಗಿ ಪ್ರಕಟಿಸಿದರೂ, ತನ್ನ ಪಕ್ಷದ ಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಲು ಮತ್ತೆ ಮೂರು ದಿನಗಳ ಕಾಲಾವಧಿ ಕೊಟ್ಟಿದ್ದಾರೆ. ರಾಷ್ಟ್ರಪತಿಗಳಿಗೆ ವಿಧ್ಯುಕ್ತವಾಗಿ ಪತ್ರ ಕೊಡುವ ವರೆಗೂ ಈ ಯಾವ ಕ್ರಮಗಳೂ ಯುಪಿಎ-2 ಸರಕಾರಕ್ಕೆ ಟಿಎಂಸಿ ಬೆಂಬಲವನ್ನು ಹಿಂತೆಗೆದುಕೊಂಡದ್ದನ್ನು ಕ್ರಮಬದ್ಧಗೊಳಿಸುವುದಿಲ್ಲ. ಟಿಎಂಸಿ ಇಂತಹ ಪತ್ರವನ್ನು ಕೊಡುತ್ತದೆಯೇ, ಯಾವಾಗ ಕೊಡುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆಯಷ್ಟೇ.

ಅನಿಶ್ಚಿತತೆ

ಈ ಹಿಂದೆಯೂ ಟಿಎಂಸಿ ಸಮ್ಮಿಶ್ರ ಸರಕಾರವೊಂದಕ್ಕೆ ಕೊಟ್ಟ ಬೆಂಬಲವನ್ನು ಹಿಂತೆದುಕೊಂಡ ಇತಿಹಾಸ ಹೊಂದಿರುವ ಪಕ್ಷ. ಅದು 1998ರಲ್ಲಿ ಆರೆಸ್ಸೆಸ್/ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಭಾಗವಾಗಿತ್ತು. 2001ರಲ್ಲಿ ಪಶ್ಚಿಮ ಬಂಗಾಲದಲ್ಲಿ ನಡೆಯಲಿದ್ದ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ರಕ್ಷಣಾ ಹಗರಣಗಳ ಮೇಲೆ ಆಗಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ರಾಜೀನಾಮೆ ಕೊಡಬೇಕೆಂಬ ಪ್ರಶ್ನೆಯ ಮೇಲೆ ಬೆಂಬಲ ಹಿಂತೆಗೆದು ಕೊಂಡಿತು. ನಂತರ ಪಶ್ಚಿಮ ಬಂಗಾಲದಲ್ಲಿ ಅದು ಎಡರಂಗದ ವಿರುದ್ಧ ಕಾಂಗ್ರೆಸಿನೊಂದಿಗೆ ಮೈತ್ರಿ ಏರ್ಪಡಿಸಿಕೊಂಡಿತು. ಈ ಟಿಎಂಸಿ-ಕಾಂಗ್ರೆಸ್ ಮೈತ್ರಿಕೂಟ ಚುನಾವಣೆಗಳಲ್ಲಿ ಭಾರೀ ಪರಾಭವ ಅನುಭವಿಸಿದ ನಂತರ ಟಿಎಂಸಿ, ಆಗ ಬಿಜೆಪಿ ಗುಜರಾತಿನಲ್ಲಿ ಪ್ರಭುತ್ವ-ಪ್ರೇರಿತ ಕೋಮು ಹತ್ಯಾಕಾಂಡ ನಡೆಸಿದ್ದರೂ ಗಣನೆಗೆ ತಗೊಳ್ಳದೆ, ಅದರ ನೇತೃತ್ವದ ಎನ್‌ಡಿಎ ಮಡಿಲಿಗೆ ಮತ್ತೆ ಮರಳಿತು. 2004ರಲ್ಲಿ ಟಿಎಂಸಿ ಮುಖ್ಯಸ್ಥೆ ಕಲ್ಲಿದ್ದಲು ಮತ್ತು ಗಣಿ ಮಂತ್ರಿಯಾಗಿದ್ದರು. ಸಿಎಜಿ ಬಯಲು ಮಾಡಿರುವ ಕಲ್ಲಿದ್ದಲು ಗಣಿ ಹಂಚಿಕೆ ಹಗರಣ ಆ ಕಾಲದ್ದಿರಬಹುದೇ?

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಉತ್ತರ ದೊರೆಯದ ಇನ್ನೂ ಹಲವು ಪ್ರಶ್ನೆಗಳಿವೆ. ಟಿಎಂಸಿ ನಿಜವಾಗಿಯೂ ಯುಪಿಎ ಸರಕಾರದ ಈ ಕ್ರಮಗಳನ್ನು ಪ್ರಾಮಾಣಿಕವಾಗಿ ವಿರೋಧಿಸುತ್ತಿರುವುದಾದರೆ, ಅವುಗಳನ್ನು ಪ್ರತಿಭಟಿಸಿ ನಡೆಸಿದ ಸಪ್ಟಂಬರ್ 20ರ ಹರತಾಳವನ್ನು ಪಶ್ಚಿಮ ಬಂಗಾಲದಲ್ಲಿ ವಿರೋಧಿಸಿದ್ದೇಕೆ? ಅದು ಕೇಂದ್ರ ಮಂತ್ರಿಮಂಡಳದಿಂದ ತನ್ನ ಮಂತ್ರಿಗಳ ರಾಜೀನಾಮೆಯನ್ನು ಮೂರು ದಿನಗಳ ಕಾಲ ವಿಳಂಬಗೊಳಿಸಿರುವುದೇಕೆ, ಸಪ್ಟಂಬರ್ 21ರಂದು ಶುಕ್ರವಾರದ ನಮಾಜಿನ ನಂತರ ರಾಜೀನಾಮೆ ನೀಡುತ್ತಾರೆ ಎಂದು ನಿಗದಿ ಮಾಡಿರುವುದೇಕೆ? ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಬಹುಶಃ ಇವುಗಳಲ್ಲಿ ಕೆಲವಕ್ಕೆ ಉತ್ತರ ಸಿಕ್ಕಿರುತ್ತದೆ, ಅಥವ ಸಿಗದೇನೂ ಇರಬಹುದು. ಅದೇನೇ ಇರಲಿ, ಬಹಳಷ್ಟು ಅನಿಶ್ಚಿತತೆಯಂತೂ ಇರುತ್ತದೆ.

ಇವೆಲ್ಲ ಏನೇ ಇರಲಿ, ಈ ಜನ-ವಿರೋಧಿ ಕ್ರಮಗಳನ್ನು ಅನುಷ್ಠಾನಗೊಳಿಸಲು ಯುಪಿಎ-2 ಸರಕಾರಕ್ಕೆ ಲೋಕಸಭೆಯಲ್ಲಿ ಬಹುಮತ ಇಲ್ಲ ಎಂಬುದಂತೂ ಸ್ಪಷ್ಟ. ಸರಕಾರ ಅವನ್ನು ಹಿಂತೆದುಕೊಳ್ಳುವಂತೆ ಬಲವಂತ ತರಲು ಜನಗಳ ಪ್ರತಿಭಟನೆಗಳನ್ನು .ಮತ್ತು ಹೋರಾಟಗಳನ್ನು ಬಲಪಡಿಸಬೇಕಾಗಿದೆ.

ದೇಶವ್ಯಾಪಿ ಹರತಾಳಕ್ಕೆ ವ್ಯಾಪಕ ಜನ ಬೆಂಬಲ

ಡಿಸೆಲ್ ಬೆಲೆ ಏರಿಕೆ, ಅಡುಗೆ ಅನಿಲ ಸಿಲಿಂಡರ್‌ಗೆ ವರ್ಷಕ್ಕೆ 6 ರ ಮಿತಿ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ಮತ್ತು ಲಾಭದಾಯಕ ಸಾರ್ವಜನಿಕ ರಂಗದ ಉದ್ದಿಮೆಗಳ ಶೇರುಗಳ ಮಾರಾಟ ಮಾಡುವ ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಜನವಿರೋಧಿ ಕ್ರಮಗಳ ವಿರುದ್ಧ ಸೆ.20 ರಂದು ದೇಶವ್ಯಾಪಿ ಹರತಾಳ ನಡೆಸಲು 8 ರಾಜಕೀಯ ಪಕ್ಷಗಳು ಅಂದರೆ ಸಮಾಜವಾದಿ ಪಕ್ಷ, ಜನತಾದಳ (ಜಾತ್ಯಾತೀತ), ಸಿಪಿಐ(ಎಂ), ಸಿಪಿಐ, ಬಿಜು ಜನತಾದಳ, ತೆಲಗು ದೇಶಂ, ಅಖಿಲ ಭಾರತ ಪಾರ್ವರ್ಡ್ ಬ್ಲಾಕ್, ಮತ್ತು ಆರ್.ಎಸ್.ಪಿ. ಪಕ್ಷಗಳು ನೀಡಿದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ನಿತ್ಯಾನಂದಸ್ವಾಮಿ

ಡಿಸೆಲ್ ಬೆಲೆ ಏರಿಕೆ, ಅಡುಗೆ ಅನಿಲ ಸಿಲಿಂಡರ್‌ಗೆ ವರ್ಷಕ್ಕೆ 6 ರ ಮಿತಿ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ಮತ್ತು ಲಾಭದಾಯಕ ಸಾರ್ವಜನಿಕ ರಂಗದ ಉದ್ದಿಮೆಗಳ ಶೇರುಗಳ ಮಾರಾಟ ಮಾಡುವ ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಜನವಿರೋಧಿ ಕ್ರಮಗಳ ವಿರುದ್ಧ ಸೆ.20 ರಂದು ದೇಶವ್ಯಾಪಿ ಹರತಾಳ ನಡೆಸಲು 8 ರಾಜಕೀಯ ಪಕ್ಷಗಳು ಅಂದರೆ ಸಮಾಜವಾದಿ ಪಕ್ಷ, ಜನತಾದಳ (ಜಾತ್ಯಾತೀತ), ಸಿಪಿಐ(ಎಂ), ಸಿಪಿಐ, ಬಿಜು ಜನತಾದಳ, ತೆಲಗು ದೇಶಂ, ಅಖಿಲ ಭಾರತ ಪಾರ್ವರ್ಡ್ ಬ್ಲಾಕ್, ಮತ್ತು ಆರ್.ಎಸ್.ಪಿ. ಪಕ್ಷಗಳು ನೀಡಿದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಎನ್.ಡಿ.ಎ. ಪಕ್ಷಗಳು ಸಹ ಇದೇ ದಿನ 'ಬಂದ್' ಕರೆನೀಡಿದ್ದವು. ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ಓಡಿಸ್ಸಾ, ಆಂದ್ರ ಪ್ರದೇಶ, ಕರ್ನಾಟಕ, ತಮಿಳನಾಡು, ಪಂಜಾಬ, ಹಿಮಾಚಲ ಪ್ರದೇಶ, ಜಾರ್ಖಾಂಡ್ ಮತ್ತಿತರ ರಾಜ್ಯಗಳಲ್ಲಿ ಹರತಾಳ ನೂರಕ್ಕೆ ನೂರು ಯಶಸ್ವಿಯಾಗಿತ್ತು.

ಪಶ್ಚಿಮ ಬಂಗಾಳದಲ್ಲಿ ಹರತಾಳ ಸಂಪೂರ್ಣ ಯಶಸ್ವಿ ಯಾಗಿತ್ತು. ವಾಹನ ಸಂಚಾರ ಸ್ತಬ್ದಗೊಂಡಿತ್ತು. ಅಂಗಡಿಗಳು ಮತ್ತು



ಮಾರುಕಟ್ಟೆಗಳು ಮುಚ್ಚಿದ್ದವು. ಕಾರ್ಖಾನೆಗಳಲ್ಲಿ ಮತ್ತು ಚಹ ತೋಟಗಳಲ್ಲಿ ಕಾರ್ಮಿಕರು ಕೆಲಸ ನಿಲ್ಲಿಸಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಅನೇಕ ಕಡೆಗಳಲ್ಲಿ ತೃಣಮೂಲ ಕಾಂಗ್ರೇಸಿನ ಗೂಂಡಾಗಳು ಎಡರಂಗ ಕಾರ್ಯಕರ್ತರ ಮೇಲೆ ದಾಳಿಮಾಡಿದರೂ ಸಹ ಮುಷ್ಕರವನ್ನು ಯಶಸ್ವಿಗೊಳಿಸಲಾಯಿತು.

ತ್ರಿಪುರಾ ರಾಜ್ಯಾದ್ಯಂತ ಎಡರಂಗ ಮುತುವರ್ಜಿಯಿಂದ ಬಂದ್ ಸಂಪೂರ್ಣವಾಗಿ ಯಶಸ್ವಿಯಾಗಿತ್ತು. ಎಲ್ಲಾ ಆಫೀಸುಗಳು, ಮಾರುಕಟ್ಟೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು.

ಕೇರಳದಲ್ಲಿ ಸೆ. 15 ರಂದೇ ಯಶಸ್ವಿ ಹರತಾಳ ನಡೆಸಲಾಗಿತ್ತು. ಸೆ. 20 ರಂದು ಎಲ್ಲಾ 140 ವಿಧಾನಸಭಾ ಕ್ಷೇತ್ರಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗದ ನೇತೃತ್ವದಲ್ಲಿ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸಲಾಯಿತು.

ನವದೆಹಲಿಯಲ್ಲಿ 8 ಪಕ್ಷಗಳ ಮುಖಂಡರಾದ ಮುಲಾಯಂ ಸಿಂಗ್ ಯಾದವ್, ಹೆಚ್.ಡಿ. ದೇವೆಗೌಡ, ಚಂದ್ರಬಾಬು ನಾಯ್ಡು, ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ, ಎಸ್. ಸುಧಾಕರ ರೆಡ್ಡಿ, ಎ.ಬಿ.ಬರ್ಧನ್, ಮತ್ತು ರಾಂಗೋಪಾಲ ಯಾದವ್ ಸಂಸತ್ ವೀದಿಯಲ್ಲಿ ಬಂಧನಕ್ಕೆ ಒಳಗಾದರು.

ತಮಿಳುನಾಡಿನಲ್ಲಿ ಎಡಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರು 200 ಸ್ಥಳಗಳಲ್ಲಿ ಪಿಕೆಟಿಂಗ್ ನಡೆಸಿ 50.000 ಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧನಕ್ಕೆ ಒಳಗಾಗಿದ್ದಾರೆ.



ಹಬ್ಬದ ಕಾರಣಕ್ಕಾಗಿ ಒಡಿಸ್ಸಾದಲ್ಲಿ ಸೆ. 17 ರಂದೇ ಬಿಜೆಪಿ ಪಕ್ಷ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಿತ್ತು. ಎಡಪಕ್ಷಗಳು ಮತ್ತು ಸಮಾಜವಾದಿ ಪಕ್ಷ ಜಂಟಿಯಾಗಿ ಸೆ.20 ರಂದು ಹರತಾಳಕ್ಕೆ ಕರೆನೀಡಿದವು. ಸಾರಿಗೆ, ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಬಂದ್ ಆಗುವ ಮೂಲಕ ಹರತಾಳಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಗಣೇಶ ಚತುರ್ಥಿ ಕಾರಣಕ್ಕಾಗಿ ಮಹಾರಾಷ್ಟ್ರದ ಮುಂಬೈ ನಗರದಲ್ಲಿ ಮುಷ್ಕರ ಇರಲಿಲ್ಲ. ಇತರ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ಹಾಗೂ ಸ್ಥಳೀಯ ಮಟ್ಟದ ಮುಷ್ಕರಗಳು ನಡೆದಿವೆ.

ಕರ್ನಾಟಕದಲ್ಲಿ ಹರತಾಳ ಸಂಪೂರ್ಣ ಯಶಸ್ವಿ

ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ನೀಡಲಾಗಿದ್ದ ಮುಷ್ಕರದ ಕರೆಗೆ ಕರ್ನಾಟಕದಲ್ಲಿ ಒಕ್ಕೊರಲ ಬೆಂಬಲ ವ್ಯಕ್ತವಾಗಿದ್ದು ರಾಜಧಾನಿ ಬೆಂಗಳೂರೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹರತಾಳ ಸಂಪೂರ್ಣ ಯಶಸ್ವಿಯಾಗಿತ್ತು. ಬಸ್, ಲಾರಿ, ಅಟೋ, ಸೇರಿದಂತೆ ರಾಜ್ಯದೆಲ್ಲಡೆ ಸಾರಿಗೆ ಸಂಚಾರ ಸ್ಥಗಿತಗೊಂಡಿತ್ತು. ಹುಬ್ಬಳ್ಳಿ ಸೇರಿದಂತೆ ಕೆಲವು ಕಡೆ ರೈಲು ತಡೆ ನಡೆಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳೇ ಹೇಳಿಕೆ ನೀಡಿದ್ದಾರೆ. ರಾಜ್ಯಾದ್ಯಂತ ಹೋಟೆಲಗಳು ಅಂಗಡಿ ಮುಂಗಟ್ಟುಗಳು, ವಾಣಿಜ್ಯ ಸಂಸ್ಥೆಗಳು ಬೀಗಹಾಕಿಕೊಂಡಿದ್ದವು. ಕಾರ್ಖಾನೆಗಳು ಕಾರ್ಯನಿರ್ವಹಿಸಲಿಲ್ಲ. ಚಿತ್ರಮಂದಿರಗಳೂ ಬಂದ್ ಆಗಿದ್ದವು. ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಬ್ಯಾಂಕ್‌ಗಳಲ್ಲಿ ವ್ಯವಹಾರ ಇರಲಿಲ್ಲ. ಸಿಬ್ಬಂಧಿಗಳಿಲ್ಲದೆ ಸರ್ಕಾರಿ ಕಚೇರಿಗಳಲ್ಲೂ ಅಘೋಷಿತ ಹರತಾಳ ಎದ್ದುಕಾಣುತಿತ್ತು.

ಎಡಪಕ್ಷಗಳು, ದಲಿತ ಸಂಘರ್ಷ ಸಮಿತಿಗಳು, ಜೆಡಿ(ಎಸ್) ಕಾರ್ಯಕರ್ತರು ಅಲ್ಲಲ್ಲಿ ಪ್ರತಿಭಟನಾ ಮೆರವಣಿಗೆಗಳನ್ನು, ಮಾನವ ಸರಪಳಿಗಳನ್ನು ನಡೆಸಿ ಪ್ರಧಾನಿ ಮನಮೋಹನ ಸಿಂಗ್ ಪ್ರತಿಕೃತಿಯನ್ನು ಸುಟ್ಟುಹಾಕಿ ಜನತೆಯ ಆಕ್ರೋಶವನ್ನು ಪ್ರತಿಬಿಂಬಿಸಿದರು. ಎಡಪಕ್ಷಗಳ ಮುತುವರ್ಜಿಯಿಂದ ಚಿಕ್ಕಬಳ್ಳಾಪುರ, ಕೋಲಾರ, ಬಳ್ಳಾರಿ, ಕೊಪ್ಪಳ, ರಾಯಚೂರು, ಮಂಡ್ಯ, ದಕ್ಷಿಣ ಕನ್ನಡ ಮೊದಲಾದ ಜಿಲ್ಲೆಗಳ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಹರತಾಳ ಯಶಸ್ವಿಯಾಗಿದೆ. ಉಳಿದಂತೆ ಉಡುಪಿ ತುಮಕೂರು, ಮೈಸೂರು, ಹಾಸನ, ಧಾರವಾಡ, ಗದಗ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗ, ಬೀದರ್, ಬೆಳಗಾವಿ ಮೊದಲಾದ ಜಿಲ್ಲೆಗಳ ಕೆಲವು ಕೇಂದ್ರಗಳಲ್ಲಿ ಎಡಪಕ್ಷಗಳ ಮುತುವರ್ಜಿಯಿಂದ ಪ್ರತಿಭಟನೆಗಳನ್ನು ನಡೆಸುವ ಮೂಲಕ ಹರತಾಳ ಯಶಸ್ವಿಗೊಳಿಸಲಾಗಿದೆ.



ಜನಶಕ್ತಿ
ಕನ್ನಡ ವಾರಪತ್ರಿಕೆ

ಬೆಂಗಳೂರಿನಲ್ಲಿ ಪುರಭವನದ ಮುಂದೆ ಪ್ರತಿಭಟನೆ

ದೇಶವ್ಯಾಪಿ ಹರತಾಳದ ಅಂಗವಾಗಿ ಬೆಂಗಳೂರಿನ ಪುರಭವನ ಎದುರು ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು. ಪ್ರತಿಭಟನಾಕಾರರು ಕಾಂಗ್ರೇಸ್ ನೇತೃತ್ವದ ಯುಪಿಎ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ನಂತರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಜೆಡಿ(ಎಸ್)ನ ಕಾರ್ಯಾಧ್ಯಕ್ಷರಾದ ಪಿ.ಜಿ.ಆರ್.ಸಿಂಧ್ಯಾ, ಸಿಪಿಐ(ಎಂ)ನ ರಾಜ್ಯಕಾರ್ಯದರ್ಶಿ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯ ಅಧ್ಯಕ್ಷ ವಿ.ಜೆ.ಕೆ. ನಾಯರ್ ಸಿಪಿಐ ನ ರಾಜ್ಯ ಕಾರ್ಯದರ್ಶಿ ಪಿ.ವಿ.ಲೋಕೇಶ್, ಎಐಎಫ್‌ಬಿನ ರಾಜ್ಯ ಅಧ್ಯಕ್ಷರಾದ ಜಿ.ಆರ್.ಶಿವಶಂಕರ್, ಡಿ.ಎಸ್.ಎಸ್.(ಅಂಬೇಡ್ಕರ್‌ವಾದ) ನ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವರು ಮಾತನಾಡಿ, ಸುಲಿಗೆ ಕೋರ ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕುತ್ತಿರುವ ಕೇಂದ್ರ ಕಾಂಗ್ರೇಸ್ ಸರ್ಕಾರದ ನೀತಿಗಳ ವಿರುದ್ಧ ಐಕ್ಯ ಹೋರಾಟವನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ದೇಶವ್ಯಾಪಿ ಹರತಾಳಕ್ಕೆ ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟವೂ ಬೆಂಬಲ ನೀಡಿ


ಲಕ್ನೋ

ಲಾರಿಗಳ ಸಂಚಾರ ಸ್ಥಗಿತಗೊಳಿಸಿತ್ತು. ವ್ಯಾಪಾರಸ್ಥರ ಸಂಘಟನೆಗಳೂ ಮುಷ್ಕರವನ್ನು ಬೆಂಬಲಿಸಿದ್ದವು. ಜೆಡಿ(ಯು) ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿ ಪ್ರತಿಭಟನೆ ನಡೆಸಿದರು. ಬಿಜೆಪಿ ಕರೆ ನೀಡಿದ ಭಾರತ್ ಬಂದ್ ಅಂಗವಾಗಿ ಬೆಂಗಳೂರಿನಲ್ಲಿ ರಾಜಭವನಕ್ಕೆ ಕಾಲ್ನಡಗೆಯಲ್ಲಿ ಹೊರಟ.ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ,, ಸಂಸದ ಅನಂತಕುಮಾರ್, ವಿಧಾನ ಪರಿಷತ್ ಸದಸ್ಯೆ ತಾರಾ ಸೇರಿದಂತೆ ಹಲವು ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ನಂತರ ಬಿಡುಗಡೆಗೊಳಿಸಿದರು.

ಊರಲ್ಲಿ ಗಣ್ಯರೊಬ್ಬರು ನಿಧನರಾದಾಗ ಅಂಗಡಿ ಬಾಗಿಲುಗಳನ್ನು ಮುಚ್ಚಿ, ಶಾಲೆ ಕಾಲೇಜುಗಳಿಗೆ ರಜೆ ಘೋಷಿಸಿ ಹರತಾಳ ಆಚರಿಸುತ್ತಾರೆ. ಈ ನಮ್ಮ ದೇಶದಲ್ಲಿ ಜನರಿಂದ ಚುನಾಯಿತಗೊಂಡು ಅಧಿಕಾರ ವಹಿಸಿಕೊಂಡಿರುವ ಕೇಂದ್ರ ಸರ್ಕಾರ ನಾಗರಿಕರ ಹಿತಗಳನ್ನು ಸಂಪೂರ್ಣವಾಗಿ ಕಡೆಗಣಿಸಿದಾಗ ದೇಶದ ಜನರ ಪಾಲಿಗೆ ಆ ಸರ್ಕಾರ ಇದ್ದೂ ಸತ್ತಂತೆ. ದೇಶದ ಮಾರುಕಟ್ಟೆಯನ್ನು ಮಾತ್ರವಲ್ಲ ಇಡೀ ಅರ್ಥ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ಕಾರ್ಪೊರೇಟ್ ಕಂಪನಿಗಳಿಗೆ ಹೆಚ್ಚು ಹೆಚ್ಚು ಮುಕ್ತಗೊಳಿಸಲು ಆತುರವಾಗಿರುವ ಡಾ. ಮನಮೋಹನ ಸಿಂಗ್ ಸರ್ಕಾರಕ್ಕೆ ಜನರ ಕೂಗು ಕೇಳುವುದಿಲ್ಲ. ಸತ್ತ ವ್ಯಕ್ತಿಗೂ ಕಿವಿ ಕೇಳುತ್ತಿರುವುದಿಲ್ಲ. ಇನ್ನು ಹೆಣವನ್ನು ಸ್ಮಶಾನಕ್ಕೆ ಸಾಗಿಸುವುದೊಂದೇ ಬಾಕಿ ಉಳಿದಿದೆ.

ಕಾವೇರಿ : ಭಾವೋದ್ರೇಕ ಬೇಡ –ಸಿಪಿಐ(ಎಂ)

9 ವರ್ಷಗಳ ನಂತರ, ಪ್ರಧಾನಿ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರದ ಸಭೆ ಒಮ್ಮತದ ಅಭಿಪ್ರಾಯಕ್ಕೆ ಬರಲು ವಿಫಲವಾಗಿದೆ. ಸಭೆಯಲ್ಲಿ ಉಭಯ ರಾಜ್ಯಗಳ ನಡುವೆ ಒಮ್ಮತ ಮೂಡಿಸಲು ಸಾಧ್ಯವಾಗದಾಗ ಸೆ. 21 ರಿಂದ ಅ, 15 ರ ವರೆಗೆ ಕರ್ನಾಟಕ ಕಾವೇರಿ ನದಿಯಿಂದ ಪ್ರತಿನಿತ್ಯ 9 ಸಾವಿರ ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ಮನಮೋಹನ ಸಿಂಗ್ ಸೂಚಿಸಿದರು. ಪ್ರಧಾನಿ ಸೂಚನೆ ಎರಡೂ ರಾಜ್ಯಗಳಿಗೂ ಒಪ್ಪಿಗೆ ಆಗಲಿಲ್ಲ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ನೇತೃತ್ವದ ತಂಡ ಸಭಾತ್ಯಾಗ ಮಾಡಿತು. ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ತನ್ನ ಪ್ರತಿಭಟನೆಯನ್ನು ದಾಖಲಿಸಿ ಪುನಃ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತುವುದಾಗಿ ಪ್ರಕಟಿಸಿದರು. ಸಧ್ಯದ ಪರಿಸ್ಥಿತಿಯಲ್ಲಿ ಒಂದು ಹನಿ ನೀರು ಬಿಡಲು ಸಾಧ್ಯವಿಲ್ಲ ಎಂದು ಜಗದೀಶ್ ಶೆಟ್ಟರ್ ಘೋಷಿಸಿಕೊಂಡರೆ, ಪ್ರತಿದಿನ ಕನಿಷ್ಟ ಒಂದು ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡಬೇಕು ಎಂಬುದು ಜಯಲಲಿತಾ ಅವರ ಆಗ್ರಹವಾಗಿದೆ.

ನೀರು ಬಿಡುವುದನ್ನು ಮುಂದುವರೆಸಬೇಕು ಎಂಬುದು ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ ಒತ್ತಾಯವಾಗಿತ್ತು. ಆದರೆ ಪ್ರಧಾನ ಮಂತ್ರಿ ಪ್ರತಿದಿನ 9 ಸಾವಿರ ಕ್ಯೂಸೆಕ್ಸ್ ನೀರು ಬಿಡಬೇಕು ಎಂದು ನೀಡಿದ ಸೂಚನೆಯಿಂದಾಗಿ ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ.

ತಮಿಳರ ಮೇಲೆ ದೌರ್ಜನ್ಯ ಸಲ್ಲದು

ಸಧ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದ ವಾದದಲ್ಲಿ ನ್ಯಾಯ ಇರಬಹುದು. ಜಯಲಲಿತಾರವರ ಬೇಡಿಕೆ ಅಸಂಭದ್ಧವೇ ಆಗಿರಬಹುದು. ಆದರೆ ಅದಕ್ಕಾಗಿ ರಾಜ್ಯದಲ್ಲಿ, ಮುಖ್ಯವಾಗಿ ಬೆಂಗಳೂರಿನಲ್ಲಿ ನೆಲೆಸಿರುವ ತಮಿಳರ ಮೇಲೆ ದೌರ್ಜನ್ಯ ಮಾಡುವ ಆಲೋಚನೆಯನ್ನೇ ಸಿಪಿಐ(ಎಂ) ತೀವ್ರವಾಗಿ ಖಂಡಿಸುತ್ತದೆ.

ಎರಡು ರಾಜ್ಯಗಳ ನಡುವೆ ವಿವಾದವೊಂದು ತಲೆದೋರಿದಾಗ, ಮುಕ್ತ ಮಾತುಕತೆಯಿಂದಲೂ ಅದು ಇತ್ಯರ್ಥ ಆಗದಿದ್ದಾಗ ನ್ಯಾಯಾಲಯದ ಬಾಗಿಲು ತಟ್ಟುವುದೊಂದೇ ಉಳಿಯುವ ಮಾರ್ಗ. ಪ್ರಸಕ್ತ ಸನ್ನಿವೇಶದಲ್ಲಿಯೂ ವಿವಾದವನ್ನು



ಸಾಂಬಾ ಬೆಳೆಗಳ ರಕ್ಷಣೆಗಾಗಿ 25 ದಿನಗಳ ಕಾಲ ಪ್ರತಿದಿನ 2 ಟಿ.ಎಂ.ಸಿ. ನೀರು ಬಿಡಗಡೆ ಮಾಡಬೇಕೆಂದು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೊರೆಹೋಗಿತ್ತು. ಸೆ.12 ರಂದ 19 ರ ವರೆಗೆ ತಾತ್ಕಾಲಿಕವಾಗಿ ದಿನಕ್ಕೆ ಹೆಚ್ಚುವರಿಯಾಗಿ 2400 ಕ್ಯೂಸೆಕ್ಸ್ ನೀರು ಬಿಡುತ್ತೇವೆ ಎಂದು ಕರ್ನಾಟಕ ಸರ್ಕಾರ ವಾದ ಮಂಡಿಸಿತ್ತು. ಈ ವಾದವನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿ ಸೆ. 12 ರಿಂದ 20 ರ ವರೆಗೆ ನಿತ್ಯ 10 ಸಾವಿರ ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ಕರ್ನಾಟಕಕ್ಕೆ ಆದೇಶ ನೀಡಿತ್ತು. ಉಳಿದಂತೆ ನೀರು ಹಂಚಿಕೆಯ ತಕರಾರುಗಳನ್ನು ಕಾವೇರಿ ನದಿ ಪ್ರಾಧಿಕಾರದಲ್ಲೇ ಇತ್ಯರ್ಥಪಡಿಸಿಕೊಳ್ಳುವಂತೆ ಸೂಚಿಸಿತ್ತು. ಈ ಹಿನ್ನಲೆಯಲ್ಲಿ ಹಾಲಿ ಬಿಡುತ್ತಿದ್ದ 7600 ಕ್ಯೂಸೆಕ್ಸ್ ನೀರಿನ ಜೊತೆಗೆ ಹೆಚ್ಚುವರಿಯಾಗಿ 2400 ಕ್ಯೂಸೆಕ್ಸ್ ನೀರು (ಒಟ್ಟು 10ಸಾವಿರ ಕ್ಯೂಸೆಕ್ಸ್) ಬಿಡುಗಡೆ ಮಾಡುತ್ತಾ ಬಂದಿತ್ತು. ಸೆ. 10 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡಲು ಕರ್ನಾಟಕ ಸರ್ಕಾರ ಒಪ್ಪಿಕೊಂಡಾಗ ಕಾವೇರಿ ಜಲಾಶಯಗಳಿಗೆ ಆಗ 23 ಸಾವಿರದಿಂದ 29 ಸಾವಿರ ಕ್ಯೂಸೆಕ್ಸ್ ಒಳ ಹರಿವಿತ್ತು. ಸೆ. 19 ರಿಂದ ಒಳ ಹರಿವಿನ ಪ್ರಮಾಣ 11 ಸಾವಿರ ಕ್ಯೂಸೆಕ್ಸ್‌ಗೆ ಇಳಿದಿದೆ ಎನ್ನಲಾಗುತ್ತಿದೆ. ಒಳ ಹರಿವಿನ ಅರ್ಧದಷ್ಟನ್ನು ನೀಡಲು ಕರ್ನಾಟಕ ಸಿದ್ಧವಿದೆ ಎಂದು ಕೇಂದ್ರ ಸರ್ಕಾರಕ್ಕೆ ಕರ್ನಾಟಕದಿಂದ ಸುಳಿವು ನೀಡಲಾಯಿತು. ಹಾಲಿ ಬಿಡುತ್ತಿರುವ 7 ಸಾವಿರ ಕ್ಯೂಸೆಕ್ಸ್

ಸುಪ್ರೀಂ ಕೋರ್ಟ್‌ಗೆ ಬಿಡುವುದೇ ಒಳ್ಳೆಯದು. ಅಲ್ಲಿ ಕರ್ನಾಟಕ ತನ್ನ ವಾದವನ್ನು ಸಮರ್ಪಕವಾಗಿ ಮಂಡಿಸಬೇಕು ನ್ಯಾಯಾಲಯದ ಹೊರಗಡೆ ಸಂಧಾನದ ಮೂಲಕ ಇತ್ಯರ್ಥ ಮಾಡಲು ಸಾಧ್ಯವಿದ್ದರೆ ಅದನ್ನು ಪರಿಶೀಲಿಸುವುದು ಬಲಹೀನತೆ ಎಂದು ತಿಳಿದುಕೊಳ್ಳವ ಅಗತ್ಯವಿಲ್ಲ. ಪರಸ್ಪರ ಚರ್ಚೆಯಿಂದ 'ಸಂಕಷ್ಟ ಸೂತ್ರ' ವನ್ನು ಕಂಡುಕೊಳ್ಳಬಹುದು. ಎರಡು ರಾಜ್ಯಗಳ ರೈತರ ಹಾಗೂ ಕುಡಿಯುವ ನೀರಿಗಾಗಿ ಕಾವೇರಿ ನದಿಯನ್ನು ಅವಲಂಭಿಸಿರುವ ಲಕ್ಷಾಂತರ ಜನರ ಅಳಿವು–ಉಳಿವಿನ ಈ ಪ್ರಶ್ನೆಯಲ್ಲಿ ಕೇಂದ್ರದ ಕಾಂಗ್ರೇಸ್ ಪಕ್ಷವಾಗಲಿ ರಾಜ್ಯದ ಬಿಜೆಪಿಯಾಗಲಿ ರಾಜಕೀಯ ಮಾಡಲು ಯೋಚಿಸಬಾರದು.

ಕಾವೇರಿ ನದಿ ನೀರಿನ ವಿವಾದ ಬಂದಾಗಲೆಲ್ಲ ಬೆಂಗಳೂರಿನಲ್ಲಿರುವ ಕೆಲವು ಕನ್ನಡ ಸಂಘಗಳು ಅಮಾಯಕ ತಮಿಳರ ಮೇಲೆ ಶೌರ್ಯ ಪ್ರದರ್ಶನಕ್ಕೆ ಹೊರಡುತ್ತವೆ. ತಮಿಳು ಚಿತ್ರ ಪ್ರದರ್ಶನ, ಚಾನೆಲ್, ಪತ್ರಿಕೆ, ಬಸ್‌ಗಳನ್ನು ಬಂದ್ ಮಾಡಿ ಬಿಸಿ ಮುಟ್ಟಿಸುತ್ತೇವೆ ಎಂಬ ಶೌರ್ಯದ ಮಾತುಗಳು ಕೇಳಿ ಬರುತ್ತಿವೆ. ರಾಜ್ಯ ಬಿಜೆಪಿ ಇಂತಹ ಪ್ರವೃತ್ತಿಯನ್ನು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ಮುಂದಾಗುವ ಅಪಾಯವೂ ಇದೆ. ಇದನ್ನು ಎಲ್ಲ ಶಾಂತಿ ಪ್ರಿಯ ನಾಗರಿಕರು ಖಂಡಿಸಬೇಕು. ರಾಜಧಾನಿಯಲ್ಲಿ ತಮಿಳರ ಮೇಲೆ ಯಾವ ದೌರ್ಜನ್ಯವೂ ನಡೆಯದಂತೆ ರಾಜ್ಯ ಸರ್ಕಾರ ಕಟ್ಟೆಚ್ಚರ ವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಅನುಮಾನ ಆತಂಕಗಳ ಮಧ್ಯೆ ಅಲ್ಪಸಂಖ್ಯಾತ ಮುಸ್ಲಿಮರು

ಎಂ. ಇಕ್‌ಬಾಲ್ ಹುಸೇನ್
ವಕೀಲರು

ಆಸ್ಸಾಂ ರಾಜ್ಯದಲ್ಲಿ ಜನಾಂಗೀಯ ಘರ್ಷಣೆ ಕೋಮುಗಲಭೆಯ ಸ್ವರೂಪಕ್ಕೆ ತಿರುಗಿದೆ. ಎರಡು ದಶಕಗಳ ಹಿಂದೆ ಆಸ್ಸಾಂ ಗಣಸಂಗ್ರಾಮ ಪರಿಷತ್ತು ಪ್ರಾದೇಶಿಕ ಜನರ ಹಿತಾಸಕ್ತಿಗೆಂದು ಪ್ರಾರಂಭಿಸಿದ ಚಳುವಳಿ ಕೊನೆಗೆ ಬಲಪಂಥೀಯರು, ಮತೀಯ ಉಗ್ರವಾದಿಗಳು ಹಾಗೂ ಸಂಘಪರಿವಾರದ ಉಪಶಾಖೆಗಳಾದ ಭಜರಂಗದಳ, ವಿಶ್ವಹಿಂದೂ ಪರಿಷತ್ತಿನವರಿಗೆ ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳಲು ದಾರಿ ಮಾಡಿತು. ಅಲ್ಪ ಸಂಖ್ಯಾತರ ಮೇಲೆ ಸಮರೋಪಾದಿಯಲ್ಲಿ ದಾಳಿಮಾಡಿ ದಾರುಣವಾಗಿ ಸಾಮೂಹಿಕ ಹತ್ಯೆಗಳನ್ನು ನಡೆಸಲಾಯಿತು. ನಂತರ ಪ್ರಯಾಸದ ಶಾಂತಿ ಮಾತುಕತೆ, ಒಪ್ಪಂದಗಳ ಪ್ರಹಸನ ನಡೆಯಿತು. ಆ ಕಡೆ ಪಶ್ಚಿಮಬಂಗಾಳ, ಈ ಕಡೆ ತ್ರಿಪುರಾ ರಾಜ್ಯ. ಇವುಗಳ ಮಧ್ಯೆ ಮೂರನೇ ಪ್ರಬಲ ಶಕ್ತಿಯಾಗಿ ಬೆಳೆಯುತ್ತಿದ್ದ ಎಡಪಕ್ಷಗಳ ಅದರಲ್ಲೂ ಸಿಪಿಐ(ಎಂ)ನ ಕಾರ್ಯಕರ್ತರನ್ನು, ಕಚೇರಿಗಳನ್ನು ಗುರಿಯನ್ನಾಗಿಸಿ ಚಳುವಳಿ ಹೆಸರಿನಲ್ಲಿ ವಿಧ್ವಂಸಕತೆ ಮೆರೆದರು. ನಿಧಾನವಾಗಿ ಚೇತರಿಸಿಕೊಂಡ ಜನತೆ ಮತ್ತೆ ತಮ್ಮ ಅಸ್ತಿತ್ವಕ್ಕಾಗಿ ಸಂಘಟಿತರಾಗುತ್ತಿದ್ದಾರೆ, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಭಾವಿಸಿದ ಬಲಪಂಥಿಯ ಶಕ್ತಿಗಳು ಗುಂಡಿನ ದಾಳಿಯ ಮೂಲಕ ಮತ್ತೆ ಯುದ್ಧ ಸಾರಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿವೆ. ಆದರೆ ಆಸ್ಸಾಂ ರಾಜ್ಯದಲ್ಲಿ ಶಾಂತಿ, ಕಾನೂನು, ಸುವ್ಯವಸ್ಥಿತ ಆಡಳಿತ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ. ನಿರಾಶ್ರಿತರಂತೆ ಶಿಬಿರಗಳಲ್ಲಿ ವಾಸಿಸುತ್ತಿರುವ ಜನರಿಗೆ ಅಗತ್ಯ ಸೌಕರ್ಯ, ಭದ್ರತೆ, ನೆಮ್ಮದಿ ನೀಡಲು ಸಹಾ ಅಸಹಾಯಕರಂತೆ ವರ್ತಿಸುತ್ತಿವೆ. ಶಿಬಿರಗಳಲ್ಲಿ ವಾಸಿಸುತ್ತಿರುವ ಜನರಿಗೆ ಊಟ, ಬಟ್ಟೆ, ಆಶ್ರಯ ನೀಡಲು ತಿಣುಕುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೇವಲ ಮನವಿ ಸಮಾಧಾನಕ್ಕೆ ಇಳಿದಿವೆ. ಬಿಜೆಪಿ ಯಥಾ ಪ್ರಕಾರ ಬಾಂಗ್ಲಾ ನಿರಾಶ್ರಿತರ ಮೇಲೆ ಆರೋಪಗಳನ್ನು ಹೊರಿಸುತ್ತಾ ತನ್ನ ಪಕ್ಷದ ಬೇರುಗಳನ್ನು ಕೋಮುಭಾವನೆಗಳ ಮೂಲಕ ಬೆಳೆಸಲು ಪ್ರಯತ್ನಿಸುತ್ತಿದೆ. ಅಲ್ಪ ಸಂಖ್ಯಾತರಿಗೆ ತಮ್ಮ ಹಿತ ಕಾಪಾಡುವವರು ಯಾರು ? ಎನ್ನುವ ಗೊಂದಲ ಆವರಿಸಿದೆ.

ಕಾಂಗ್ರೆಸ್ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರನ್ನು ರಕ್ಷಿಸಲು ವಿಫಲಾಗಿರುವ ಹಿನ್ನಲೆಯಲ್ಲಿ ಅವರಿಗೆ ಸೂಕ್ತ ವೈದ್ಯಕೀಯ ಉಪಚಾರ, ಆಹಾರ, ರಕ್ಷಣೆಗಾಗಿ ಧನ ಸಹಾಯ ಒದಗಿಸಲು ಮುಸ್ಲಿಂ ಸಮುದಾಯದ ರಾಜಕೀಯೇತರ ಮುಖಂಡರು, ಸಂಘ ಸಂಸ್ಥೆಗಳು ರಂಜಾನ್ ಮಾಸದಲ್ಲಿ ಕರ್ನಾಟಕದ ರಾಜಧಾನಿ ಬೆಂಗಳೂರು ಸೇರಿದಂತೆ ಹಲವು ಕಡೆ ಹಣ ಸಂಗ್ರಹ ಮಾಡಿ ಕಳುಹಿಸಿದರು. ಮತ್ತೊಂದು ಕಡೆ ಈಶಾನ್ಯ ರಾಜ್ಯದ ಜನತೆಯ ಮೇಲೆ ರಂಜಾನ್ ನಂತರ ಮುಸ್ಲಿಂಮರು ಹಲ್ಲೆ ಮಾಡುತ್ತಾರೆ ಎನ್ನುವ ವದಂತಿ ಹರಡಿ ಜನ ಸಾಮೂಹಿಕವಾಗಿ



ತಮ್ಮ ರಾಜ್ಯಗಳಿಗೆ ಫಲಾಯನ ಮಾಡುವ ಪ್ರಸಂಗ ಒದಗಿತು. ಈಶಾನ್ಯ ರಾಜ್ಯಗಳ ಮುಸ್ಲಿಮೇತರರನ್ನು ಮನ ಒಲಿಸಿ ಅವರಿಗೆ ತಾವು ರಕ್ಷಣೆ ನೀಡುವುದಾಗಿ ಭರವಸೆ ನೀಡುವ ಮೂಲಕ ತಾವೇ ಅವರ ಹಿತವನ್ನು ಬಯಸುವವರು ಎನ್ನುವ ಸಂದೇಶ ನೀಡಲಾಯಿತು.

ಮುಸ್ಲಿಂ ಸಮುದಾಯ ಈ ಎಲ್ಲಾ ಘಟನೆಗಳಿಂದ ಪಾಠ ಕಲಿಯಬೇಕು. ಕಾಂಗ್ರೆಸ್ ಪಕ್ಷವಾಗಲೀ, ಮುಸ್ಲಿಂರ ಹಿತರಕ್ಷಣೆಯ ಗಿಮಿಕ್ಕುಗಳನ್ನು ಪ್ರದರ್ಶಿಸುವ ಪ್ರಾದೇಶಿಕ ಪಕ್ಷಗಳಾದ ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ ಅಥವಾ ಜೆಡಿಯು ಪಕ್ಷಗಳು ಸದಾ ಮುಸ್ಲಿಂ ಸಮುದಾಯದ ಸಹಾಯಕ್ಕೆ ಬೆಂಬಲಕ್ಕೆ ಒದಗಿಬರುವ ಪಕ್ಷಗಳಲ್ಲ ಎನ್ನುವುದನ್ನು ಅರಿಯಬೇಕು. ಮುಸ್ಲಿಂ ಸಮುದಾಯ ಮುಖ್ಯವಾಗಿ ದುಡಿದು ಜೀವಿಸುವ ಜನಾಂಗ. ಈ ದೇಶದ ಕೋಟ್ಯಾಂತರ ಶ್ರಮಜೀವಿಗಳ, ದುಡಿದು ಜೀವಿಸುವ ರೈತ, ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಕಾಳಜಿ ಈ ಪಕ್ಷಗಳಿಗೆ ಇಲ್ಲ ಎನ್ನುವುದನ್ನು ಮನಗಾಣಬೇಕು. ತಮ್ಮಂತೆ ಈ ದೇಶದ ನಾಗರಿಕರಾಗಿ ಉತ್ತಮ ಜೀವನಕ್ಕಾಗಿ ಹಂಬಲಿಸಿ ಹೋರಾಡುತ್ತಿರುವ ಶ್ರಮಿಕ ವರ್ಗ ಹಾಗೂ ಅವರ ಹಿತ ಕಾಪಾಡುವವದು ಎಡಪಕ್ಷಗಳು ಮಾತ್ರ ತಮ್ಮ ಸಂಗಾತಿಗಳಾಗಬಲ್ಲರು ಎನ್ನುವುದನ್ನು ತಿಳಿಯಬೇಕು. ಮುಲ್ಲಾಗಳ ಮಾತುಕೇಳಿ ಓಟು ಹಾಕುವುದನ್ನು ಬಿಡಬೇಕು. ಮುಸ್ಲಿಂ ಬಾಹುಳ್ಯವುಳ್ಳ ಪಶ್ಚಿಮಬಂಗಾಳ, ಕೇರಳ ರಾಜ್ಯಗಳಲ್ಲಿ ಎಡಪಕ್ಷಗಳೊಂದಿಗೆ ಗುರುತಿಸಿಕೊಂಡಿರುವ ಮುಸ್ಲಿಂ ಸಮುದಾಯ ಯಾವುದೇ ಕೋಮುಗಲಭೆಗಳಿಗೆ ಒಳಗಾಗದೇ ನೆಮ್ಮದಿಯಾಗಿ ಜೀವಿಸುತ್ತಿರುವುದನ್ನು ನೋಡಬೇಕು.


ಮುಸ್ಲಿಂ ಸಮುದಾಯ ತನ್ನ ಹಿತರಕ್ಷಣೆಗಾಗಿ ಕಾಂಗ್ರೆಸ್ ಪಕ್ಷ ಹಾಗೂ ಸೋಗಲಾಡಿ ಶ್ರೀಮಂತ ಮುಸ್ಲಿಂ ಮುಖಂಡರನ್ನು ತಮ್ಮನ್ನು ಬಿಜೆಪಿ ಹಾಗೂ ಅದರ ಅಂಗಸಂಸ್ಥೆಗಳಿಂದ ರಕ್ಷಿಸುವ ರಕ್ಷಕರೆಂದು ತಪ್ಪಾಗಿ ಭಾವಿಸಿಕೊಂಡಿದ್ದಾರೆ. ಒಂದು ಸಮಾಜ ಜೀವಂತವಾಗಿ ಬದುಕಬೇಕಾದರೆ ಅದು ದೇಶದ ಮುಖ್ಯವಾಹಿನಿಯೊಂದಿಗೆ ಬೇರೆಯಬೇಕು. ರಾಜ್ಯ ಭಾಷೆ, ಆಡಳಿತದಲ್ಲಿ ಭಾಗಿಯಾಗಬೇಕು ತಮ್ಮವರು ತಪ್ಪು ಮಾಡಿದರೆ ಖಂಡಿಸಬೇಕು.

ಪಾಕಿಸ್ತಾನದಲ್ಲಿ ದಿನನಿತ್ಯ ನಡೆಯುತ್ತಿರುವ ಷಿಯಾ ಮುಸ್ಲಿಮರ ಹತ್ಯೆಯನ್ನು ಇಸ್ಲಾಂಧರ್ಮ, ಕುರಾನ ಒಪ್ಪುತ್ತದೆಯೇ ? ಇದನ್ನು ಭಾರತೀಯ ಮುಸ್ಲಿಮರು ಬಹಿರಂಗವಾಗಿ ಖಂಡಿಸಿ ಪಾಕಿಸ್ತಾನಕ್ಕೆ ಮುಸ್ಲಿಮರ ಅಸಮ್ಮತಿಯನ್ನು ದೂತವಾಸದ ಮೂಲಕ ಸಂದೇಶ ರವಾನಿಸಬೇಕು. ಹಾಗೆಯೇ ಕಾಶ್ಮೀರ ವಿರಲಿ, ಬೇರೆಕಡೆ ಇರಲಿ ಯಾವುದೇ ರೀತಿಯ ಭಯೋತ್ಪಾದನೆ, ಆತಂಕ ಸೃಷ್ಟಿಯನ್ನು ಸಹಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಬೇಕು. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ, ಅಫಘಾನಿಸ್ತಾನದಲ್ಲಿ ಅಮೇರಿಕ ದೇಶದ ಹಸ್ತಕ್ಷೇಪದಿಂದ ಅಂತರಾಷ್ಟ್ರೀಯವಾಗಿ ಇಡೀ ಮುಸ್ಲಿಂ ಸಮುದಾಯ ನಿತ್ಯ ಬಲಿಯಾಗುತ್ತಿರುವುದನ್ನು ಪ್ರತಿಭಟಿಸಬೇಕು.

ನಾವು ಯಾವುದನ್ನು ಒಪ್ಪಬೇಕು, ಯಾತ ವಿರುದ್ಧ ಪ್ರತಿಭಟಿಸಬೇಕು, ಯಾರ ಜೊತೆಗೆ ಹೆಜ್ಜೆ ಹಾಕಬೇಕು ಎನ್ನುವುದರ ಕುರಿತು ಮುಸ್ಲಿಂ ಸಮುದಾಯ ಚಿಂತಿಸಬೇಕು. ಭಾರತದ ರಾಷ್ಟ್ರ ರಾಜಕಾರಣ, ಕರ್ನಾಟಕದ ರಾಜ್ಯಕಾರಣವನ್ನು ಸರಿದಾರಿಗೆ ತರುವಲ್ಲಿ ಹೋರಾಡುತ್ತಿರುವ ರೈತ, ಕಾರ್ಮಿಕ ಶ್ರಮ ಜೀವಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಧರ್ಮ, ಜಾತಿಗಳನ್ನು ಬದಿಗಿಟ್ಟು ಮುನ್ನಡೆಯುವ ಎಡಪಕ್ಷಗಳು ಮಾತ್ರ ಮುಸ್ಲಿಮರ ಅನುಮಾನ, ಆತಂಕಗಳನ್ನು ತೊಡೆಯುವಲ್ಲಿ ನಿಜವಾದ ಆಸಕ್ತಿ ಹೊಂದಿವೆ ಎನ್ನುವುದನ್ನು ಮನಗಾಣಬೇಕು.

ರಾಜ್ಯದ ಮುಸಲ್ಮಾನರು ಗಮನಿಸಬೇಕಾದ ಇನ್ನೊಂದು ಅಂಶ ಏನೆಂದರೆ ಮುಸಲ್ಮಾನರನ್ನು ಪ್ರತ್ಯೇಕವಾಗಿ ಸಂಘಟಿಸುವ, ಹಿಂದುತ್ವ ಸಂಘಟನೆಯ ಮಾದರಿಯಲ್ಲಿ ಮುಸಲ್ಮಾನರ ನಡುವೆ ಹಿಂಸೆಯನ್ನು ಪ್ರತಿಪಾದಿಸುವ ಸಂಘಟನೆಗಳನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ನಿರಂತರ ದಮನ, ದೌರ್ಜನ್ಯಗಳಿಂದ ನೊಂದ ಮುಸ್ಲಿಂ ಯುವಕರು ಅಂತಹ ಸಂಘಟನೆಗಳಿಗೆ ಆಕರ್ಷಿತರಾಗುವುದು ಕಾಣುತ್ತಿದ್ದೇವೆ. ಇದೊಂದು ಅಪಾಯಕಾರಿ ಬೆಳವಣಿಯಾಗಿದೆ. ಅಲ್ಪಸಂಖ್ಯಾತರಾಗಿರುವ ಮುಸಲ್ಮಾನರನ್ನು ಪ್ರತ್ಯೇಕಿಸುವುದರಲ್ಲಿ ಮುಸಲ್ಮಾನರ ಹಿತ ಸಾಧನೆಯಾಗಲಾರದು. ದೇಶದ ಮುಖ್ಯ ವಾಹಿನಿಯಿಂದ ದೂರಸರಿಯುವುದು ಹೆಚ್ಚೆಚ್ಚು ದಾಳಿ ದಬ್ಬಾಳಿಕೆಗಳಿಗೆ ನೀಡುವ ಆಹ್ವಾನವಾಗುವುದು. ದೇಶದ ಪ್ರಗತಿಪರ, ಜಾತ್ಯಾತೀತ ಶಕ್ತಿಗಳೊಂದಿಗೆ, ದುಡಿಯುವ ಜನರ ಆಂದೋಲನಗಳೊಂದಿಗೆ ಗುರುತಿಸಿಕೊಳ್ಳುವುದರಲ್ಲೇ ದೇಶದ ಮುಸಲ್ಮಾನರ ಹಿತ ಅಡಗಿದೆ.

ಡೀಸೆಲ್, ಎಲ್‌ಪಿಜಿ, ಎಫ್‌ಡಿಐ : ಜನತೆಯ ಮೇಲೆ ದಾಳಿಗಳ ಹೊಸದೊಂದು ಪರ್ವ



ವೇದರಾಜ ಎನ್.ಕೆ.

ಸಂಸತ್ತಿನ ಮಳೆಗಾಲದ ಅಧಿವೇಶನ ಅಧಿಕೃತವಾಗಿ ಕೊನೆಗೊಳ್ಳುವುದನ್ನೇ ಕಾಯುತ್ತಿದ್ದ ಯುಪಿಎ–2 ಸರಕಾರ 'ಆಮ್ ಆದ್ಮಿ'ಯ ಮೇಲೆ ಹೊಸ ದಾಳಿಗಳಿಗೆ ಇಳಿದಿದೆ. ಮೊದಲಿಗೆ, ಡೀಸೆಲ್ ಬೆಲೆಗಳಲ್ಲಿ 5ರೂ.ಗಳನ್ನೂ ಮೀರಿದ ಭಾರೀ ಹೆಚ್ಚಳ, ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರುಗಳ ಪೂರೈಕೆಯನ್ನು ವರ್ಷಕ್ಕೆ ಆರಕ್ಕೆ ಮಿತಿಗೊಳಿಸಿ, ಹೆಚ್ಚಿನ ಸಿಲಿಂಡರುಗಳಿಗೆ 'ಮುಕ್ತ ಮಾರುಕಟ್ಟೆ' ಬೆಲೆ ವಿಧಿಸಲಾಗುವುದೆಂದು ಪ್ರಕಟಿಸಿದ ಸರಕಾರ, ಮರುದಿನ, ಎರಡನೆಯ ಕಂತಾಗಿ, ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಯನ್ನು 51ಶೇ. ಕ್ಕೆ ಏರಿಸುವ ತನ್ನ ಬಹುದಿನಗಳ 'ಕನಸನ್ನು ನನಸಾಗಿಸಿ'ಕೊಂಡಿತು. ಜತೆಗೆ, ನಾಗರಿಕ ವಿಮಾನಯಾನ ಮತ್ತು ಪ್ರಸಾರ ವಲಯದಲ್ಲೂ ಎಫ್‌ಡಿಐ ಹೂಡಿಕೆಗಳನ್ನು 'ಉದಾರಗೊಳಿಸುವ' ಕ್ರಮಗಳನ್ನೂ ಪ್ರಕಟಿಸಿತು. ಹಲವು ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರಾಟ ಮಾಡಲಾಗುವುದು ಎಂದೂ ಪ್ರಕಟಿಸಲಾಯಿತು.

ಇದಕ್ಕೆ ಸ್ಪಂದಿಸಿ ಶೇರು ಮಾರುಕಟ್ಟೆ 443 ಪಾಯಿಂಟುಗಳಷ್ಟು ನೆಗೆದುದನ್ನು ಕಂಡು, ಮತ್ತು ಹಣಕಾಸು ಬಂಡವಾಳದ ತುತ್ತೂರಿಗಳಷ್ಟೇ ತಾವು ಎಂದು ಯಾವುದೇ ನಾಚಿಕೆಯಿಲ್ಲದೆ ಪ್ರದರ್ಶಿಸಿಕೊಂಡ ಕೆಲವು 'ರಾಷ್ಟ್ರೀಯ ಪತ್ರಿಕೆ'ಗಳು ನೀಡಿದ ಶಾಭಾಷ್‌ಗಿರಿಯಿಂದ ಉಬ್ಬಿಹೋದ ಯುಪಿಎ–2 ಹಣಕಾಸು ಮಂತ್ರಿಗಳು, ಅವರು ಬಯಸಿದಂತೆ, ಯಾರು ಎಷ್ಟೇ ವಿರೋಧಿಸಿದರೂ, ಈ ಕ್ರಮಗಳನ್ನು ಖಂಡಿತಾ ಹಿಂತೆಗೆದುಕೊಳ್ಳುವುದಿಲ್ಲ ಎಂದು ಸಾರಿದ್ದಾರೆ; ಅಷ್ಟೇ ಅಲ್ಲ, ಇನ್ನೂ ತರಲಾಗದೇ ಉಳಿಸಿರುವ 'ಸುಧಾರಣೆ'ಗಳನ್ನು ತರಲಾಗುವುದು ಎಂದೂ ಬೆದರಿಸಿದ್ದಾರೆ.



ಅತ್ತ ವಾಶಿಂಗ್ಟನ್‌ನಲ್ಲಿ, ಅಮೆರಿಕಾದ ಆಳರಸರು, ಕೆಲವು ದಿನಗಳ ಹಿಂದೆಯಷ್ಟೇ ತಾವು 'ನಿಷ್ಪ್ರಯೋಜಕ' ಎಂದು ಭಾರತದ ಪ್ರಧಾನ ಮಂತ್ರಿಗಳನ್ನು ವರ್ಣಿಸಿದ್ದು ಪ್ರಯೋಜನಕ್ಕೆ ಬಂತೆಂದು ಹಿರಿ–ಹಿರಿ ಹಿಗ್ಗುತ್ತಾ, ಈ "ಕಷ್ಟಕರವಾದರೂ ಅಗತ್ಯವಾದ" ಸುಧಾರಣೆಗಳಲ್ಲಿ 'ನಾವು ನಿಮ್ಮೊಂದಿಗೆ' ಪಾಲುದಾರರಾಗಿ ಇದ್ದೇವೆ ಎಂದು ಭರವಸೆ ನೀಡಿದ್ದಾರೆ. ಹೀಗೆ ಅಲ್ಲಿಯ ಆಳುವ ಮಂದಿಯ ಪರವಾಗಿ ಹೇಳಿರುವವರು ಅಲ್ಲಿಯ ಹಣಕಾಸು ಇಲಾಖೆಯ ವಕ್ತಾರರಲ್ಲ, ಬದಲಾಗಿ ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರರು ಎಂಬುದು ಗಮನಾರ್ಹ!

ಇವು ಯಾರಿಗೆ, ಯಾರ ಭದ್ರತೆಗೆ ಅಗತ್ಯವಾದ 'ಸುಧಾರಣೆಗಳು', ಭಾರತದ ಈ ಯುಪಿಎ–2 ಸರಕಾರ ಯಾರಿಗಾಗಿ ಇದೆ ಎಂಬುದರ ಬಗ್ಗೆ ಇನ್ನೂ ಯಾರಿಗಾದರೂ ಸಂದೇಹವಿದ್ದರೆ, ಅದನ್ನು ನಿವಾರಿಸಿರುವ ಹೇಳಿಕೆಗಳು, ಶಾಭಾಷ್‌ಗಿರಿಗಳಿವು.

ಯುಪಿಎ–2 ಸರಕಾರದ ಈ ಕ್ರಮಗಳ ಬಗ್ಗೆ ಆಕ್ರೋಶ ಜನಸಾಮಾನ್ಯರಿಗಷ್ಟೇ ಸೀಮಿತವಾಗಿಲ್ಲ.

'ಜನತೆಗೆ ಏಟು ನೀಡಿದಾಗ ಬಂಡವಾಳ ಹಿರಿ–ಹಿರಿ ಹಿಗ್ಗುತ್ತದೆ, ಜನತೆಯನ್ನು ಹಿಂಡಿದಾಗ ಹಣಕಾಸು ಬಂಡವಾಳ ಚಪ್ಪಾಳೆ ತಟ್ಟುತ್ತದೆ, ಭಾರತದ 'ಸಾಲ ಅರ್ಹತೆ' ಈಗ ಉತ್ತಮಗೊಳ್ಳುತ್ತದೆ ಎಂದು ಅಧಿಕಾರಿಗಳು ಉದ್ಗರಿಸುತ್ತಾರೆ, ಎಂತಹ ವೈಪರೀತ್ಯ, ನೋಡಿ! ಎಂದಿದ್ದಾರೆ ಪ್ರಖ್ಯಾತ ಎಡಪಂಥೀಯ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್.

ರಾಜಕೀಯ ಒಮ್ಮತ ಇಲ್ಲ ಎಂದು ತಿಳಿದಿದ್ದರೂ, ರಾಜಕೀಯ ಕಾನೂನುಬದ್ಧತೆ ಇಲ್ಲದ ಒಂದು ಸರಕಾರ ಈ ಮೂಲಕ ಸರ್ವಾಧಿಕಾರಶಾಹಿಯ ಭಂಡ ಪ್ರದರ್ಶನ ನಡೆಸಿದೆ, ಪ್ರಭುತ್ವವನ್ನು ಒಂದು ಸಣ್ಣ ಕೂಟ ವಶಪಡಿಸಿಕೊಂಡಂತೆ ಕಾಣುತ್ತಿದೆ ಎಂದು ಇನ್ನೊಬ್ಬ ಅರ್ಥಶಾಸ್ತ್ರಜ್ಞ ಡಾ.ಸಿ.ಪಿ.ಚಂದ್ರಶೇಖರ್ ವರ್ಣಿಸಿದ್ದಾರೆ.

ಎಲ್ಲ ಸಾಮೂಹಿಕ ಸಂಘಟನೆಗಳು, ರಾಜಕೀಯ ಪಕ್ಷಗಳು, ಸ್ವತಃ ಕಾಂಗ್ರೆಸಿನ ಕಾರ್ಯಕರ್ತರ ನಡುವೆಯೂ ವಿರೋಧವಿರುವ ಈ ಕ್ರಮಗಳು ಈಗ ಅಧಿಕೃತ ಧೋರಣೆಯಾಗಿರುವುದು ಸಮಸ್ತ ಕಾಂಗ್ರೆಸ್ ಪಕ್ಷ, ತನ್ನನ್ನು ಉನ್ನತ ಸರಕಾರೀ ಸ್ಥಾನಗಳಲ್ಲಿರುವ ಕುರುಡು ನವ–ಉದಾರವಾದಿ ಆರ್ಥಿಕ ತಜ್ಞರ ಒಂದು ಪುಟ್ಟ ಕೂಟ ದಾರಿ ತಪ್ಪಿಸಲು ಬಿಟ್ಟಿದೆ ಎಂಬುದನ್ನು ತೋರಿಸುತ್ತದೆ, ದೇಶೀ ಕಾರ್ಪೊರೇಟ್ ವಲಯ ಮತ್ತು ವಿದೇಶಿ ಹಣಕಾಸು ಬಂಡವಾಳದ ಮುಂದೆ ಈ ಮಂದಿಯ ದೈನ್ಯತೆ ಸಭ್ಯತೆಯ ಎಲ್ಲ ಮಿತಿಗಳನ್ನೂ ದಾಟಿದೆ ಎಂದು ಪ್ರಖ್ಯಾತ ಕೃಷಿ ಆರ್ಥಿಕ ತಜ್ಞೆ ಪ್ರೊ. ಉತ್ಸಾ ಪಟ್ನಾಯಕ್ ಕಟುವಾಗಿ ಟೀಕಿಸಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ಮಿತಿ ಸಮರ್ಥಿಸಿಕೊಳ್ಳಲು ಸುಳ್ಳಿಗೆ ಮೊರೆ?

ತಾನು ಪ್ರಕಟಿಸಿದ ಜನ–ವಿರೋಧಿ ಕ್ರಮಗಳನ್ನು ಸಮರ್ಥಿಸಿಕೊಳ್ಳಲು ಯುಪಿಎ–2 ಸರಕಾರ ಸಪ್ಟೆಂಬರ್ 17ರಂದು ಎಲ್ಲಾ ರಾಷ್ಟ್ರೀಯಪತ್ರಿಕೆಗಳಿಗೆ ಒಂದು ಜಾಹೀರಾತು ನೀಡಿತ್ತು. "ಡೀಸೆಲ್ ಬೆಲೆ ಹೆಚ್ಚಳ ಮತ್ತು ಗೃಹಬಳಕೆ ಎಲ್‌ಪಿಜಿ ಮಿತಿಯನ್ನು ತಪ್ಪಿಸಬಹುದಿತ್ತೇ?, ಇಲ್ಲ" ಎಂಬುದು ಈ ಜಾಹೀರಾತಿನ ಶಿರೋನಾಮೆ. ಅದಕ್ಕೆ 'ಕಾರಣ'ಗಳನ್ನು ಆ ಜಾಹೀರಾತಿನಲ್ಲಿ ಕೊಡಲಾಗಿತ್ತು.

ಇದರಲ್ಲಿ ಸಂಸತ್ತಿನ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕುರಿತ ಸರ್ವಪಕ್ಷ ಸ್ಥಾಯೀ ಸಮಿತಿ 'ಗೃಹಬಳಕೆ ಎಲ್‌ಪಿಜಿ ಮಿತಿ' ಕುರಿತು ಮಾಡಿದೆಯೆನ್ನಲಾದ ಶಿಫಾರಸಿನ ಪ್ರಸ್ತಾಪವಿದೆ. ಇದು 'ಒಮ್ಮತ'ದ ಶಿಫಾರಸು ಎಂದು ಸರ್ಕಾರೀ ಜಾಹೀರಾತಿನಲ್ಲಿ ಹೇಳಿರುವುದು ಸರಿಯಲ್ಲ ಎಂದು ಈ ಬಗ್ಗೆ ಪೆಟ್ರೋಲಿಯಂ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಸಿಪಿಐ(ಎಂ) ಸದಸ್ಯರಾದ ತಪನ್ ಸೇನ್ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ. ಏಕೆಂದರೆ, ಸ್ವತಃ ಅವರೇ ಇದಕ್ಕೆ 'ಭಿನ್ನಮತ'ದ ಟಿಪ್ಪಣಿ ಸಲ್ಲಿಸಿದ್ದರು. ಇದನ್ನು 6.8.2011 ರಂದು ಸ್ಥಾಯೀ ಸಮಿತಿಯ ವರದಿಯೊಂದಿಗೆ ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಎರಡನೆಯದಾಗಿ, ಸ್ಥಾಯೀ ಸಮಿತಿ ಸಬ್ಸಿಡಿ ದರಗಳಲ್ಲಿ ಎಲ್‌ಪಿಜಿ ಸಿಲಿಂಡರುಗಳ ಲಭ್ಯತೆಯನ್ನು "ವಾರ್ಷಿಕ ಆರು ಲಕ್ಷ ರೂ.ಗಿಂತ ಹೆಚ್ಚು ಆದಾಯ ಇರುವವರಿಗೆ" ಸೀಮಿತಗೊಳಿಸಬೇಕು ಎಂದು ಶಿಫಾರಸು ಮಾಡಿತ್ತು, ಮತ್ತು ಇದು ಕೂಡ ಒಮ್ಮತದ ಶಿಫಾರಸು ಅಲ್ಲ ಎಂದು ತಪನ್ ಸೇನ್ ಪೆಟ್ರೋಲಿಯಂ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ನೆನಪಿಸಿದ್ದಾರೆ. ಸರ್ಕಾರದ ಜಾಹೀರಾತು ಈ ಅಂಶವನ್ನು ಮರೆಮಾಚಿದೆ.

ಸರಕಾರದ ಅಧಿಕೃತ ಹೇಳಿಕೆಗಳು, ಅದರಲ್ಲಿಯೂ ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಣೆಗೆಂದು ಕೊಡುವ ಜಾಹೀರಾತುಗಳು ವಾಸ್ತವ ಸಂಗತಿಗಳನ್ನು ತಪ್ಪಾಗಿ ಬಿಂಬಿಸುವ ಕೆಲಸ ಮಾಡಬಾರದು, ಜಾಹೀರಾತಿನಲ್ಲಿ ಆಗಿರುವ ಈ ತಪ್ಪನ್ನು ಸರಿಪಡಿಸಬೇಕು ಎಂದು ತಪನ್ ಸೇನ್ ಪೆಟ್ರೋಲಿಯಂ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಸಮರ್ಥನೀಯ ಎನ್ನುವ ಕ್ರಮಗಳನ್ನು ಕೈಗೊಳ್ಳಲು ಸಂಸತ್ತಿನ ಅಧಿವೇಶನ ಮುಗಿಯುವುದಕ್ಕೇ ಕಾಯುವ ಜಾಯಮಾನದ ಯುಪಿಎ–2 ಸರಕಾರದಿಂದ, ಸಾವಿರ ಸುಳ್ಳಾದರೂ ಹೇಳಿ, ನವ–ಉದಾರವಾದಿ ಧೋರಣೆಗಳನ್ನು ಮಾತ್ರ ಬಿಡಬೇಡಿ ಎಂಬ ದೇಶಿ–ವಿದೇಶಿ ಹಣಕಾಸು ಬಂಡವಾಳಿಗರ ಉಪದೇಶಗಳನ್ನು ಶಿರಸಾ ವಹಿಸುವ ಸರಕಾರದಿಂದ ಇಂತಹ ಜಾಹೀರಾತುಗಳಲ್ಲದೆ ಬೇರೇನನ್ನೂ ನಿರೀಕ್ಷಿಸುವಂತಿಲ್ಲ ಎಂಬುದೀಗ ಭಾರತದ ದುಡಿಯುವ ಜನತೆಯ ಅನುಭವ.

ಕೊಲ್ಕತಾ, ಚೆನ್ನೈ ವಿಮಾನ ನಿಲ್ದಾಣಗಳು: ಖಾಸಗಿಯವರಿಗಾಗಿ 3700ಕೋಟಿ ರೂ.ಗಳ ಸಾರ್ವಜನಿಕ ಹೂಡಿಕೆ!

ಯುಪಿಎ–2 ಸರಕಾರದ ಪಿ.ಪಿ.ಪಿ.(ಸಾರ್ವಜನಿಕ–ಖಾಸಗಿ ಪಾಲುದಾರಿಕೆ) ಗೀಳಿನ ಬಗ್ಗೆ ಈ ಅಂಕಣದಲ್ಲಿ ಈ ಹಿಂದೆ ಚರ್ಚಿಸಿದ್ದೇವೆ. ಈ ಗೀಳಿಗೆ ಇತ್ತೀಚಿನ ಬಲಿಯೆಂದರೆ ಚೆನ್ನೈ ಮತ್ತು ಕೊಲ್ಕತಾ ವಿಮಾನ ನಿಲ್ದಾಣಗಳು. ಈ ಎರಡು ವಿಮಾನ ನಿಲ್ದಾಣಗಳನ್ನು ಸದ್ಯಕ್ಕೆ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ನಿರ್ವಹಿಸುತ್ತಿದ್ದು ಇವುಗಳ ಆಧುನೀಕರಣ/ ನವೀಕರಣದ ವೈಮಾನಿಕ ಭಾಗ ಈಗಾಗಲೇ ಪೂರ್ಣಗೊಂಡಿದೆ, ಇದಕ್ಕೆ ಸಾರ್ವಜನಿಕ ಖಜಾನೆಯಿಂದ 3700 ಕೋಟಿ ರೂ. ಖರ್ಚಾಗಿದೆಯೆಂದು ಕಳೆದ ತಿಂಗಳಷ್ಟೇ(ಆಗಸ್ಟ್ 21) ವಿಮಾನಯಾನ ಮಂತ್ರಿಗಳು ರಾಜ್ಯಸಭೆಗೆ ತಿಳಿಸಿದ್ದರು. ಆದರೆ, ಈ ವಾರ, ಈ ಎರಡು ವಿಮಾನ ನಿಲ್ದಾಣಗಳಲ್ಲಿ ಎಎಐ ಶೇರು ಬಂಡವಾಳದ ಪ್ರಮಾಣವನ್ನು ಇಳಿಸಿ, ಅಂದರೆ ಅವನ್ನು ಖಾಸಗಿಯವರಿಗೆ ಮಾರಿ ಪಿ.ಪಿ.ಪಿ. ಅಥವ ಜಂಟಿ ಉದ್ಯಮ(ಜೆವಿಸಿ) ದಾರಿಯ ಮೂಲಕ ಖಾಸಗೀಕರಿಸುವ ಬಗ್ಗೆ ಯುಪಿಎ–2 ಸರಕಾರ ಯೋಚಿಸುತ್ತಿದೆಯೆಂದು ತಿಳಿದು ಬಂದಿದೆ.

ಇದರ ಅರ್ಥವೇನು? ಸಾರ್ವಜನಿಕ ಖರ್ಚಿನಿಂದ ನವೀಕರಿಸಿದ/ಆಧುನೀಕರಿಸಿದ ಮೂಲರಚನೆಗಳ ಅಪಾತ್ರ ಲಾಭವನ್ನು ಖಾಸಗಿಯವರು ಅನುಭೋಗಿಸಲು ಅವಕಾಶ ಎಂದೇ ಅಲ್ಲವೇ ಎಂದು ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ತಪನ್

ಪುಟ 13 ಕ್ಕೆ

ತಾತ್ಕಾಲಿಕವಾಗಿ ಹಿಂಪಡೆಯಲಾದ ಕಂಪ್ಯೂಟರ್ ಶಿಕ್ಷಕರ ಹೋರಾಟ

ದೇಶದ ಅಭಿವೃದ್ಧಿಯ ಮೂಲ ಶಿಕ್ಷಣ. ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ನಡೆದ ಹಲವಾರು ಹೋರಾಟಗಳ ಫಲವಾಗಿ ಇಂದು ಕಡ್ಡಾಯ ಶಿಕ್ಷಣ ಕಾಯ್ದೆ ಜಾರಿಯಲ್ಲಿ ಬಂದಿದೆ. ಜಗತ್ತಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಸಾಧಿಸಿದ ಮುನ್ನಡೆಯ ನಂತರ ನಮ್ಮ ದೇಶವು ಕೂಡ ಈ ಕ್ಷೇತ್ರದಲ್ಲಿ ಮುನ್ನುಗ್ಗುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಎಲ್ಲ ಸರ್ಕಾರಿ ಆಡಳಿತ ವ್ಯವಸ್ಥೆಯಲ್ಲೂ ಈ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ.

ಇದರ ಭಾಗವಾಗಿ ಮಕ್ಕಳಿಗೆ ಇತರೆ ವಿಷಯಗಳನ್ನು ಭೋದಿಸುವ ರೀತಿಯಲ್ಲಿ ಈ ವಿಷಯುವನ್ನೂ ಭೋದಿಸಬೇಕೆಂಬುದು ಸರ್ಕಾರದ ನಿಲುವಾಗಿದೆ. ಇದರ ಆಧಾರದಲ್ಲಿ 2003-05 ರಲ್ಲಿ ಮಾಹಿತಿ ಸಿಂಧು ಯೋಜನೆಯನ್ನು ಪ್ರಾರಂಭ ಮಾಡಿ ಅದರಿಂದ ಒಳ್ಳೆಯ ಫಲಿತಾಂಶ ಬಂದ ನಂತರ ಐಸಿಟಿ(ಮಾಹಿತಿ ಕಂಪ್ಯೂಟರ್ ತಂತ್ರಜ್ಞಾನ) ಯೋಜನೆಯನ್ನು ಪ್ರಾರಂಭ ಮಾಡಿದೆ. ಈ ಯೋಜನೆಗೆ 75% ಹಣ ಕೇಂದ್ರ ಸರ್ಕಾರ 25% ಹಣ ರಾಜ್ಯ ಸರ್ಕಾರ ನೀಡುತ್ತಿದೆ ಎಂಬುದು ತಮಗೆ ತಿಳಿದ ವಿಚಾರ.


ಈ ಯೋಜನೆಯನ್ನು ಹಂತ 1, ಹಂತ 2, ಹಂತ 3 ಯನ್ನಾಗಿ ವಿಂಗಡಿಸಿ 5 ವರ್ಷಕ್ಕೆ ಸೀಮಿತ ಮಾಡಲಾಗಿದೆ. ಆದ್ದರಿಂದ ಈ ಯೋಜನೆ ಇರುವ 5 ವರ್ಷದಲ್ಲಿ ಶಾಲೆಗೆ ದಾಖಲಾಗುವ ಮಕ್ಕಳಿಗೆ ಮಾತ್ರ ಕಂಪ್ಯೂಟರ್ ಶಿಕ್ಷಣ ಸಿಗುತ್ತದೆ. ನಂತರ ದಾಖಲಾಗುವ ಮಕ್ಕಳಿಗೆ ಈ ಶಿಕ್ಷಣ ಸಿಗುವುದಿಲ್ಲ. ಇದರಿಂದಾಗಿ ಮಕ್ಕಳಲ್ಲಿಯೇ ತಾರತಮ್ಯ ಮಾಡಲಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಖಾಯಂ ಮಾಡಬೇಕು ಎಂದು ಕಂಪ್ಯೂಟರ್ ಶಿಕ್ಷಕರ ಆಗ್ರಹ.

ಈ ಯೋಜನೆಯನ್ನು ಎಲ್ಲ ಕಾರ್ಮಿಕ ಮತ್ತು ಸಿಎಸ್‌ಆರ್ ನಿಯಮಗಳು ಅನ್ವಯವಾಗದಂತೆ ಎಚ್ಚರ ವಹಿಸಿ ಸಿವಿಲ್ ಕಂಟ್ರ್ಯಾಕ್ಟ್ ವಿಧಾನದಲ್ಲಿ ಹೊರಗುತ್ತಿಗೆ ನೀಡಿದ್ದಾರೆ. ಇದರಿಂದಾಗಿ ಕಂಪ್ಯೂಟರ್ ಡಿಪ್ಲೋಮಾ ಪದವೀಧರರು ಕೇವಲ 3332 ರೂ.ಗಳಿಗೆ 5 ವರ್ಷಗಳ ಕಾಲ ಬೇರೆ ಯಾವುದೇ ಸೌಲಭ್ಯಗಳು ಇಲ್ಲದೇ ದುಡಿಯಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿ ಯೋಜನೆಯನ್ನು ಹೊರ ಗುತ್ತಿಗೆಯ ಆಧಾರದಲ್ಲಿ "ಏಜು ಕಾಂಪ್ ಸೊಲ್ಯೂಷನ್ಸ್" ಎಂಬ ಕಂಪನಿಗೆ ನೀಡಲಾಗಿದೆ. ಅವರಿಗೆ ಸರಕಾರವು ಪ್ರತಿಯೊಬ್ಬ ನೌಕರನಿಗೆ ರೂ. 5902-00ನಂತೆ ನೀಡುತ್ತಿದೆ. ಇದರಿಂದಾಗಿ ಕಂಪನಿಯು ಹೇರಳ ಲಾಭಗಳಿಸುತ್ತಿದೆ. ಆದರೂ ಸಹ ಈ ಕಂಪನಿಯು ವಿವಿಧ ಕಾರಣಗಳನ್ನು ನೀಡಿ ತಿಂಗಳು ಗಟ್ಟಲೆ ವೇತನ ಬಾಕಿ ಇರಿಸಿಕೊಂಡಿದೆ. ಇಂದಿಗೂ ಎರಡು ತಿಂಗಳ ವೇತನ ಬಾಕಿ ಇದೆ. ಇದರಿಂದಾಗಿ ಶಿಕ್ಷಕರು ನೌಕರಿಯನ್ನು ತೊರೆಯುತ್ತಿದ್ದು, ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆ.

ICT Project Phase 1 ರಲ್ಲಿ 480 ಶಾಲೆಗಳು-1 ಲಕ್ಷ ವಿದ್ಯಾರ್ಥಿಗಳು. ICT Project Phase 2 ರಲ್ಲಿ 1571 ಶಾಲೆಗಳು, 708 ಪಿ.ಯು.ಕಾಲೇಜುಗಳು-6,17,702 ವಿದ್ಯಾರ್ಥಿಗಳು. ICT Project Phase 3 ರಲ್ಲಿ 4396 ಶಾಲೆಗಳು ಅಂದಾಜು 10 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳು ಕಲಿಯುವ ಅವಕಾಶವಿದೆ. ಅಂದರೆ ಸುಮಾರು 18 ಲಕ್ಷ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡುವ ಈ ಶಿಕ್ಷಕರು ಕನಿಷ್ಠ ಕೂಲಿಯೂ ಇಲ್ಲದೇ ಬಳಲುತ್ತಿದ್ದಾರೆ.

3-4 ತಿಂಗಳಿಗೊಮ್ಮೆ ಇವರಿಗೆ ಸಂಬಳ ಸಿಗುತ್ತದೆ. ಈ ಸಂಬಳವನ್ನು ಪಡೆಯಬೇಕಾದರೆ ಪ್ರತಿ ಬಾರಿಯೂ ಹೋರಾಟ ಮಾಡಿಯೇ



ಪಡೆದುಕೊಳ್ಳುವ ಪರಿಸ್ಥಿತಿ ಇದೆ.

ಕೋಟಿಗಟ್ಟಲೆ ರೂ ಹಣವನ್ನು ಇದಕ್ಕಾಗಿ ವ್ಯಯಮಾಡಿ ಶಿಕ್ಷಕರನ್ನು ಮಾತ್ರ ಕಡೆಗಣಿಸಿರುವುದು ಸರಿಯಲ್ಲ. ಅಷ್ಟು ಮಾತ್ರವಲ್ಲದೇ ಇದೇ ವಿದ್ಯಾಭ್ಯಾಸ ಮಾಡಿರುವವರು ಕಂಪ್ಯೂಟರ್ ಆಪರೇಟರ್‌ಗಳಾಗಿ ಬೇರೆ ಬೇರೆ ಸರ್ಕಾರದ ಇಲಾಖೆಗಳಲ್ಲಿ ದುಡಿಯುತ್ತಿದ್ದಾರೆ. ಅವರಿಗೆ ಕನಿಷ್ಠ ಕೂಲಿ 7500 ಕ್ಕಿಂತಲೂ ಹೆಚ್ಚು ಸಂಬಳವನ್ನು ರಾಜ್ಯ ಸರ್ಕಾರ ನೀಡುತ್ತಿದೆ.

ರಾಜ್ಯ ಸರ್ಕಾರವೇ ಯಾವುದಾದರೂ ಸಂಸ್ಥೆಗಳು ಕನಿಷ್ಠ ಕೂಲಿಯನ್ನು ಕೊಡದಿದ್ದರೆ ಕಾರ್ಮಿಕ ಇಲಾಖೆ, ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಮುಖಾಂತರ ಎಚ್ಚರಿಕೆಯನ್ನು ಕೊಡುತ್ತದೆ. ಆದರೆ ಸರ್ಕಾರದ ಯೋಜನೆಯನ್ನು ಜಾರಿ ಮಾಡುವ ಈ ಶಿಕ್ಷಕರ ಬಗ್ಗೆ ತಾರತಮ್ಯ ಧೋರಣೆ ತಾಳಿದೆ ಈ ಧೋರಣೆಯನ್ನು ವಿರೋಧಿಸಿ ಕಂಪ್ಯೂಟರ್ ಶಿಕ್ಷಕರ ಸಂಘ ಸಿಐಟಿಯು ನೇತೃತ್ವದಲ್ಲಿ ಭೋಧನೆಯನ್ನು ನಿಲ್ಲಿಸಿ ಅನಿರ್ಧಿಷ್ಟ ಹೋರಾಟಕ್ಕೆ ಕರೆ ಕೊಟ್ಟಿತ್ತು. ಈ ಹೋರಾಟಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ಕಂಪ್ಯೂಟರ್ ಶಿಕ್ಷಕರು ಮತ್ತು ಶಿಕ್ಷಕಿಯರು ಸುಮಾರು ಒಂದು ಸಾವಿರ ಜನರು ಬೆಂಗಳೂರಿಗೆ ಬಂದಿದ್ದರು. ಸುಮಾರು 6 ದಿನಗಳ ಕಾಲ ಈ ಹೋರಾಟ ನಡೆಯಿತು. ಈ ಹೋರಾಟದಲ್ಲಿ ಭಾಗವಹಿಸಿದ್ದವರು ಕೇವಲ ಕಂಪ್ಯೂಟರ್ ಡಿಪ್ಲೋಮಾ ಪದವೀಧರರು ಮಾತ್ರವಲ್ಲದೆ ಹಲವಾರು ಶಿಕ್ಷಕರು ಎಂ.ಎ ಬಿ.ಎಡ್ ಪಧವೀದರರು.

ಇವರು ಉಪನ್ಯಾಸಕರಾಗಿ ಹೈಸ್ಕೂಲಿನ ಉಪಾಧ್ಯಾಯರಾಗಿ ಸೇವೆ ಸಲ್ಲಿಸಬೇಕಾದವರು ಇಂದಿನ ಸರ್ಕಾರ ನೀತಿಯಿಂದಾಗಿ ಹೊರಗುತ್ತಿಗೆಯಾಧಾರದಲ್ಲಿ ಕೇವಲ 3320 ರೂಗಳಿಗೆ 5 ವರ್ಷ ದವರೆಗೆ ಮಾತ್ರ ದುಡಿಯಬೇಕಾದ ವಿಪರ್ಯಾಸ. ಯಾರಾದರು ಕೇಳಬಹುದು ಇಷ್ಟೊಂದು ವಿದ್ಯೆ ಇದ್ದವರು ಇಲ್ಲೇಕೆ ದುಡಿಯಬೇಕೆಂದು. ಇವರನ್ನು ಕೆಲಸಕ್ಕೆ ನೇಮಕ ಮಾಡುವಾಗ ನಿಮಗೆ ಇನ್‌ಕ್ರಿಮೆಂಟ್, ಪಿಎಫ್, ಇನ್ಸೂರೆನ್ಸ್ ಸೌಲಭ್ಯ, ನೀಡುವ ಭರವಸೆ ಸರ್ಕಾರ ಯೋಜನೆಯನ್ನು ಮುಂದುವರಿಸುತ್ತದೆ ಎಂಬ ಆಶ್ವಾಸನೆ ಖಾಸಗಿ ಶಾಲಾ ಕಾಲೇಜುಗಳಲ್ಲಿ ದುಡಿದರೆ ಅಲ್ಲಿಯೂ ಕೂಡಾ ಗಂಟೆಗಳ ಪದ್ಧತಿ, ದೂರದ ಊರುಗಳಿಗೆ ಹೋಗಬೇಕು ಆ ಸಂಬಳ ಮತ್ತು ಕೆಲಸವು ನಿಖರವಾಗಿಲ್ಲ. ಈ ಸಮಸ್ಯೆಗಳಿಂದಾಗಿ ಇವರು ಅನಿವಾರ್ಯವಾಗಿ ಕೆಲಸಕ್ಕೆ ಸೇರಿದ್ದಾರೆ.

ಕಿರುಕುಳಗಳು

ಬೀದರನಿಂದ ಬಂದ ಒಬ್ಬ ಶಿಕ್ಷಕಿ ಬಸವಕಲ್ಯಾಣ ದಿಂದ ಔರಾದ್‌ಗೆ ಪ್ರತಿನಿತ್ಯ 50 ಕಿ.ಮೀ ಪ್ರಯಾಣಿಸಬೇಕು ವರ್ಗಾವಣೆ ಏಕೆಂದರೆ ಹೆರಿಗೆ ಸೌಲಭ್ಯ ಕೇಳಿದ್ದಕ್ಕೆ .

ಯಾರಾದರೂ ಸಂಘ ಮಾಡಿಕೊಂಡು ನಾಯಕತ್ವ ವಹಿಸಿದರೆ ಅವರ ಶಾಲೆಗೆ ಹೆಚ್ಚಿನ ಬೇಟಿ, ಸಂಬಳ ಕಡಿತ.

- ತಿಂಗಳಿಗೊಮ್ಮೆ ಮಾತ್ರ ರಜೆ, ಹೆಚ್ಚು ರಜೆ ಪಡೆದರೆ ಕೆಲಸ ಕಳೆದು ಕೊಳ್ಳಬೇಕು.
- ಶಾಲೆಗಳಲ್ಲಿ ಕಂಪ್ಯೂಟರ್ ಕೆಲಸದೊಟ್ಟಿಗೆ ಶಾಲೆಯ ಇತರೆ ಕೆಲಸಗಳನ್ನು ಮಾಡಬೇಕು.
- ಶಾಲಾ ಕಾಲೇಜುಗಳಲ್ಲಿ ಒಂದೊಂದು ವಿಷಯಕ್ಕೆ ಒಬ್ಬರು ಶಿಕ್ಷಕರು ಇದ್ದರೆ ಇವರು ಎಲ್ಲ ಮಕ್ಕಳಿಗೂ ಒಬ್ಬರೇ ಶಿಕ್ಷಕರು. ಅಂದರೆ ಒಂದು ವಾರಕ್ಕೆ 47 ಗಂಟೆಗಳ ನಿರಂತರ ಪಾಠ (2400 ಶಿಕ್ಷಕರು 6,17,702 ವಿದ್ಯಾಥಿಗಳು)
- ಶನಿವಾರ ಕೆಲಸದ ಅವಧಿಯ ನಂತರ ಶಾಲಾ ಕಾಲೇಜುಗಳ ಶಿಕ್ಷಕರಿಗೆ ವಿಶೇಷ ತರಬೇತಿ.
- ಸರ್ಕಾರಿ ಶಾಲೆಯ ಕೆಲಸ ಎಂದು ಕೆಲವರು ಮದುವೆಯಾಗಿದ್ದಾರೆ. ಆ ರೀತಿ ಮದುವೆಯಾದವರು ಇದು ಸರ್ಕಾರಿ ಕೆಲಸ ಅಲ್ಲ ಎಂದು ತಿಳಿದು ವೈವಾಹಿಕ ಜೀವನಗಳಲ್ಲಿಯೂ ಕೂಡಾ ಅಡಚಣೆ ಅನುಭವಿಸುತ್ತಿದ್ದಾರೆ.

ಈ ರೀತಿಯಾಗಿ ಅದುಮಿಟ್ಟ ಸಮಸ್ಯೆಗಳು ಭುಗಿಲೆದ್ದು ಸೆಪ್ಟಂಬರ್ 12 ರಿಂದ ನಡೆದ ಹೋರಾಟ. ಈ ಹೋರಾಟದಲ್ಲಿ ಸಹಜವಾಗಿಯೇ ಶಿಕ್ಷಕರು ಅತ್ಯಂತ ಆಕ್ರೋಶ ಭರಿತವಾಗಿಯೇ ಪಾಲ್ಗೊಂಡಿದ್ದರು.

ಸಂಬಳ ಹೆಚ್ಚು ಮಾಡಬೇಕು ಮತ್ತು ಇವರನ್ನು ಮುಂದುವರಿಸಬೇಕೆಂಬ ಪ್ರಮುಖ ಬೇಡಿಕೆಗಳು. ಸಾಕಷ್ಟು ಸರ್ಕಾರದ ಕಛೇರಿಗಳ ಅಲೆದಾಟದ ನಂತರ ಸೆಪ್ಟಂಬರ್ 14 ರಂದು ಸಾರ್ವಜನಿಕ ಶಿಕ್ಷಣ ಪ್ರತಿನಿಧಿಗಳಕ ಡಿಎಸ್‌ಇಆರ್‌ಟಿಸಿ ಮತ್ತು ಸಿಐಟಿಯು ವಿನ ಪ್ರತಿನಿಧಿಗಳ ಜಂಟಿ ಚರ್ಚೆಯ ನಂತರ ಕಂಪನಿ ಮತ್ತು ಸರ್ಕಾರದ ಮಧ್ಯ ಆಗಿರುವ ಒಪ್ಪಂಧವನ್ನು ಪುನರ್ ಪರಿಶೀಲಿಸಿ ಒಂದು ಶಾಲೆಗೆ ಸರ್ಕಾರ ಕೊಡುತ್ತಿರುವ ಅನುದಾನವನ್ನು ಹೆಚ್ಚಳ ಮಾಡಲು ಶಿಫಾರಸ್ಸು ಮಾಡುವುದಾಗಿ ತೀರ್ಮಾನವಾಯಿತು.

ನಂತರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಬೇಟಿ ಮಾಡಿ ಅವರಿಗೂ ಪರಿಸ್ಥಿತಿ ವಿವರಿಸಿದ ನಂತರ ಅವರು 3-4 ದಿನಗಳೊಳಗಾಗಿ ಸಂಬಂಧಿಸಿದ ಅಧಿಕಾರಿಗಳ ಬಳಿ ಚರ್ಚಿಸುವುದಾಗಿ ಒಪ್ಪಿದ್ದಾರೆ. ಇದರ ಆಧಾರದಲ್ಲಿ ತಾತ್ಕಾಲಿಕವಾಗಿ ವಾಪಸ್ ಪಡೆಯಲಾಗಿದೆ.

ಈ ಹೋರಾಟವನ್ನು ಸಿಪಿಐ(ಎಂ) ಲೋಕಸಭಾ ಸದಸ್ಯರಾದ ಕಾಂ. ರಾಜೇಶ್, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಸಾಹಿತಿಗಳಾದ ಡಾ. ಬರಗೂರ ರಾಮಚಂದ್ರಪ್ಪ ಸಿಐಟಿಯು ವಿನ ಕಾಂ. ಪ್ರಸನ್ನಕುಮಾರ, ಮೀನಾಕ್ಷಿ ಸುಂದರಂ, ಕೆ.ಎನ್.ಉಮೇಶ್, ಬಿಇಎಫ್‌ಐ ನ ಕಾಂ. ಮಾಧವ, ಎಸ್‌ಎಫ್‌ಐ ನ ಅನಂತ ನಾಯಕ ಮತ್ತು ಡಿವೈಎಫ್‌ಐ ಬರತ್‌ರಾಜರವರು ಬಂದು ಬೆಂಬಲಿಸಿ ಮಾತನಾಡಿದರು.


ಹೋರಾಟಕ್ಕೆ ಜೊತೆಯಾಗಿ ಸಂಘದ ಉಪಾಧ್ಯಕ್ಷರಾದ ಕಾಂ. ಬಾಲಕೃಷ್ಣ ಶೆಟ್ಟಿ ಮತ್ತು ಬಿ.ಎಮ್. ಭಟ್ ಮತ್ತು ಮಾಲಿನಿ, ಸರೋಜ ಮತ್ತು ಲೀಲಾವತಿಯವರು ಇದ್ದರು.

ಎಸ್. ವರಲಕ್ಷ್ಮಿ

ಬರ ನಿರ್ವಹಣೆಯಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲ

ಸಿಪಿಐ(ಎಂ) ತಂಡದಿಂದ ಬರ ಅಧ್ಯಯನ

ಗಜೇಂದ್ರಗಡ: ರಾಜ್ಯದ 146 ತಾಲೂಕುಗಳಲ್ಲಿ ಭೀಕರ ಬರ ಆವರಿಸಿದ್ದು ಇದರ ನಿರ್ವಹಣೆಯಲ್ಲಿ ರಾಜ್ಯ ಬಿ.ಜೆ.ಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸಮರೋಪಾದಿಯಲ್ಲಿ ಬರ ನಿರ್ವಹಣೆಗೆ ಆಗ್ರಹಿಸಿ ಭಾರತ ಕಮ್ಯೂನಿಷ್ಠ ಪಕ್ಷ (ಮಾರ್ಕ್ಷವಾದಿ) ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸೆ.25 ರಂದು ರೋಣ, ಗಜೇಂದ್ರಗಡ ಹಾಗೂ ನರಗುಂದ ತಹಶೀಲ್ದಾರ ಕಛೇರಿ ಎದುರು ಧರಣಿ ಹಮ್ಮಿಕೊಳ್ಳಲು ತೀರ್ಮಾನಿಸಿದೆ.



ಬರಕ್ಕೆ ಸಂಬಂಧಿಸಿ ಪಕ್ಷ ಸೆ, 6 ಮತ್ತು 7 ರಂದು ರೋಣ ತಾಲ್ಲೂಕಿನ ರಾಜೂರ, ಲಕ್ಕಲಕಟ್ಟಿ, ಶಾಂತಗೇರಿ, ಯಾವಗಲ್ಲ, ಮುಶಿಗೇರಿ, ಮಲ್ಲಾಪೂರ ಮತ್ತು ಗೊಗೇರಿ ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ನರಗುಂದ ತಾಲೂಕಿನ ಹದ್ಲಿ ಮತ್ತು ರಡ್ಡೇರ ನಾಗನೂರ ಗ್ರಾಮ ಪಂಚಾಯಿತಿಗಳಿಗೆ ಸಿಪಿಐ(ಎಂ)ನ ಬರ ಅಧ್ಯಯನ ತಂಡ ಬೇಟಿ ನೀಡಿ ತಳಹಂತದಲ್ಲಿ ಗ್ರಾಮಾಂತರ ಜನಸಾಮಾನ್ಯರು ಬರದಿಂದ ಅನುಭವಿಸುತ್ತಿರುವ ತೊಂದರೆಗಳನ್ನು ವಸ್ತುನಿಷ್ಠವಾಗಿ ಅರಿಯಲು ಪ್ರಯತ್ನಿಸಿತು.

ಗ್ರಾಮಾಂತರ ಪ್ರದೇಶದಲ್ಲಿ ಬರ ನಿರ್ವಹಣೆ ಕಾರ್ಯ ಶೂನ್ಯ ಸ್ಥಿತಿಯಲ್ಲಿದೆ. ಗ್ರಾಮ ಪಂಚಾಯಿತಿಗಳಲ್ಲಿ ಬರದಿಂದ ಸಂಕಷ್ಟಕ್ಕೆ ಸಿಲುಕಿದ ಜನರಿಗೆ ಕೇಂದ್ರದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುದಾನದ ಹಣ ಬಿಟ್ಟರೆ ಬರ ನಿರ್ವಹಣೆಗೆ ಸಂಬಂಧಿಸಿ ರಾಜ್ಯ ಸರ್ಕಾರ ಪಂಚಾಯಿತಿಗಳಿಗೆ ಯಾವುದೇ ವಿಶೇಷ ಹಣ ನೀಡಿಲ್ಲ. ಈ ಯೋಜನೆಯು ಕೂಡಾ ಸಮರ್ಪಕವಾಗಿ ಜಾರಿಯಾಗಿಲ್ಲ. ಹಾಗೂ ಕೆಲಸ ಮಾಡಿದ ಕೂಲಿಕಾರರಿಗೆ ಹಲವು ತಿಂಗಳಿಂದ ಸಂಬಳ ನೀಡಿಲ್ಲ, ಕ್ರಿಯಾ ಯೋಜನೆಗೆ ದೊರಕಿದ ಅನುದಾನದ ಶೇ 30ರಷ್ಟು ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗಿಲ್ಲ.

ಯಾವಗಲ್ಲ, ಮಲ್ಲಾಪೂರ, ಬೆಳವಣಿಕಿ ಮತ್ತು ಹದ್ಲಿ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಭೀಕರ ಸಮಸ್ಯೆ ಇದ್ದು ಜನರು ನಿತ್ಯವು ಪರದಾಡುತ್ತಿದ್ದರೆ. ಈ ಕುರಿತು ತಾಲೂಕ ಆಡಳಿತ ಯಾವುದೇ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಕೆಲವು ಗ್ರಾಮಗಳಲ್ಲಿ ನೀರಿನ ಮೂಲವಿದ್ದರು ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಯಿಲ್ಲದೆ ಕುಡಿಯುವ ನೀರಿನ ನಿರ್ವಹಣೆಗೆ ತೀವ್ರ ತೊಂದರೆಯುಂಟಾಗುತ್ತಿದೆ.

ರೋಣ ತಾಲೂಕಿನ ಬೆಳವಣಿಕಿ, ಮಲ್ಲಾಪೂರ, ಯಾವಗಲ್ಲ ಹಾಗೂ ನರಗುಂದ ತಾಲೂಕಿನ ಬಹುತೇಕ ಭಾಗಗಳಲ್ಲಿ ಬಿತ್ತನೆಯೇ ನಡೆದಿಲ್ಲ ಎಲ್ಲಿ ನೋಡಿದರು ಒಣ ಭೂಮಿಯೇ ಕಾಣುತ್ತಿದೆ. ಕೆಲವು ಕಡೆ ರೈತರು ಮುಂಗಾರು ಬಿತ್ತನೆ ಮಾಡಿ ಮಳೆ ಕೈಕೊಟ್ಟಿದ್ದರಿಂದ ಕೈಸುಟ್ಟುಕೊಂಡಿದ್ದಾರೆ. ಹಸಿರಿಲ್ಲದೆ ದನಕರುಗಳಿಗೆ ಮೇವಿನ ತೀವ್ರ ಅಭಾವ ಸೃಷ್ಟಿಯಾಗಿದೆ. ಮೇವಿನ ಸಮಸ್ಯೆ ಪರಿಹರಿಸಲು ಗೋಶಾಲೆಗಳನ್ನು ಸ್ಥಾಪಿಸಿ ಸರ್ಕಾರ ಕೈತೊಳೆದುಕೊಂಡಿದೆ. ದುಡಿಯಲು ಯೋಗ್ಯವಿರುವ ಎತ್ತುಗಳನ್ನು ಮತ್ತು ಹಾಲು ಕೊಡುತ್ತಿರುವ ಹಸು ಮತ್ತು ಎಮ್ಮೆಗಳನ್ನು ರೈತರು ಗೋಶಾಲೆಗಳಿಗೆ ಕಳಿಸಲು ನಿರಾಕರಿಸುತ್ತಿದ್ದಾರೆ. ಪಂಚಾಯಿತಿ ಮಟ್ಟದಲ್ಲಿ ಮೇವು ಬ್ಯಾಂಕ ಸ್ಥಾಪಿಸಬೇಕೆಂಬ ಕೂಗು ರೈತರಿಂದ ವ್ಯಾಪಕವಾಗಿ ಕೇಳಿಬರುತ್ತಿದೆ.

ಭೀಕರ ಬರದ ಈ ಸಂದರ್ಭದಲ್ಲಿಯೇ ರಾಜ್ಯ ಸರ್ಕಾರ ವಿಧವಾ, ಅಂಗವಿಕಲ ಮತ್ತು ವೃದ್ಧಾಪ್ಯ ಮಾಸಾಶನಗಳನ್ನು ರದ್ದುಗೊಳಿಸಿದೆ. ಇದು ಸಾಲದೆಂಬಂತೆ ಆನ್‌ಲೈನ್ ಪಡಿತರ ಪದ್ದತಿಯನ್ನು ಆರಂಭಿಸಿ ಸಾರ್ವಜನಿಕ ಆಹಾರ ವಿತರಣೆ ಮತ್ತು ಪಡಿತರ ಚೀಟಿ ವಿತರಣೆಯಲ್ಲಿ ತೀವ್ರ ಗೊಂದಲ ಉಂಟಾಗಿದ್ದು, ಇದನ್ನು ನಿರ್ವಹಿಸಲು ಸೂಕ್ತ ಸಿಬ್ಬಂದಿ ಹಾಗೂ ಯಂತ್ರೋಪಕರಣ ನೀಡದೆ. ಜನಸಾಮಾನ್ಯರನ್ನು ಸತಾಯಿಸಲಾಗುತ್ತಿದೆ. ಬರ ಅಧ್ಯಯನದ ಹೆಸರಲ್ಲಿ ಕೋಟಿಗಟ್ಟಲೇ ರೂ ಹಣ ಪೋಲು ಮಾಡುತ್ತಿರುವ ಸರ್ಕಾರ ಈ ಕುರಿತು ಪರಿಣಾಮಕಾರಿ ಶೀಘ್ರ ಕ್ರಮಕ್ಕೆ ಮುಂದಾಗಬೇಕಿದೆ.

ಕೇಂದ್ರ ಕಾಂಗ್ರೇಸ್ ಸರ್ಕಾರವು ಕೂಡಾ ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದು, ತನ್ನ ಪಕ್ಷದ ಆಡಳಿತವಿರುವ ರಾಜ್ಯಗಳ ಬರ ನಿರ್ವಹಣೆಗೆ ಹೆಚ್ಚಿನ ಹಣ ನೀಡಿದರೆ ನಮ್ಮ ರಾಜ್ಯಕ್ಕೆ ಯಾವುದೇ ಹೇಳಿಕೊಳ್ಳುವ ಅನುಕೂಲಗಳನ್ನು ಮಾಡಿಲ್ಲ. ಈ ನಡುವೆ ಬಿಜೆಪಿಯ ಮುಖ್ಯಮಂತ್ರಿ, ಅವರ ಮಂತ್ರಿಮಂಡಲದ ಸದಸ್ಯರು ಬರ ಅಧ್ಯಯನ ನಡೆಸುತ್ತಿದ್ದು, ಯಾವುದೇ ಪ್ರಯೋಜನಕಾರಿ ಕ್ರಮಗಳನ್ನು ಕೈಗೊಂಡಿಲ್ಲ. ಕೇಂದ್ರದವರು ರಾಜ್ಯದ ಮೇಲೆ, ರಾಜ್ಯ ಸರ್ಕಾರ ಕೇಂದ್ರದ ಮೇಲೆ ಆರೋಪ ಮಾಡುತ್ತ ಕಾಲಹರಣ ಮಾಡುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬರದ ವಿಷಯದಲ್ಲಿ ರಾಜಕಾರಣ ಮಾಡದೆ ನಿರ್ವಹಣೆಗೆ ಅಗತ್ಯ ಹಣಕಾಸು ನೆರವು ನೀಡಬೇಕು ಮತ್ತು ರಾಜ್ಯದ ಆಡಳಿತ ಯಂತ್ರ ಪರಿಣಾಮಕಾರಿ ಕೆಲಸ ಮಾಡಲು ಅಗತ್ಯ ಕ್ರಮವಹಿಸಬೇಕು, ರೈತರಿಗೆ ಪ್ರತಿ ಎಕರೆಗೆ 10,000/-ರೂ ಬೆಳೆ ಪರಿಹಾರ ನೀಡಬೇಕು. ಕುಡಿಯುವ ನೀರಿನ ಸಮಸ್ಯೆಗೆ ತಕ್ಷಣವೇ ಹಣ ನೀಡಲು ತಾಲೂಕ ಆಡಳಿತ ಮುಂದಾಗಬೇಕು, ಪಂಚಾಯಿತಿ ಮಟ್ಟದಲ್ಲಿ ಮೇವು ಬ್ಯಾಂಕ ಸ್ಥಾಪಿಸಿ ಜಾನುವಾರುಗಳಿಗೆ ಅಗತ್ಯ ಮೇವು ನೀಡಬೇಕು, ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗೆ ಅಧಿಕಾರಿವರ್ಗ ಪರಿಣಾಮಕಾರಿ ಕೆಲಸ ಮಾಡಲು ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು, ರದ್ದುಗೊಂಡಿರುವ ವಿಧವಾ, ವೃದ್ಧಾಪ್ಯ ಮತ್ತು ಅಂಗವಿಕಲ ಮಾಸಾಶನಗಳನ್ನು ತಕ್ಷಣವೇ ಪುನಃ ಪ್ರಾರಂಭಿಸಬೇಕು ಮತ್ತು ಪಡಿತರ ಗೊಂದಲ ನಿವಾರಣೆಗೆ ಅಗತ್ಯ ಸಿಬ್ಬಂದಿ ಮತ್ತು ಯಂತ್ರೋಪಕರಣ ನೀಡಬೇಕು ಮತ್ತು ಯಾವುದೇ ಕಾರಣಕ್ಕೂ ಪಡಿತರ ವಿತರಣೆ ನಿಲ್ಲಿಸಬಾರದು. ಗ್ರಾಮಂತರ ಪ್ರದೇಶದಲ್ಲಿ ನಿರಂತರ ವಿದ್ಯತ್ ನೀಡಬೇಕು. ಎಂದು ಬರಕ್ಕೆ ಸಂಬಂಧಿಸಿದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷ ಸೆ. 25 ರಂದು ಧರಣಿ ಹಮ್ಮಿಕೊಂಡಿದೆ.

ಬರ ಅದ್ಯಯನ ತಂಡದಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ, ಜಿಲ್ಲಾ ಸಮಿತಿ ಸದಸ್ಯರಾದ ಎಂ.ಎಸ್.ಹಡಪದ ಮಹಾಗುಂಡಪ್ಪ ಅಂಗಡಿ, ಮಹೇಶ ಹಿರೇಮಠ, ಮತ್ತು ಪಕ್ಷದ ಕಾರ್ಯಕರ್ತರಾದ ಬಸವರಾಜ ಶೀಲವಂತರ, ಬಾಲು ರಾಠೋಡ, ಸಂಕಪ್ಪ ಕುರಹಟ್ಟಿ, ಮಾರುತಿ ಚಿಟಗಿ, ಕುಬೇರ ಅಜ್ಮೀರ ಮುಂತಾದವರು ಇದ್ದರು.

ಎಂ.ಎಸ್. ಹಡಪದ

ಯುಪಿಎ ದರ್ಬಾರ್ : ಕೊಲ್ಕತಾ, ಚೆನ್ನೈ ವಿಮಾನ ನಿಲ್ದಾಣಗಳು.....

ಪುಟ 11 ರಿಂದ

ಸೆನ್ ವಿಮಾನಯಾನ ಮಂತ್ರಿಗಳಿಗೆ ಸಪ್ಟಂಬರ್ 19ರಂದು ಬರೆದ ಪತ್ರದಲ್ಲಿ ಪ್ರಶ್ನಿಸಿದ್ದಾರೆ. ಅಲ್ಲದೆ ಇದು ಸರಕಾರವೇ ನೇಮಿಸಿದ ತ್ರಿಪಕ್ಷೀಯ ಸಮಿತಿಯ ಶಿಫಾರಸಿನ ಉಲ್ಲಂಘನೆ ಕೂಡ ಎಂದು ಅವರು ನೆನಪಿಸಿದ್ದಾರೆ. ಏಕೆಂದರೆ, "ಎಎಐ ಚೆನ್ನೈ ಮತ್ತು ಕೊಲ್ಕತಾದ ಮೆಗಾ ಪ್ರಾಜೆಕ್ಟುಗಳು ಸೇರಿದಂತೆ ಸುಮಾರು 60 ವಿಮಾನ ನಿಲ್ದಾಣಗಳ ಆಧುನೀಕರಣ/ ನವೀಕರಣವನ್ನು ಕೈಗೊಳ್ಳುತ್ತಿದೆ" ಎಂದು ಈ ಸಮಿತಿಯ ಶಿಫಾರಸು ಹೇಳಿತ್ತು. ಇದನ್ನು ಇದೇ ಯುಪಿಎ ಸರಕಾರ ಜುಲೈ 2009ರಲ್ಲಿ ಅಂಗೀಕರಿಸಿತ್ತು ಕೂಡ.

ಎಎಐ ಅಂದರೆ, ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ಕೂಡ ಈ ಎರಡು ವಿಮಾನ ನಿಲ್ದಾಣಗಳ ಈ ರೀತಿಯ ಖಾಸಗೀಕರಣಕ್ಕೆ ಆಕ್ಷೇಪ ವ್ಯಕ್ತಪಡಿಸಿತ್ತು ಎಂದೂ ತಿಳಿದು ಬಂದಿದೆ. ಇವೆರಡೂ ಅದಕ್ಕೆ ಅತಿ ಹೆಚ್ಚು ಆದಾಯ ತರುತ್ತಿರುವ ಪ್ರಾಜೆಕ್ಟುಗಳು. ಇದನ್ನು ದಕ್ಷವಾಗಿ ನಿರ್ವಹಿಸುವ ಸಾಮರ್ಥ್ಯ ತಮಗೆ ಇದೆ ಎಂದು ಪ್ರಾಧಿಕಾರ ಹೇಳಿದೆ ಎಂದೂ ವರದಿಯಾಗಿದೆ. 2011-12ರಲ್ಲಿ ಕೊಲ್ಕತಾ ವಿಮಾನ ನಿಲ್ದಾಣ 72.43 ಕೋಟಿ ರೂ.ಗಳ ಮತ್ತು ಚೆನ್ನೈ ವಿಮಾನ ನಿಲ್ದಾಣ 33.73 ಕೋಟಿ ರೂ.ಗಳ ನಿವ್ವಳ ಲಾಭ ಗಳಿಸಿವೆ. ಆದ್ದರಿಂದ ಇದು, ದಕ್ಷವಾಗಿ ನಡೆಯುತ್ತಿರುವ ಸಾರ್ವಜನಿಕ ವಲಯದ ಘಟಕಗಳನ್ನು ಬುಡಮೇಲು ಮಾಡುವ ಕ್ರಮವಲ್ಲದೆ ಬೇರೇನೂ ಅಲ್ಲ, ಇದು ರಾಷ್ಟ್ರೀಯ ಹಿತದೃಷ್ಟಿಯಿಂದ ಮತ್ತು ತಾರ್ಕಿಕವಾಗಿಯೂ ಸರಿಯಾದ ಕ್ರಮ ಅಲ್ಲ, ಇವನ್ನು ಪಿಪಿಪಿ ಅಥವ ಜೆವಿಸಿ ದಾರಿಯಲ್ಲಿ ಖಾಸಗೀಕರಿಸುವ ಹುನ್ನಾರವನ್ನು ಕೈಬಿಡಬೇಕು ಎಂದು ತಪನ್ ಸೆನ್ ವಿಮಾನಯಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ. ಆದರೆ ಬಂಡವಾಳಿಗರ, ಅದರಲ್ಲೂ ಹಣಕಾಸು ಬಂಡವಾಳಿಗರ 'ಪ್ರಾಣಿ ಚೈತನ್ಯ'ದ ಬಗ್ಗೆ ತಲೆ ಕೆಡಿಸಿಕೊಂಡಿರುವ ಯುಪಿಎ-2 ಸರಕಾರ ತಾರ್ಕಿಕವಾಗಿ, ದೇಶದ ಒಟ್ಟು ಹಿತದೃಷ್ಟಿಯಿಂದ ಯೋಚಿಸ ಬಲ್ಲುದೇ?

ಜಗದಗಲ

ಟೆಹರಾನಿನಲ್ಲಿ 16ನೇ ಅಲಿಪ್ತ ಶೃಂಗಸಭೆ ಒಂದು ರಾಜತಾಂತ್ರಿಕ ಮುನ್ನಡೆ

ಶರತ್‌ಚಂದ್ರ

ಇರಾನ್ ಅಲಿಪ್ತ ದೇಶಗಳ 16ನೇ ಶೃಂಗಸಭೆಯನ್ನು ಅದರ ರಾಜಧಾನಿ ಟೆಹರಾನಿನಲ್ಲಿ ನಡೆಸುವ ಮೂಲಕ ಅಮೆರಿಕಾ ಯುರೋಪು ಕೂಟ ಮತ್ತು ಇಸ್ರೇಲಿ ಸರ್ಕಾರಗಳ ಮೇಲೆ ಅದ್ಭುತ ರಾಜತಾಂತ್ರಿಕ ಗೆಲುವು ಸಾಧಿಸಿದೆ. ಅಂತರ್ರಾಷ್ಟ್ರೀಯ ಅಭಿಪ್ರಾಯದ ಮುಖ್ಯಧಾರೆಯಿಂದ ದೂರವಾಗಿರುವುದು (ಪಾಶ್ಚಿಮಾತ್ಯ ಮಾಧ್ಯಮಗಳು ಬಿಂಬಿಸುವಂತೆ) ಇರಾನ್ ಅಲ್ಲ. ದೂರವಾಗಿರುವುದು ಅಮೆರಿಕಾ ಯುರೋಪು ಕೂಟ ಮತ್ತು ಇಸ್ರೇಲಿ ಸರ್ಕಾರಗಳು ಎಂದು ತೋರಿಸಿಕೊಟ್ಟಿದೆ. ಕಳೆದ ಒಂದು ದಶಕದಿಂದ ಇರಾನ್ ಬಹಿಷ್ಕಾರ ಹಾಕಬೇಕಾದ 'ಭಯೋತ್ಪಾದಕ' ಅಥವಾ 'ಅಸ್ಪೃಶ್ಯ' ದೇಶ ಎಂದು ಪಾಶ್ಚಿಮಾತ್ಯ ಮಾಧ್ಯಮಗಳು ನಡೆಸಿರುವ ಅಪಪ್ರಚಾರದ ಚಿಂದಿ ಉಡಾಯಿಸಿದೆ.

ಇರಾನ್ ಶೃಂಗಸಭೆಯನ್ನು ನಡೆಸಿದ ರೀತಿ, ಚರ್ಚೆ-ಸಂವಾದಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಭಾಗವಹಿಸಿದ ರೀತಿ, ರಾಜತಾಂತ್ರಿಕ ಜಾಣ್ಮೆ -ಇವೆಲ್ಲಾ ಅಲಿಪ್ತ ದೇಶಗಳ ಮೆಚ್ಚುಗೆಗೆ ಪಾತ್ರವಾಗಿದೆ. ಇರಾನ್ ಅಲಿಪ್ತ ದೇಶಗಳ ಮುಖ್ಯಸ್ಥ ದೇಶವಾಗಿ ಆಯ್ಕೆಯಾಯಿತು ಕೂಡಾ. 31 ದೇಶಗಳ ವರಿಷ್ಟರು (ಅಧ್ಯಕ್ಷ, ಪ್ರಧಾನಿ, ರಾಜ ಇತ್ಯಾದಿ) ಮತ್ತು 29 ವಿದೇಶ ಮಂತ್ರಿಗಳು ಸೇರಿದಂತೆ 120 ದೇಶಗಳ ಪ್ರತಿನಿಧಿಗಳು ಟೆಹರಾನ್ ಶೃಂಗಸಭೆಯಲ್ಲಿ ಹಾಜರಿದ್ದರು. ವಿಶ್ವಸಂಸ್ಥೆಯ ಸದಸ್ಯ ದೇಶಗಳಲ್ಲಿ ಮೂರನೇ ಎರಡರಷ್ಟು ದೇಶಗಳು ಭಾಗವಹಿಸಿದ್ದರಿಂದಲೋ ಏನೋ, ಅಮೆರಿಕ ಮತ್ತು ಇಸ್ರೇಲಿ ವಿರೋಧದ ನಡುವೆಯೂ ಅಮೆರಿಕದತ್ತ ವಾಲುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬನ್-ಕಿ-ಮೂನ್ ಸಹ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಬೇಕಾಯಿತು.



ಸಾಮ್ರಾಜ್ಯಶಾಹಿ-ವಿರೋಧಿ ನಿರ್ಣಯಗಳು

ಅಲಿಪ್ತ ಶೃಂಗಸಭೆ ಅಂಗೀಕರಿಸಿದ ನಿರ್ಣಯಗಳು ಸಹ ಅಮೆರಿಕಾ-ಇಸ್ರೇಲಿ ದುಷ್ಟ ಕೂಟದ ನೀತಿಗಳನ್ನು ತಿರಸ್ಕರಿಸಿವೆ. ಇರಾನಿನ ಯುರೇನಿಯಂ ಸಂಸ್ಕರಣ ಸೇರಿದಂತೆ ಅಣು ಕಾರ್ಯಕ್ರಮ ಅರಬ್ ಪ್ರದೇಶದ ಮತ್ತು ಜಗತ್ತಿನ ಶಾಂತಿಗೆ ಅಪಾಯಕರ ಎಂಬ ಅಮೆರಿಕಾ-ಇಸ್ರೇಲಿ ನಿಲುವನ್ನು ತಿರಸ್ಕರಿಸಿದೆ. ಇರಾನಿಗೆ ಯುರೇನಿಯಂ ಸಂಸ್ಕರಣ ಸೇರಿದಂತೆ ಶಾಂತಿಯುತ ಅಣುಶಕ್ತಿ ಅಭಿವೃದ್ಧಿ ಕಾರ್ಯಕ್ರಮ ಜಾರಿ ಮಾಡುವ ಹಕ್ಕು ಇದೆ. ಅಮೆರಿಕ ಮತ್ತು ಯುರೋಪ್ ಕೂಟ ಇದಕ್ಕಾಗಿ ಇರಾನಿನ ಮೇಲೆ ವಿಧಿಸಿದ ಆರ್ಥಿಕ ದಿಗ್ಬಂಧನವನ್ನು ಖಂಡಿಸಿದೆ. ಭಾರತ ಸೇರಿದಂತೆ ಹಲವು ದೇಶಗಳು ಇರಾನಿನ ಜತೆ ಆರ್ಥಿಕ ಸಂಬಂಧ ಹೆಚ್ಚಿಸಲು ವಾಣಿಜ್ಯ ಶಿಷ್ಟಮಂಡಲಗಳನ್ನು ಕರೆ ತಂದಿದ್ದವು.

ಸಿರಿಯಾದ ಪಾಶ್ಚಿಮಾತ್ಯ ಬೆಂಬಲಿತ ಶಸ್ತ್ರಸಜ್ಜಿತ ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿರುವ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡಬೇಕು ಎನ್ನುವ ಈಜಿಪ್ಟಿನ ಅಧ್ಯಕ್ಷ ಮೊರ್ಸಿ ಅವರ ಸಲಹೆಯನ್ನು ಮತ್ತು ಆ ಮೂಲಕ ಅದಕ್ಕೆ ಇಷ್ಟವಾಗದ 'ಸರ್ಕಾರ ಬದಲಾವಣೆ'ಯ ಅಮೆರಿಕನ್ ಯೋಜನೆಯನ್ನೂ ಅಲಿಪ್ತ ಶೃಂಗಸಭೆ ತಿರಸ್ಕರಿಸಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಯ ನಿಲುವುಗಳನ್ನು ನೇರವಾಗಿ ವಿರೋಧಿಸುವ ಹಲವು ನಿರ್ಣಯಗಳನ್ನು ಶೃಂಗಸಭೆ ಅಂಗೀಕರಿಸಿತು. ಕ್ಯೂಬಾದ ದಿಗ್ಬಂಧನ ಖಂಡಿಸಿ, ಮಾಲ್ವಿನಾಸ್ (ಫಾಕ್‌ಲ್ಯಾಂಡ್ಸ್) ದ್ವೀಪಗಳ ಮೇಲೆ ಅರ್ಜೆಂಟಿನಾ ಸಾರ್ವಭೌಮತ್ವ ಎತ್ತಿ ಹಿಡಿಯುವ, ಪರಾಗುವೇ ಕ್ಷಿಪ್ರಕ್ರಾಂತಿ ವಿರೋಧಿಸಿ, ವಿಕಿಲೀಕ್ಸ್ ಸಂಸ್ಥಾಪಕ ಅಸಾಂಜ್‌ಗೆ ಇಕ್ವಡೋರ್ ರಾಜಕೀಯ ಆಶ್ರಯ ಕೊಡುವ ಬಗ್ಗೆ ಬ್ರಿಟಿಷ್ ಆಕ್ಷೇಪ ವಿರೋಧಿಸಿ, ಪ್ರಭುತ್ವ-ಪ್ರಾಯೋಜಿತ ಸೇರಿದಂತೆ ಎಲ್ಲಾ ವಿಧದ ಭಯೋತ್ಪಾದನೆಗಳನ್ನು ವಿರೋಧಿಸಿ – ಇತ್ಯಾದಿ ಶೃಂಗಸಭೆ ಅಂಗೀಕರಿಸಿದ ಸಾಮ್ರಾಜ್ಯಶಾಹಿ-ವಿರೋಧಿ ನಿರ್ಣಯಗಳು.

ವಿಶ್ವಸಂಸ್ಥೆಯನ್ನು ಹೆಚ್ಚು ಪ್ರಜಾಸತ್ತಾತ್ಮಕಗೊಳಿಸುವ, ಬಡದೇಶಗಳ ಹಿತಾಸಕ್ತಿ ಎತ್ತಿ ಹಿಡಿಯುವ ಮತ್ತು ಬರಿಯ ಪಾಶ್ಚಿಮಾತ್ಯ ದೇಶಗಳ ಅಸ್ತ್ರವಾಗದಂತೆ ತಡೆಯುವ ಸುಧಾರಣೆಗಳ ಬಗ್ಗೆ ಇರಾನಿನ ಸಲಹೆಗಳು ಶೃಂಗಸಭೆಯುದ್ದಕ್ಕೂ ಧ್ವನಿಸಿದವು. ಯಾರ ನಿರ್ದೇಶನಕ್ಕೂ ಒಳಗಾಗದ ನಿಜವಾದ ಅಂತರಾಷ್ಟ್ರೀಯ ಮುಕ್ತ ವ್ಯಾಪಾರಕ್ಕೆ ತಹತಹ ಸಹ ಶೃಂಗಸಭೆಯುದ್ದಕ್ಕೂ ವಾಣಿಜ್ಯ ಶಿಷ್ಟಮಂಡಲಗಳ ಹಲವು ಸಭೆಗಳಲ್ಲಿ ಕಂಡು ಬಂದವು.

ಅಮೆರಿಕನ್ ಸರ್ಕಾರ ತನ್ನ ಬದ್ಧ ವೈರಿ ಎಂದು ಪರಿಗಣಿಸುವ ವೆನೆಜುವೇಲಾದಲ್ಲಿ ಮುಂದಿನ ಶೃಂಗಸಭೆ ನಡೆಸುವುದು ಎಂಬ ತೀರ್ಮಾನ ಸಹ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಧಿಕ್ಕರಿಸುವಂತಹುದೇ.

ಪಾಶ್ಚಿಮಾತ್ಯ ಮಾಧ್ಯಮಗಳ 'ದಿವ್ಯಮೌನ'

ಅಲಿಪ್ತ ಶೃಂಗಸಭೆಯ ಸಾಮ್ರಾಜ್ಯಶಾಹಿ-ವಿರೋಧಿ ನಿರ್ಣಯಗಳು, ಅದರ ನಿರ್ಣಯ ತೆಗೆದುಕೊಳ್ಳುವ ಪ್ರಜಾಸತ್ತಾತ್ಮಕ ರೀತಿ, ಅಂತರ್ರಾಷ್ಟ್ರೀಯ ಅಭಿಪ್ರಾಯದ ಮುಖ್ಯಧಾರೆ ಮತ್ತು ಅಮೆರಿಕ-ಯುರೋಪ್ ಕೂಟದ ಅಭಿಪ್ರಾಯಗಳ ಮಧ್ಯೆ ಇರುವ ಕಂದಕ, ಇರಾನಿನ ರಾಜತಾಂತ್ರಿಕ ವಿಜಯ-ಇವೆಲ್ಲವುಗಳ ಬಗ್ಗೆ ಪಾಶ್ಚಿಮಾತ್ಯ ಮಾಧ್ಯಮಗಳು ದಿವ್ಯಮೌನ ವಹಿಸಿದವು. ಬದಲಾಗಿ ಅವು ಜಗತ್ತಿನ ಜನತೆಯನ್ನು ಬೇರೆಡೆಗೆ ಸೆಳೆಯುವ ಪ್ರಯತ್ನಗಳನ್ನು ನಡೆಸಿದವು.

ಸಿರಿಯಾದ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡಬೇಕು ಎನ್ನುವ ಈಜಿಪ್ಟಿನ ಅಧ್ಯಕ್ಷ ಮೊರ್ಸಿ ಅವರ ಸಲಹೆ ಬಗ್ಗೆ ಭಾರೀ ಪ್ರಚಾರ ಮಾಡಿ ಅದನ್ನು ಶೃಂಗಸಭೆ ಅಂಗೀಕರಿಸಿತೇನೋ ಎಂಬಂತೆ ಬಿಂಬಿಸಿದವು. ಆ ನಿರ್ಣಯವನ್ನು ಯಾವ ದೇಶವೂ ಚರ್ಚೆಗೂ ತೆಗೆದುಕೊಳ್ಳಲಿಲ್ಲ, ಶೃಂಗಸಭೆ ಅದನ್ನು ತಿರಸ್ಕರಿಸಿದವು. ಬದಲಾಗಿ, ಪಾಶ್ಚಿಮಾತ್ಯ ಮಿಲಿಟರಿ ಮತ್ತಿತರ ಮಧ್ಯಪ್ರವೇಶವನ್ನು ವಿರೋಧಿಸಿ ಒಂದು ದೇಶದ ಸಾರ್ವಭೌಮತೆ ಮತ್ತು ಸ್ವಯಂ-ನಿರ್ಧಾರದ ಹಕ್ಕನ್ನು ಎತ್ತಿ ಹಿಡಿಯುವ, ಸಿರಿಯಾಕ್ಕೆ ನೇರವಾಗಿ ಅನ್ವಯವಾಗುವ ನಿರ್ಣಯವನ್ನು ಶೃಂಗಸಭೆ ಅಂಗೀಕರಿಸಿತು ಎಂಬ ಬಗ್ಗೆ ದಿವ್ಯಮೌನ ವಹಿಸಿದವು.

ಶಾಂತಿಯುತ ಅಣುಶಕ್ತಿ ಕಾರ್ಯಕ್ರಮ ಮುಂದುವರೆಸಲು ಇರಾನಿನ ಹಕ್ಕನ್ನು ಎತ್ತಿಹಿಡಿದ ಶೃಂಗಸಭೆಯ ನಿರ್ಣಯ ಬಗ್ಗೆ ಅವು ದಿವ್ಯಮೌನ ತಳೆದವು. ಇರಾನ್ ತನ್ನ ಎಲ್ಲಾ ನಿರ್ದೇಶನಗಳನ್ನು ಪಾಲಿಸಿಲ್ಲ ಎಂಬ, ಅಮೆರಿಕನ್ ಬಾಲಬಡುಕ ಎಂದು ಕುಖ್ಯಾತನಾದ ಐ.ಎ.ಇ.ಎ. (ಅಂತರ್ರಾಷ್ಟ್ರೀಯ ಅಣುಶಕ್ತಿ ಪ್ರಾಧಿಕಾರ) ಮುಖ್ಯಸ್ಥನ ಹೇಳಿಕೆ ಬಗ್ಗೆ ಟಾಂ ಟಾಂ ಹೊಡೆದವು. ಶೃಂಗಸಭೆ ಅದನ್ನು ಪೂರ್ತಿಯಾಗಿ ನಿರ್ಲಕ್ಷ ಮಾಡಿ ಅದಕ್ಕೆ ತಕ್ಕ ಪಾಠ ಕಲಿಸಿತು.

ಮುಂದೇನು ?

ಇರಾನಿನ ಮೇಲೆ ಮಿಲಿಟರಿ ದಾಳಿ ಮಾಡುವ ಅಮೆರಿಕ-ಇಸ್ರೇಲಿ ದುಷ್ಟಕೂಟದ ಹವಣಿಕೆಗೆ ಅಂತರ್ರಾಷ್ಟ್ರೀಯ ಮುಖ್ಯಧಾರೆಯ ಮೂರನೇ ಎರಡು ಭಾಗದ ಬೆಂಬಲ ಇಲ್ಲ ಎಂದು ಶೃಂಗಸಭೆ ಪ್ರಬಲವಾಗಿ ತೋರಿಸಿದ್ದು ಅವರ ಆ ಯೋಜನೆಯನ್ನು ಕನಿಷ್ಟ ಮುಂದಕ್ಕೆ ಹಾಕಬಹುದು. ಇರಾನ್ ಅಲ್ಲ, ನಿಜವಾಗಿಯೂ ಇಸ್ರೇಲ್ 'ಅಸ್ಪೃಶ್ಯ' ಆಗಬೇಕಾದ ದೇಶ ಎಂದು ಅದರ ಒಂಟಿತನವನ್ನು ತಲೆಗೆ ಹೊಡೆದ ಹಾಗೆ ತೋರಿಸಿದೆ. ಆದರೆ ಇದು ಆ ದೇಶದ ಮನೋವ್ಯಾಧಿ-ಗ್ರಸ್ತ ರಾಜಕೀಯ ನಾಯಕತ್ವವನ್ನು ಹತಾಶೆಯ ಕ್ರಮವಾಗಿ ಯುದ್ಧದತ್ತ ತಳ್ಳಲೂ ಬಹುದು.

ಅಲಿಪ್ತ ಶೃಂಗಸಭೆಯ ನಿರ್ಣಯಗಳ ಜಾರಿ ಮತ್ತು ಪ್ರಮುಖ ಬೆಳವಣಿಗೆಗಳಿಗೆ ಸ್ಪಂದಿಸುವ ಒಂದು ಸಂಘಟನೆ ಮತ್ತು ಶಾಶ್ವತ ಸದಾ ಕಾರ್ಯನಿರತ ಸೆಕ್ರೆಟಾರಿಯಟ್ ಅಗತ್ಯ. ಇಲ್ಲದಿದ್ದರೆ ಶಾಂತಿಯುತ ಸಂವಾದದ ಉತ್ತಮ ಉದ್ದೇಶಗಳು ವಿಫಲವಾಗಬಹುದು. ಹಲವು ಸಂದರ್ಭಗಳಲ್ಲಿ ವಿಶ್ವಸಂಸ್ಥೆಯ ಹಲವು ಸಂಘಟನೆಗಳಲ್ಲಿ ಅಲಿಪ್ತ ದೇಶಗಳನ್ನು ತುರ್ತಾಗಿ ಅಣಿ ನೆರೆಸುವ ಅಗತ್ಯ ಇದೆ. ಅಮೆರಿಕ ತನ್ನ ದಿಗ್ಬಂಧನ, ಮಿಲಿಟರಿ ಮಧ್ಯಪ್ರವೇಶ ಮತ್ತು ಸರ್ಕಾರ ಬದಲಾವಣೆಗಳಿಗೆ ತನಗೆ ಬೇಕಾದ ನಿರ್ಣಯಗಳನ್ನು ವಿಶ್ವಸಂಸ್ಥೆಯ ಸಂಘಟನೆಗಳಲ್ಲಿ ಮಂಜೂರು ಮಾಡಿಸಿಕೊಳ್ಳುತ್ತದೆ. ಇದು ಸಾಧ್ಯವಾಗುವುದು ಹಲವು ದೇಶಗಳ ಮೇಲೆ ಲಂಚ, ಬ್ಲಾಕ್‌ಮೇಲ್, ಬೆದರಿಕೆ ಮತ್ತು ಭ್ರಷ್ಟಾಚಾರಗಳಿಂದ. ಈ ತಂತ್ರಗಳ ವಿರುದ್ಧ ಅಲಿಪ್ತ ದೇಶಗಳನ್ನು ಅಣಿ ನೆರೆಸುವ ಸಂಘಟಿತ ವ್ಯವಸ್ಥಿತ ಪ್ರಯತ್ನ ಬೇಕಾಗಿದೆ. ವಾಣಿಜ್ಯ, ಹೂಡಿಕೆ ಮತ್ತು ಸಾಂಸ್ಕೃತಿಕ ಬಹಿಷ್ಕಾರವನ್ನು ಇಸ್ರೇಲಿನ ಮೇಲೆ ಹಾಕುವ ಅಗತ್ಯ ಇದೆ.

ಇರಾನ್ ಸಾಮ್ರಾಜ್ಯಶಾಹಿ-ವಿರೋಧಿ ನೀತಿಯ ಆಧಾರದ ಮೇಲೆ ಬಹುತ್ವವನ್ನು ಮನ್ನಿಸುವ ಸಾಮೂಹಿಕ ನಾಯಕತ್ವ ನೀಡುವುದರ ಮೇಲೆ ಅಲಿಪ್ತ ಚಳುವಳಿಯ ಪುನರುಜ್ಜೀವನದ ಸಾಧ್ಯತೆ ಅವಲಂಬಿಸಿದೆ.

ನರೇಂದ್ರ ಮೋದಿ ಪರ ವಕಾಲತ್ತು....

ಪುಟ 3 ರಿಂದ

ವಕಾಲತ್ತುವಹಿಸಿಕೊಂಡು ದಯೆ ಎಂಬ ಧರ್ಮದ ಹತ್ಯೆಗೆ ಮುಂದಾಗಿದ್ದಾರೆ. 'ನರೇಂದ್ರ ಮೋದಿ ಕ್ರೂರಿ ಹೌದೋ ಅಲ್ಲವೋ ಎಂಬುದನ್ನು ಆ ರಾಜ್ಯದ ಜನರು ಕಳೆದ 10 ವರ್ಷಗಳಿಂದ ಪ್ರತಿ ಚುನಾವಣೆಯಲ್ಲಿ ತೀರ್ಮಾನ ಮಾಡುತ್ತಾ ಬಂದಿದ್ದಾರೆ. ಚುನಾವಣೆಯಿಂದ ಚುನಾವಣೆಗೆ ಹೆಚ್ಚೆಚ್ಚು ಸ್ಥಾನಗಳನ್ನು ಗೆಲ್ಲುತ್ತಾ ಬಂದಿರುವುದು ಏನನ್ನು ಸೂಚಿಸುತ್ತದೆ ಎಂಬುದನ್ನು ಬಲ್ಲವರು ಅರ್ಥ ಮಾಡಿಕೊಳ್ಳಬಲ್ಲರು'. ಎನ್ನುತ್ತಾರೆ ಸ್ವಾಮಿಗಳು. ಚುನಾವಣೆಯಲ್ಲಿ ಸ್ಥಾನಗಳನ್ನು ಹೇಗೆ ಗೆಲ್ಲಲಾಗುತ್ತದೆ ಎಂಬುದನ್ನು ಯಡಿಯೂರಪ್ಪನವರ ಬಿಜೆಪಿ ಕರ್ನಾಟಕದ ಜನತೆಗೆ ಸಾಕಷ್ಟು ಮನವರಿಕೆ ಮಾಡಿದೆ. ಯಡಿಯೂರಪ್ಪನವರು ಅದನ್ನು ನರೇಂದ್ರ ಮೋದಿ ಅವರಿಂದ ಕಲಿತ್ತದ್ದಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಮೋದಿ ಆಪ್ತರಿಗೆ ಸೇರಿರುವ ಅದಾನಿ ಎಂಟರ್ ಪ್ರೈಸಸ್ ಕಂಪನಿಗೆ ಅಕ್ರಮ ಗಣಿಗಾರಿಕೆ ಮತ್ತು ಅದಿರು ಸಾಗಣಿಕೆಗೆ ಅವಕಾಶ ಕಲ್ಪಿಸುವ ಮೂಲಕ ಯಡಿಯೂರಪ್ಪ ತನ್ನ ಗುರು ನರೇಂದ್ರ ಮೋದಿಗೆ ಗಣಿ ಕಪ್ಪ ಸಲ್ಲಿಸಲು ಮರೆಯಲಿಲ್ಲ.

ನರೇಂದ್ರ ಮೋದಿ ಗುಜರಾತ್‌ನಲ್ಲಿ 'ಸ್ವರ್ಗವನ್ನೇ ಇಳಿಸಿದ್ದಾರೆ' ಎಂಬ ಪ್ರಚಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ಗುಜರಾತಿಗೆ ಒಂದಿಷ್ಟು ಬಂಡವಾಳ ಹರಿದು ಬರುವಂತೆ ಮಾಡುವುದರಲ್ಲಿ ಮೋದಿ ಯಶಸ್ವಿಯಾಗಿರುವುದು ನಿಜ. ಆದರೆ ಅದೊಂದೇ 'ಅಭಿವೃದ್ಧಿಯ ಮಾದರಿ' ಆಗುವುದಿಲ್ಲ. ಗುಜರಾತಿನ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಕಾರ್ಪೊರೇಟ್ ಬಂಡವಾಳ ಲಗ್ಗೆ ಇಡಲು ಮುಕ್ತ ಅವಕಾಶ ಒದಗಿಸಿರುವುದೇ 'ಗುಜರಾತ್ ಮಾದರಿ'ಯ ಪ್ರಮುಖ ಲಕ್ಷಣವಾಗಿದೆ. ಇದರ ನೇರವಾದ ಪರಿಣಾಮ ರಾಜ್ಯದ ಕಾರ್ಮಿಕ ವರ್ಗದ ಮೇಲೆ ಆಗುತ್ತಿದೆ. 2011 ವಾರ್ಷಿಕ ಆರ್ಥಿಕ ಸಮೀಕ್ಷಾ ವರದಿಯ ಪ್ರಕಾರ ಭಾರತದ ಇತರ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ಕೈಗಾರಿಕಾ ಮುಷ್ಕರಗಳು ಗುಜರಾತ್‌ನಲ್ಲಿ ನಡೆದಿವೆ. ಇತ್ತೀಚೆಗೆ ನರೋಡಾದ ರಿಲಾಯನ್ಸ್ ಜವಳಿ ಕಾರ್ಖಾನೆಯಲ್ಲಿ ಮುಷ್ಕರ ನಡೆಯಿತು. ಇಲ್ಲಿ 1,100 ಕಾಯಂ ಕಾರ್ಮಿಕರಿದ್ದರೆ ಗುತ್ತಿಗೆ ಕಾರ್ಮಿಕರ ಸಂಖ್ಯೆ 4,400. ಇಲ್ಲಿ 20 ವರ್ಷಗಳಿಂದ ಕೆಲಸ ಮಾಡುತ್ತಿರುವ ಕಾಯಂ ಕಾರ್ಮಿಕರಿಗೆ ಸಿಗುವ ತಿಂಗಳ ವೇತನ ಕೇವಲ 5,000 ರಿಂದ 6,000ರೂ. ಗುತ್ತಿಗೆ ಕಾರ್ಮಿಕರ ದಿನಗೂಲಿ ರೂ 85 ರಂದ 100 ಮಾತ್ರ. ಕಂಪನಿಯ ಲಾಭ 10 ಪಟ್ಟು ಹೆಚ್ಚಾಗಿದ್ದರೂ ಕಾರ್ಮಿಕರಿಗೆ ಜೀವನಾವಶ್ಯಕ ವೇತನ ನೀಡುವಂತೆ ಮೋದಿ ಸರ್ಕಾರ ಮಧ್ಯಪ್ರವೇಶ ಮಾಡುವುದಿಲ್ಲ. ಪೊಲೀಸರನ್ನು ಕಳುಹಿಸಿ ಮುಷ್ಕರ ನಿರತ ಕಾರ್ಮಿಕರನ್ನು ಬಂಧಿಸಲಾಯಿತು ಮಾತ್ರವಲ್ಲ ಕಾನೂನನ್ನೂ ಮತ್ತು ದಮನಕಾರಿ ಕ್ರಮಗಳನ್ನು ಬಳಸಿ ಮುಷ್ಕರವನ್ನು ಮುರಿಯಲಾಯಿತು. ಕನಿಷ್ಠ ವೇತನ ಮತ್ತು ಇತರ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರುವ ಬದಲು ಮೋದಿ ಸರ್ಕಾರ ರಿಲಾಯೆನ್ಸ್ ಕುಟುಂಬದವರ ಜೊತೆ ಕೈ ಜೋಡಿಸಿತು. ಆದ್ದರಿಂದಲೇ ಸರಿಸುಮಾರು ಎಲ್ಲಾ ಕಾರ್ಪೊರೇಟ್ ಸಂಸ್ಥೆಗಳು ನರೇಂದ್ರ ಮೋದಿಯನ್ನು ಮುಂದಿನ ಪ್ರಧಾನ ಮಂತ್ರಿ ಎಂದು ಬಿಂಬಿಸಲು ಇಷ್ಟೊಂದು ಆತುರ ಪಡುತ್ತಿರುವುದು. ●

ಜಾನುವಾರು ಸಂರಕ್ಷಣಾ ಕಾಯ್ದೆ

ಪುಟ 3 ರಿಂದ

ಆ ಹೊರೆಯನ್ನು ರೈತರು, ಸಾಕಾಣಿಕೆದಾರರು ವಹಿಸಿಕೊಳ್ಳಬೇಕು. ಇಲ್ಲವಾದಲ್ಲಿ ಗೋ ಶಾಲೆಗಳಿಗೆ ಬಿಟ್ಟು ಅದರ ನಿರ್ವಹಣೆಗೆ ಹಣ ನೀಡಿ ಬರಬೇಕು! ವಾಸ್ತವ ಸ್ಥಿತಿಯೆಂದರೆ ಅಂತಹ ಗೋ ಶಾಲೆಗಳಲ್ಲಿ ದನಗಳನ್ನು 'ನೋಡುವ' ಇರಿಸಿರುವ ರೀತಿ ಎಂತಹವರ ಕರುಳು ಕಿತ್ತು ಬರುವಂತಹದ್ದಾಗಿದೆ. ಅವುಗಳ ಆಯುಷ್ಯವೂ ಅದರ ಮೂತ್ರ, ಮಾಂಸ, ಮೂಳೆ, ಚರ್ಮ ಇತ್ಯಾದಿಗಳಿಗೆ ಒದಗುವ 'ಮಾರುಕಟ್ಟೆಯ ಬೇಡಿಕೆ'ಯನ್ನು ಆಧರಿಸಿರುವುದನ್ನು ಹಲವು ಅಧ್ಯಯನಗಳು ಸಾರಿ ಹೇಳುತ್ತವೆ. ಈ ವ್ಯವಹಾರದಲ್ಲಿ ತೊಡಗಿರುವ ಬಹುತೇಕರೂ ಮಾರ್ವಾಡಿಗಳೇ!. ಇವರು ಬಹುತೇಕ ಬಿಜೆಪಿಯ ಸರ್ವ ರೀತಿಯ ಬೆಂಬಲಿಗರೇ.ಹೆಚ್ಚಿನ ನಯಾ ಪೈಸೆಯನ್ನು ಖರ್ಚು ಮಾಡದೇ ಗೋಶಾಲೆಗಳಿಗೆ ಬರುವ ದನಗಳಿಂದ ನೇರ ಲಾಭ ಪಡೆಯುವ ಗೋಭಕ್ತರೇ! ಬಿಜೆಪಿ ಆಡಳಿತದ ಎಲ್ಲಾ ರಾಜ್ಯಗಳ ಕಥೆ ಇದನ್ನು ಹೇಳುತ್ತವೆ. ಈಗ ಕರ್ನಾಟಕದ ಸರದಿ. ಈ ವ್ಯಾಪಾರೀ ಹಿತಾಸಕ್ತಿಯೂ ಸುಗ್ರೀವಾಜ್ಞೆಯ ಹಿಂದಿದೆ.

ಮತ್ತೊಂದು ಪ್ರಶ್ನೆಯೆಂದರೆ ಇವೆಲ್ಲದರ ಉಸ್ತುವಾರಿಯನ್ನು ನೋಡಿಕೊಳ್ಳಲು ಒಂದು ಆಯೋಗವನ್ನೇ ರಚಿಸುವುದು! ಅಂದರೆ ಹಿಂದುಳಿದ, ಮಹಿಳಾ ಮುಂ. ಆಯೋಗಗಳಂತೆ ಇದಕ್ಕೂ ಸಂವಿಧಾನಾತ್ಮಕ ಸ್ಥಾನ ನೀಡುವುದು! ಇದರ ನೇತೃತ್ವ, ಸದಸ್ಯರುಗಳ ನೇಮಕ ಕಲ್ಲಡ್ಕರಂತಹವರು, ಬಜರಂಗದಳದಂತಹ ಕಟ್ಟಾ ಸಂಘಪರಿವಾರಿಗಳಿಗೆ ಮೀಸಲು ಎಂಬುದನ್ನು ಬೇರೆ ಹೇಳಬೇಕಿಲ್ಲ. ಈಗಾಗಲೇ ಸಂಘದ ತುಂಡುಗಳು ತಮ್ಮನ್ನು ಆಯೋಗದೊಳಗೆ ಸೇರಿಸಲು ಒತ್ತಾಯಿಸತೊಡಗಿವೆ. ಒಂದು ಸಂವಿಧಾನಾತ್ಮಕ ಸಂಸ್ಥೆ ಮೂಲಕ ದಂಡಿಸುವ, ದಬ್ಬಾಳಿಕೆ ನಡೆಸುವ ಯೋಜನೆಯೇ ಇಲ್ಲಿದೆ. ಆದ್ದರಿಂದ ಇಂತಹ ಆಯೋಗದ ಅಗತ್ಯವೇ ಇಲ್ಲ.

ಈ ಕಾಯ್ದೆಯಡಿಯಲ್ಲಿ ಇಂತಹ ಒಂದು ಆಯೋಗದ ರಚನೆಗೆ ಮುಂದಾಗಿರುವ ಸರಕಾರದ ಕ್ರಮ, ಅದರ ಔಚಿತ್ಯ ಮತ್ತು ಅದಕ್ಕಿರುವ ಅಧಿಕಾರವನ್ನು ವಿರೋಧಪಕ್ಷದ ಮಾಜಿ ನಾಯಕರೂ, ಖ್ಯಾತ ಹಿರಿಯ ವಕೀಲರೂ ಆಗಿರುವ ಏ.ಕೆ.ಸುಬ್ಬಯ್ಯನವರು ತೀವ್ರವಾಗಿ ಪ್ರಶ್ನಿಸಿದ್ದಾರೆ. 1964 ರ ಕಾಯ್ದೆಯಂತೆ ಸರಕಾರ ಕೆಲವು ನಿಯಮಾವಳಿ ರೂಪಿಸಬಹುದೇ ಹೊರತು ಆಯೋಗವನ್ನಲ್ಲ. ಅಂತಹ ಅಧಿಕಾರ ಸರಕಾರಕ್ಕೆ ಇಲ್ಲವೇ ಇಲ್ಲ, ನಿಯಮಾವಳಿಯ ಮೂಲಕ ಆಯೋಗದ ರಚನೆಯನ್ನು ಕೈಗೆತ್ತಿಕೊಳ್ಳುವುದಾದರೂ ಹೇಗೆ ಎಂದು ತೀವ್ರವಾಗಿ ಆಕ್ಷೇಪಿಸುತ್ತಾರೆ. ಅದಕ್ಕೆ ಕಾಯ್ದೆಯ 18ನೇ ಪರಿಚ್ಛೇದ ಅವಕಾಶ ನೀಡುವುದಿಲ್ಲ ಎನ್ನುತ್ತಾರೆ ಅವರು.

ಬೇಡ ಅದಕ್ಕಿನ್ನು ಅವಕಾಶ ಬೇಡ

ದನಗಳನ್ನು ಉಳಿಸುವ, ಬೆಳೆಸುವ ವಿಚಾರ ಬೇರೆ. ಅದಕ್ಕೆ ಆಧುನಿಕ ವಿಜ್ಞಾನದಲ್ಲಿ ಹಲವಾರು ಮಾರ್ಗೋಪಾಯಗಳಿವೆ. ಆದರೆ ಅದನ್ನು ಒಂದು ಸಾಮಾಜಿಕ, ರಾಜಕೀಯ ಪ್ರಶ್ನೆಯಾಗಿಸಿ ತ್ವೇಷ, ತಲ್ಲಣ, ವಿಭಜನೆ ಹಿಂಸೆ, ಸೇಡು ಹುಟ್ಟು ಹಾಕುವುದೇ ಬೇರೆ. ಇಲ್ಲಿ ಮುಖ್ಯವಾದ ಪ್ರಶ್ನೆ ಈಗಾಗಲೇ ಇರುವ ಕಾನೂನನ್ನೇ ಬಳಸಿ ಈಗಾಗಲೇ ಬಹುತೇಕವಾಗಿ ಅಲ್ಪಸಂಖ್ಯಾತರ ಮೇಲೆ ರಾಜ್ಯದಲ್ಲಿ ಸಾಕಷ್ಟು ಧಾಳಿಗಳು ನಡದೇ ಇವೆ. ಜೀವ ತೆಗೆಯಲಾಗಿದೆ. ತರಲಿರುವ ಮಸೂದೆ, ತಿದ್ದುಪಡಿಗಳು ಅತ್ಯಂತ ಕ್ರೂರವಾದ ಹಲ್ಲು, ಉಗುರುಗಳಿಂದ ಇನ್ನಷ್ಟೂ ಬಲಗೊಳ್ಳಲಿದೆ. ಸದಾ ಭ್ರಷ್ಟಾಚಾರ, ಹಗರಣಗಳು, ಸಾರ್ವಜನಿಕ ಸಂಪತ್ತಿನ ಲೂಟಿ, ಅಧಿಕಾರ ದಾಹದ ಕಿತ್ತಾಟ, ಜನದ್ರೋಹಿ ದುರಾಡಳಿತಗಳಿಂದ ಜನರನ್ನೇ ಮರೆತ ಸರಕಾರ ಈ ಬಿಜೆಪಿ ಸರಕಾರ. ಜನತೆಯನ್ನೇ ಉಳಿಸಲಾಗದ ಈ ಸರಕಾರ ದನಗಳನ್ನು ಉಳಿಸುವ ಮಾತನ್ನಾಡುತ್ತಿದೆಯೆಂದರೆ? ಅಧಿಕಾರದ ದಾಹದಲ್ಲಿ ಜನತೆಯನ್ನು ಒಡೆದು, ದ್ವೇಷ ಬೆಳೆಸುವ, ಗೋ ಹತ್ಯೆ ನಿಷೇಧದ ಹೆಸರಿನಲ್ಲಿ ಮಾನವರ ಹತ್ಯೆಯನ್ನು ನಡೆಸುವ, ಅದನ್ನು ಸಮರ್ಥಿಸುವ ಇಂತಹ ಯಾವ ಕಾನೂನುಗಳಾದರೂ ಯಾಕೆ ಬೇಕು?. ಮಾನವ ಪರರು ಇದರ ವಿರುದ್ಧ ಧಿಕ್ಕಾರದ ದನಿ ಎತ್ತಬಾರದೇಕೆ? ಆಕ್ಷೇಪಗಳನ್ನು ಸಲ್ಲಿಸಬಾರದೇಕೆ? ವಿಶಾಲ ನೆಲೆಯಲ್ಲಿ ಹೋರಾಡಬಾರದೇಕೆ? ●

dyfi
ಅಖಿಲ ಭಾರತ
ಸಮ್ಮೇಳನ
11-15 ಸೆಪ್ಟೆಂಬರ್, 2012 ಬೆಂಗಳೂರು, ಕರ್ನಾಟಕ

ಡಿವೈಎಫ್ಐ ನೂತನ ಕೇಂದ್ರ ಸಮಿತಿ ಪದಾಧಿಕಾರಿಗಳು

ಎಂ.ಬಿ.ರಾಜೇಶ್, ಕೇರಳ ಸಂಸತ್ ಸದಸ್ಯರು	ಅಧ್ಯಕ್ಷರು
ಅಭಾಷ್ ರಾಯ್ ಚೌಧರಿ	ಉಪಾಧ್ಯಕ್ಷರು
ಎಂ. ಸ್ವರಾಜ್ – ಕೇರಳಾ	ಉಪಾಧ್ಯಕ್ಷರು
ತಪಸ್ ದತ್ತ – ತ್ರೀಪುರಾ	ಉಪಾಧ್ಯಕ್ಷರು
ಪ್ರೀತಿಶೇಖರ್ – ಮಹಾರಾಷ್ಟ್ರ	ಉಪಾಧ್ಯಕ್ಷರು
ವೇಲು ಮುರುಘನ್ ಜೆ.ಎನ್.	ಉಪಾಧ್ಯಕ್ಷರು
ಅಭಯ್ ಮುಖರ್ಜಿ– ಪ.ಬಂಗಾಳ	ಪ್ರಧಾನ ಕಾರ್ಯದರ್ಶಿ
ಟಿ.ವಿ. ರಾಜೇಶ್	ಜಂಟಿ ಕಾರ್ಯದರ್ಶಿ
ಜಮೀರ್ ಮುಲ್ಲಾ	ಜಂಟಿ ಕಾರ್ಯದರ್ಶಿ
ಅಮಲ್ ಚಕ್ರವರ್ತಿ. ಪ.ಬಂಗಾಳ	ಜಂಟಿ ಕಾರ್ಯದರ್ಶಿ
ಬಿ.ರಾಜಶೇಖರ ಮೂರ್ತಿ– ಕರ್ನಾಟಕ	ಜಂಟಿ ಕಾರ್ಯದರ್ಶಿ
ದಿನೇಶ್ ಸ್ವೇಚ್ – ಹರಿಯಾಣ	ಜಂಟಿ ಕಾರ್ಯದರ್ಶಿ

ಕಾರ್ಯದರ್ಶಿ ಮಂಡಳಿಯ ಸದಸ್ಯರು

ರಮಾದೇವಿ–ಮಣಿಪುರ
ಸಂಜಯ್ ಪಾಸ್ವನ್–ಜಾರ್ಖಂಡ್
ಪ್ರಣಬ್ ದೇವವರ್ಮ–ತ್ರಿಪುರ
ಪೈರುಲ್ ಇಸ್ಲಾಂ–ಆಸ್ಸಾಂ
ಎಸ್.ಎಲ್. ಭರತ್‌ರಾಜ್–ಕರ್ನಾಟಕ
ಪುರೇನ್ ಚಂದ್ –
ಭಾಸ್ಕರ್– ಆಂದ್ರ
ಶಾಮ್ ರತನ್ ಬಡಿಗ
ಕೆ.ಎಸ್.ಸುನಿಲ್ ಕುಮಾರ್
ರಾಜೀವ್ ಮಜುಂದಾರ್


ಎಂ.ಬಿ.ರಾಜೇಶ್


ಅಭಯ್ ಮುಖರ್ಜಿ



ಜಿ.ಎನ್.ನಾಗರಾಜ್ 7

ಮೊದಲ ಕ್ರಾಂತಿಕಾರಿ ಸೈನ್ಯದಲ್ಲಿ ಮಾವೋ

ಮಾವೋ ಚಾಂಗ್ ಶಾಕ್ಕೆ ಪ್ರವೇಶ ಮಾಡಿದ ಕೂಡಲೇ ಅವರು ಓದಿದ ಮೊದಲ ಪತ್ರಿಕೆಯೇ ಸನ್ ಯಾತ್ ಸೇನ್ ಹಾಗೂ ಹುನಾನ್ ರಾಜ್ಯದ ಹುವಾಂಗ್ ಶಿಂಗ್‌ರವರ ನೇತೃತ್ವದಲ್ಲಿದ್ದ ಚೀನಾ ಕ್ರಾಂತಿಕಾರಿ ಸಂಘದ ಪತ್ರಿಕೆ "ಜನಶಕ್ತಿ". ಈ ಪತ್ರಿಕೆಯ ಮೂಲಕ ಮಾವೋರವರಿಗೆ ಸನ್ ಯಾತ್ ಸೇನ್‌ರವರ ವಿಚಾರಗಳ ಹಾಗೂ ಕ್ರಾಂತಿಕಾರಿ ಸಂಘದ ಪರಿಚಯವಾಯಿತು.

ಜನಶಕ್ತಿ ಪತ್ರಿಕೆಯಲ್ಲಿ ಅವರು 1906ರ ಹುನಾನ್ ದಂಗೆಯ ವೀರ ಹುವಾಂಗ್ ಶಿಂಗ್‌ರವರ ನೇತೃತ್ವದಲ್ಲಿ ಹುನಾನ್ ನ ಪಕ್ಕದ ರಾಜ್ಯದ ರಾಜಧಾನಿ ಚೀನದ ಮೂರನೆಯ ದೊಡ್ಡ ನಗರವಾದ ಕ್ಯಾಂಟನ್ ನಲ್ಲಿ 1911ರ ಮಾರ್ಚ್‌ನಲ್ಲಿ ಒಂದು ದೊಡ್ಡ ದಂಗೆಯ ಸುದ್ದಿಯನ್ನು ಓದಿದರು. ಒಂದು ನೂರು ಜನ ಸಾವನ್ನು ಕೂಡ ಎದುರಿಸಲು ಸಿದ್ಧರಾದ ಸ್ವಯಂ ಸೇವಕರು ಕ್ಯಾಂಟನ್‌ನ ರಾಜ್ಯಪಾಲರ ಅರಮನೆಯ ಮೇಲೆ ಧಾಳಿ ನಡೆಸಿದರು. ಸೈನ್ಯದ ಜೊತೆಗಿನ ಕಾದಾಟದಲ್ಲಿ ಈ ಎಪ್ಪತ್ತೆರಡು ಜನ ಸ್ವಯಂಸೇವಕರು ಸಾವನ್ನಪ್ಪಿದರು. ಈ ಸುದ್ದಿ ಚೀನಾದ ಜನತೆಯ ಅದರಲ್ಲಿಯೂ ಯುವಕರ ಮೇಲೆ ತೀವ್ರ ಪರಿಣಾಮ ಉಂಟಾ ಮಾಡಿತು.

1905ರಿಂದ 1910ರವರೆಗೆ ದಕ್ಷಿಣ ಚೀನಾದಲ್ಲಿ ಇಂತಹ ಹತ್ತು ದಂಗೆಗಳು ನಡೆದವು. ಈ ದಂಗೆಗಳ ಜೊತೆಗೆ ಚೀನಾದ ರೈಲ್ವೆ ಮಾರ್ಗಗಳು ಹಾಗೂ ಗಣಿಗಳ ಮೇಲೆ ವಿದೇಶಿ ಕಂಪನಿಗಳ ಹಿಡಿತದ ವಿರುದ್ಧ ಜನತೆಯಲ್ಲಿ ಆಕ್ರೋಶ ಭುಗಿಲೆದ್ದಿತು. ಹೀಗೆ ಚೀನಾದಲ್ಲಿ ಕ್ರಾಂತಿಕಾರಿ ಪರಿಸ್ಥಿತಿ ಗರಿಗಟ್ಟಿಕೊಳ್ಳತೊಡಗಿತು. ಚೀನಾದ ಸಾಮ್ರಾಟರು ತಮ್ಮ ಹಳೆಯ ಪಾಳೆಯಗಾರಿ ರೀತಿಯ ಸೈನ್ಯದ ಜೊತೆಗೆ ಆರಂಭಿಸಿದ್ದ ಆಧುನಿಕ ಸೈನ್ಯದ ಅನೇಕ ತುಕಡಿಗಳ ಮೇಲೆ ಕ್ರಾಂತಿಕಾರಿ ವಿಚಾರಗಳ ಪ್ರಭಾವವುಂಟಾಗಿ ಅವರು ಕ್ರಾಂತಿಕಾರಿ ದಂಗೆಗಳ ಜೊತೆಗೆ ಸೇರಿಕೊಂಡರು.

ಹುನಾನ್‌ನ ದಕ್ಷಿಣದಲ್ಲಿದ್ದ ವುಹಾನ್ ಎಂಬ ನಗರದಲ್ಲಿ ನಡೆದ ದಂಗೆ ಕೊನೆಗೆ ಚೀನದ ಸಾಮ್ರಾಟರನ್ನು ಅಧಿಕಾರದಿಂದ ಕಿತ್ತೊಗೆಯುವುದರಲ್ಲಿ ಯಶಸ್ವಿಯಾಯಿತು. ಹುನಾನ್‌ನಲ್ಲಿ ಮಾರ್ಷಲ್ ಲಾ ಘೋಷಿಸಲಾಯಿತು. ರಾಜಕೀಯ ಪರಿಸ್ಥಿತಿಯಲ್ಲಿ ಅತ್ಯಂತ ವೇಗವಾದ ಬೆಳವಣಿಗೆಗಳುಂಟಾದವು. ಮಾವೋ ಓದುತ್ತಿದ್ದ



ಶಾಲೆಗೆ ಕ್ರಾಂತಿಕಾರಿಯೊಬ್ಬ ಭೇಟಿ ನೀಡಿ ಸ್ಫೂರ್ತಿದಾಯಕ ಭಾಷಣ ಮಾಡಿದ. ಈ ಭಾಷಣ ಕೇಳಿದ ಮಾವೋರವರು ತಮ್ಮ ಕೆಲವು ಮಿತ್ರರೊಡನೆ ದಂಗೆಕೋರ ಸೈನ್ಯವನ್ನು ಸೇರಲು ತೀರ್ಮಾನಿಸಿದರು. ವುಹಾನ್‌ಗೆ ಹೊರಡಲು ತಮ್ಮ ಸಹಪಾಠಿಗಳಿಂದ ಹಣ ಸಂಗ್ರಹಿಸಿದರು. ಆದರೆ ಅವರಿನ್ನೂ ಹೊರಡಲು ಬೇಕಾದ ಬಟ್ಟೆ ಬರೆಗಳನ್ನು ಹೊಂದಿಸಿಕೊಳ್ಳುತ್ತಿರುವಾಗಲೇ ಅವರು ಸೈನ್ಯದ ಕಾವಲುಗಾರರಿಂದ ತಡೆಯಲ್ಪಟ್ಟರು.

ಕಣ್ಮುಂದೆಯೇ ನಡೆದ ಕಾಳಗ

ಅಷ್ಟು ಹೊತ್ತಿಗಾಗಲೇ ಬಂಡಾಯದ ಸೈನ್ಯ ರೈಲ್ವೆ ಹಳಿಗಳ ಮೇಲಿಂದ ಚಾಂಗ್ ಶಾ ನಗರದ ಮೇಲೆ ಧಾಳಿ ಮಾಡಿತು. ಚಾಂಗ್ ಶಾದ ಕೋಟೆ ಗೋಡೆಗಳ ಹೊರಗೆ ಒಂದು ದೊಡ್ಡ ಯುದ್ಧವೇ ಆರಂಭವಾಯಿತು. ಅದೇ ಸಮಯದಲ್ಲಿ ನಗರದೊಳಗೆ ಕೂಲಿಕಾರರು ದಂಗೆಯೆದ್ದರು ಹಾಗೂ ನಗರದ ದ್ವಾರಗಳನ್ನು ವಶಪಡಿಸಿಕೊಂಡರು. ಹಾಗೆ ದಂಗೆಕೋರರು ವಶಪಡಿಸಿಕೊಂಡ ದ್ವಾರವೊಂದರಿಂದ ಮಾವೋ ನಗರದೊಳಕ್ಕೆ ನುಸುಳಿ ಬಂದರು. ಎತ್ತರದ ಪ್ರದೇಶವೊಂದರಲ್ಲಿ ನಿಂತು ನಡೆದ ಕಾಳಗವನ್ನು ವೀಕ್ಷಿಸಿದರು. ಬಂಡಾಯದ ಸೈನ್ಯ ಜಯ ಗಳಿಸಿ ಯುದ್ಧಕೋರ ಪಾಳೆಯಗಾರನ ಅರಮನೆಯ ಮೇಲೆ ಚೀನೀ ಬಾವುಟವನ್ನು ಹಾರಿಸಿತು. ಅದನ್ನು ಕಣ್ತುಂಬಾ ನೋಡಿದ ನಂತರ ಅವರ ಶಾಲೆಗೆ ಮರಳಿದರು.

ಬಂಡಾಯದ ಈ ವಿಜಯದ ನಂತರ ಚಾಂಗ್ ಶಾ ನಗರದಲ್ಲಿ ಬಂಡಾಯದ ಸರ್ಕಾರ ಸ್ಥಾಪನೆಯಾಯಿತು. ಹೊಸ ರಾಜ್ಯಪಾಲರು ಸಾಮಾನ್ಯ ಜನರಿಂದ ಬಂದವರಾಗಿದ್ದರು ಹಾಗೂ ದಮನಕ್ಕೊಳಗಾದ ಜನರ ಹಿತವನ್ನು ಸಂರಕ್ಷಿಸುವರಾಗಿದ್ದರು. ಇದನ್ನು ಹುನಾನ್‌ನ ಭೂ ಮಾಲಕರು ಹಾಗೂ ವರ್ತಕರು ಸಹಿಸಲಿಲ್ಲ. ಕೆಲವೇ ದಿನಗಳ ನಂತರ ಅವರ ಹೆಣಗಳು ಬೀದಿಯಲ್ಲಿ ಬಿದ್ದಿದ್ದವು. ಹುನಾನ್‌ನ ಭೂ ಮಾಲಕರು ಅಧಿಕಾರವನ್ನು ವಶಪಡಿಸಿಕೊಂಡಿದ್ದರು. ಜನರು ನೇರವಾಗಿ ಭಾಗವಹಿಸಿದ್ದ ಕ್ರಾಂತಿಕಾರಿ ಸಂಘರ್ಷವೊಂದನ್ನು ಹೇಗೆ ಅವರ ವಿರುದ್ಧವೇ ತಿರುಗಿಸಲಾಯಿತು ಎಂಬುದಕ್ಕೆ ಈ ಅನುಭವ ಮಾವೋರವರಿಗೆ ಪ್ರತ್ಯಕ್ಷ ಪಾಠವಾಯಿತು.

ಕೆಲವು ರಾಜ್ಯಗಳಲ್ಲಿ ರಿಪಬ್ಲಿಕ್‌ನ ಸೇನೆಗಳು ವಿಜಯ ಹೊಂದಿದ್ದರೂ ಚೀನಾದ ಸಾಮ್ರಾಟ ಇನ್ನೂ ಪದಚ್ಯುತನಾಗಿರಲಿಲ್ಲ. ಆದ್ದರಿಂದ ಹುನಾನ್‌ನಲ್ಲಿ ರಿಪಬ್ಲಿಕನ್ ಸೇನೆಗೆ ಸೈನಿಕರನ್ನು ಜಮಾವಣೆ ಮಾಡಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳದ್ದೇ ಒಂದು ಬೇರೆ ತುಕಡಿ ಕೂಡ ತಯಾರಾಗುತ್ತಿತ್ತು. ಸಾಮ್ರಾಟರನ್ನು ಪದಚ್ಯುತಗೊಳಿಸುವ ಯುದ್ಧದಲ್ಲಿ ತಾವೂ ಸೇರಲಿಚ್ಛಿಸಿದ ಮಾವೋರವರು ಶ್ರೀಮಂತ ಭೂಮಾಲಕ-



ವರ್ತಕ ಕುಟುಂಬಗಳ ಕುಡಿಗಳಾದ ಅಸ್ಪಷ್ಟ, ಗೊಂದಲದ ವಿಚಾರಗಳ ವಿದ್ಯಾರ್ಥಿ ಪಡೆಗಿಂತ ಕ್ರಮಬದ್ಧ ಸೈನ್ಯವನ್ನೇ ಸೇರಿದರು. ಈ ಸೈನ್ಯದಲ್ಲಿ ಅವರಿಗೆ ಅಮದಿನ ಚೀನಿ ಹಣದಲ್ಲಿ ಏಳು ರೂ.ಗಳನ್ನು ಸಂಬಳವಾಗಿ ಕೊಡಲಾಗುತ್ತಿತ್ತು. ಅದರಲ್ಲಿ ಎರಡು ರೂಗಳನ್ನು ಆಹಾರಕ್ಕಾಗಿ ವೆಚ್ಚ ಮಾಡಿದರೆ ಉಳಿದುದೆಲ್ಲ ಪತ್ರಿಕೆಗಳನ್ನು ಕೊಳ್ಳುವುದಕ್ಕೆ ಹೋಗುತ್ತಿತ್ತು. ಈ ಪತ್ರಿಕೆಗಳ ಮೂಲಕವೇ ಮಾವೋರವರಿಗೆ ಮೊತ್ತ ಮೊದಲ ಬಾರಿಗೆ ಸಮಾಜವಾದವೆಂಬ ಪದದ ಪರಿಚಯವಾಯಿತು. ಇದು ಮಾವೋರವರಲ್ಲಿ ಉತ್ಸಾಹವನ್ನು ಮೂಡಿಸಿತು.

ಆದರೆ ಚೀನಾದ ಗಣರಾಜ್ಯ ಸ್ಥಾಪನೆಯ ವಿಷಯದಲ್ಲಿ ಆದ ಗೊಂದಲಗಳು ಹಾಗೂ ಸನ್ ಯಾತ್ ಸೇನ್‌ರವರಿಗೂ ಮತ್ತು ಸಾಮ್ರಾಟನ ದಂಡಾಧಿಪತಿಗೂ ಆದ ಸಂಧಾನ ಸನ್ ಯಾತ್ ಸೇನ್ ರವರು ಅಧಿಕಾರ ತ್ಯಾಗ ಮಾಡಿದ್ದು ಹುನಾನ್ ಬರಖಾಸ್ತುಗೊಳಿಸಲು ಕಾರಣವಾಯಿತು. ಸುಮಾರು ಆರು ತಿಂಗಳ ಸೇನಾ ಸೇವೆಯ ನಂತರ ಮಾವೋ ಮತ್ತೆ ಶಿಕ್ಷಣದ ಅನ್ವೇಷಣೆಯಲ್ಲಿ ತೊಡಗಿದರು.

ಇಡೀ ಚೀನಾದಲ್ಲಿಯೇ ಮೇಲೆ ವಿವರಿಸಿದ ಹುನಾನ್‌ನ ಕ್ರಾಂತಿಕಾರಿ ಪಡೆಗಳ ವಿಜಯ. ನಂತರ ಭೂಮಾಲಕರ ಮೇಲಾಟದಂತಹ ಪರಿಸ್ಥಿತಿಯೇ ಉಂಟಾಯಿತು. ಚೀನಾ ಕ್ರಾಂತಿಕಾರಿ ಸಂಘದ ಬಂಡಾಯದ ಫಲವಾಗಿ ಸಾವಿರಾರು ವರ್ಷಗಳಿಂದ ನೆಲೆಗೊಂಡಿದ್ದ ಸಾಮ್ರಾಟರ ಆಡಳಿತ ಕಿತ್ತೊಗೆಯಲ್ಪಟ್ಟಿತು. ಸನ್ ಯಾತ್ ಸೇನ್ ಚೀನಾದ ಹೊಸ ಗಣ ರಾಜ್ಯದ ಹಂಗಾಮಿ ಅಧ್ಯಕ್ಷರಾಗಿ ವಿವಿಧ ರಾಜ್ಯಗಳ ಪ್ರತಿನಿಧಿಗಳ ಸಭೆಯಲ್ಲಿ 1911ರ ಡಿಸೆಂಬರ್ 10ರಂದು ಆಯ್ಕೆಯಾದರು. ಯಾವಾಗ ಸಾಮ್ರಾಟರಿಗೆ ಉಳಿಗಾಲವಿಲ್ಲ ಎಂಬುದು ಖಚಿತವಾಗುತ್ತಾ ಹೋಯಿತೋ ಆಗ ಚೀನಾದ ವಿವಿಧ ರಾಜ್ಯಗಳಲ್ಲಿದ್ದ, ತೈಪಿಂಗ್ ರೈತ ದಂಗೆಯನ್ನು ಅಡಗಿಸಿದ ನಂತರ ತಮ್ಮದೇ ಸ್ವತಂತ್ರ ಸೈನ್ಯವನ್ನು ಪಡೆದುಕೊಂಡು ಬಲಿಷ್ಟವಾಗಿದ್ದ ಯುದ್ಧಕೋರ ಪಾಳೆಯಗಾರರು, ಚೀನಾದಲ್ಲಿ ಸಾಮ್ರಾಟರ ಅಧಿಪತ್ಯದೊಳಗೇ ಆಧುನಿಕ ಸುಧಾರಣೆಗಳನ್ನು ತರಬಯಸುತ್ತಿದ್ದ ಬುದ್ಧಿಜೀವಿಗಳು ಇವರೆಲ್ಲ ತಮ್ಮ ರಾಜ್ಯಗಳಲ್ಲಿ ಸಾಮ್ರಾಟನಿಂದ ಬಿಡುಗಡೆಯನ್ನು ಘೋಷಿಸಿಕೊಂಡರು ಹಾಗೂ ಗಣರಾಜ್ಯಕ್ಕೆ ಬೆಂಬಲವನ್ನು ಸೂಚಿಸುತ್ತಲೇ ಅನೇಕ ರಾಜ್ಯಗಳಲ್ಲಿ ತಮ್ಮ ಹಿಡಿತವನ್ನು ಉಳಿಸಿಕೊಂಡರು. ಹೀಗಾಗಿ ಸನ್ ಯಾತ್ ಸೇನ್‌ರವರ ಅಧಿಕಾರ ಕೇವಲ ನಾಲ್ಕು ತಿಂಗಳ ಅಲ್ಪಾವಧಿಯದಾಯಿತು, ಸಾಮ್ರಾಟನೇ ರಿಪಬ್ಲಿಕನ್ ಬಂಡಾಯದ ಸೈನ್ಯವನ್ನು ಸದೆಬಡಿಯಲು ನೇಮಿಸಿಕೊಂಡ ಪಾಳೆಯಗಾರೀ ಯುದ್ಧಕೋರನೊಬ್ಬನೊಡನೆ ಸನ್ ಯಾತ್ ಸೇನ್ ಸಂಧಾನ ನಡೆಸಿ ಅವನಿಗೆ ಗಣರಾಜ್ಯದ ಅಧ್ಯಕ್ಷ ಪದವಿಯನ್ನು ಬಿಟ್ಟುಕೊಟ್ಟರು. ಸಾಮ್ರಾಟ ಕಿತ್ತೊಗೆಯಲ್ಪಟ್ಟಿದ್ದರಿಂದ ಹಾಗೂ ವಿದೇಶಿ ದಬ್ಬಾಳಿಕೆ, ಆರ್ಥಿಕ ಶೋಷಣೆಯ ವಿರುದ್ಧದ ಜನರ ಪ್ರತಿಭಟನೆಗಳಿಂದ ಗಾಬರಿಗೊಂಡಿದ್ದ ಬ್ರಿಟನ್, ಫ್ರೆಂಚ್, ಜರ್ಮನ್, ಜಪಾನೀ ಬಂಡವಾಳಗಾರರು ಈ ಯುದ್ಧಕೋರ ಪಾಳೆಯಗಾರನ ಪ್ರತಿಕ್ರಾಂತಿಗೆ ಕುಮ್ಮಕ್ಕು ನೀಡಿದರು.

JANASHAKTHI KANNADA VARA PATRIKE: Printed by **G.N.NAGARAJ**, No.12, 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor: **S.Y.GURUSHANTH**